## ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

# ಕೈಗಾರಿಕಾ ನೀತಿ

# 2014-19



# ಪರಿವಿಡಿ


| | ವಿವರಗಳು | ಪುಟ ಸಂಖ್ಯೆ |
|---|---|---|
| 1 | ಸರ್ಕಾರಿ ಆದೇಶ ಸಂಖ್ಯೆ: ಸಿಐ 58 ಎಸ್‌ಪಿಐ 2013, ಬೆಂಗಳೂರು, ದಿನಾಂಕ: 01.10.2014 ಸಂಬಂಧಿಸಿದ ವಿವರಣಾ ಪಟ್ಟಿ(Annexe) | 1 |
| 2 | ಪ್ರಸ್ತಾವನೆ | 1 |
| 3. | ದೃಷ್ಟಿಕೋನ | 8 |
| 4. | ಧ್ಯೇಯ | 8 |
| 5. | ಉದ್ದೇಶಗಳು | 8 |
| 6. | ಕಾರ್ಯತಂತ್ರಗಳು | 8 |
| 7. | ನೀತಿಯ ಕ್ರಮಗಳು | 9 |
| 8. | **ಅನುಬಂಧ - 1** – ಪ್ರೋತ್ಸಾಹ ಮತ್ತು ರಿಯಾಯಿತಿಗಳಿಗೆ ಅರ್ಹವಾದ ಸೇವಾ ಉದ್ಯಮಗಳ ಪಟ್ಟಿ | 64 |
| 9. | **ಅನುಬಂಧ - 2** – ಪ್ರೋತ್ಸಾಹನೆ ಮತ್ತು ರಿಯಾಯಿತಿಗಳಿಗೆ ಅರ್ಹವಲ್ಲದ ಚಟುವಟಿಕೆಗಳ ಪಟ್ಟಿ | 65 |
| 10. | **ಅನುಬಂಧ** - 3ಎ – ರಿಯಾಯಿತಿ ಮತ್ತು ಪ್ರೋತ್ಸಾಹನೆಗಳ ಮಂಜೂರಾತಿಯ ನಿಯಮಗಳು ಮತ್ತು ನಿಂಬಂಧನೆಗಳು | 66 |
| 11. | **ಅನುಬಂಧ** - 3ಬಿ – ಖಾಸಗಿ ಕೈಗಾರಿಕಾ ಪ್ರದೇಶ/ವಸಾಹತುಗಳಿಗೆ ಸಂಬಂಧಿಸಿದಂತೆ ಷರತ್ತು ಮತ್ತು ನಿಬಂಧನೆಗಳು | 71 |
| 12. | **ಅನುಬಂಧ - 4** – ರಫ್ತು ಉತ್ತೇಜನಾ ಪ್ರೋತ್ಸಾಹಗಳು | 72 |
| 13. | **ಅನುಬಂಧ** - 5 – ವ್ಯಾಖ್ಯಾನಗಳು | 79 |
| 14. | **ಅನುಬಂಧ** - 6 – ಮುಖ್ಯ ಸಂಪರ್ಕ ವಿಳಾಸಗಳು | 82 |



## ಮುನ್ನುಡಿ

ಕರ್ನಾಟಕ ಕೈಗಾರಿಕಾ ನೀತಿ 2014-19ನ್ನು ಪ್ರಸ್ತುತಪಡಿಸಲು ಹರ್ಷಿಸುತ್ತೇನೆ. ಸರ್ವರನ್ನು ಒಳಗೊಂಡ, ಸುಸ್ಥಿರವಾದ ಹಾಗೂ ಸಮತೋಲನವಾದ ಕೈಗಾರಿಕಾ ಅಭಿವೃದ್ಧಿಯ ಮೂಲಕ ಅತ್ಯಧಿಕ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದೇ ಈ ನೀತಿಯ ದೃಷ್ಟಿಕೋನವಾಗಿದೆ.

ಈ ನೀತಿಯ ಅವಧಿ ಮುಕ್ತಾಯವಾಗುವುದರೊಳಗೆ ಕೈಗಾರಿಕಾ ಬೆಳವಣಿಗೆಯ ವಾರ್ಷಿಕ ದರವನ್ನು ಶೇ.12ರಷ್ಟು ಸಾಧಿಸುವುದು ಮತ್ತು ರಾಜ್ಯದ ಜಿ.ಡಿ.ಪಿ.ಗೆ ಉತ್ಪಾದನಾ ವಲಯದ ಕೊಡುಗೆಯನ್ನು ಪ್ರಸಕ್ತ ಇರುವ ಶೇ.16.87ರಿಂದ ಶೇ.20ಕ್ಕೆ ಹೆಚ್ಚಿಸುವುದು ಹಾಗೂ ರಾಜ್ಯದ ಮೂಲೆ ಮೂಲೆಗಳಿಗೂ ಕೈಗಾರಿಕಾ ಬೆಳವಣಿಗೆಯನ್ನು ವಿಸ್ತರಿಸುವ ಗುರಿಯನ್ನು ಈ ನೀತಿ ಇರಿಸಿಕೊಂಡಿದೆ.

ಸುಸ್ಥಿರವಾದ ಅಭಿವೃದ್ಧಿಯನ್ನು ಸಾಧಿಸುವುದು ಈ ನೀತಿಯ ಮೂಲ ಉದ್ದೇಶವಾಗಿದ್ದು, ಉತ್ಪಾದನಾ ವಲಯಕ್ಕೆ ವಿಶೇಷ ಆದ್ಯತೆ, ಉದ್ಯೋಗಾವಕಾಶಗಳ ಸೃಷ್ಟಿ ಮತ್ತು ಕರ್ನಾಟಕದಲ್ಲಿ ಸದೃಢವಾದ ಬುನಾದಿಯನ್ನು ಹೊಂದಿರುವ ಎಂ.ಎಸ್.ಎಂ.ಇ.ಗಳ ಪ್ರವರ್ಧನೆಗೆ ನೀತಿಯಲ್ಲಿ ಒತ್ತಾಸೆ ನೀಡಲಾಗಿದೆ.

ಪರಿಶಿಷ್ಟ ಜಾತಿ/ಪಂಗಡ, ಅಲ್ಪಸಂಖ್ಯಾತರು, ಹಿಂದುಳಿದ ಜನಾಂಗ, ಮಾಜಿ ಸೈನಿಕರು ಮತ್ತು ಮಹಿಳಾ ಉದ್ಯಮಶೀಲರಿಗೆ ಹೆಚ್ಚಿನ ಗಮನವನ್ನು ನೀಡಲಾಗಿದ್ದು ಅವರು ಸ್ವ-ಉದ್ಯಮಗಳನ್ನು ಆರಂಭಿಸಲು ಉತ್ತೇಜಿಸುವ ಹಾಗೂ ಅವರಲ್ಲಿ ಸಾಮರ್ಥ್ಯ ವರ್ಧನೆಯ ಮೂಲಕ ಸಂಪೂರ್ಣವಾದ ಹಾಗೂ ಸುಸ್ಥಿರವಾದ ಅಭಿವೃದ್ಧಿಯನ್ನು ಸಾಧಿಸಲಾಗುವುದು.

ಹೈದರಾಬಾದ್-ಕರ್ನಾಟಕ ಪ್ರಾಂತ್ಯ ಹಾಗೂ ಕೈಗಾರಿಕೆಗಳಲ್ಲಿ ಹಿಂದುಳಿದ ತಾಲೂಕುಗಳಲ್ಲಿ ಆರ್ಥಿಕ ಬೆಂಬಲದ ಸಮಾನ ಹಂಚಿಕೆಯ ಮೂಲಕ ಭದ್ರವಾದ ಕೈಗಾರಿಕಾ ಬುನಾದಿಯನ್ನು ನಿರ್ಮಿಸಿ, ತನ್ಮೂಲಕ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸುವ ದೃಷ್ಟಿಯಿಂದ, ಇಂತಹ ತಾಲೂಕುಗಳಿಗೆ ಗಣನೀಯ ಗಮನವನ್ನು ನೀಡಿರುವುದು ಸಂತಸದ ವಿಚಾರವಾಗಿದೆ.

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಮತ್ತು ಸರ್ಕಾರದ ಇತರ ಸಂಸ್ಥೆಗಳಿಗೆ ಹಾಗೂ ಉದ್ಯಮ ಪಾಲುದಾರರಿಗೆ, ವಿಶೇಷವಾಗಿ ಮ್ಯಾನ್ಯುಫ್ಯಾಕ್ಚರಿಂಗ್ ಟಾಸ್ಕ್ ಫೋರ್ಸ್‌ನ ಸದಸ್ಯರಿಗೆ, ಈ ನೀತಿಯನ್ನು ರೂಪಿಸುವಲ್ಲಿ ಅವರ ಪಾಲ್ಗೊಳ್ಳುವಿಕೆ, ಬೆಂಬಲ ಮತ್ತು ಬದ್ಧತೆಗಾಗಿ ನನ್ನ ಕೃತಜ್ಞತೆಗಳು.

ನಮ್ಮ ಕೈಗಾರಿಕಾ ನೀತಿಯ ಪ್ರಯೋಜನವನ್ನು ಪಡೆದು ಕರ್ನಾಟಕದಲ್ಲಿ ಬಂಡವಾಳ ಹೂಡಿ, ನಮ್ಮ ಬೆಳವಣಿಗೆಯಲ್ಲಿ ಪಾಲುದಾರರಾಗುವಂತೆ ಉದ್ಯಮರಂಗದ ನೇತಾರರು, ಬೃಹತ್, ಮಧ್ಯಮ, ಸಣ್ಣ, ಅತಿ ಸಣ್ಣ ಮತ್ತು ಎಲ್ಲ ಉದ್ಯಮಶೀಲರನ್ನು ಸ್ವಾಗತಿಸುತ್ತೇನೆ.

ದಿನಾಂಕ : 7.10.2014
ಬೆಂಗಳೂರು

ಸಿದ್ಧರಾಮಯ್ಯ
ಗೌರವಾನ್ವಿತ ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ



## ಸಂದೇಶ

ಕರ್ನಾಟಕವು ಸದಾ ಕೈಗಾರಿಕೀಕರಣದಲ್ಲಿ ಪ್ರಗತಿಪರ ದೃಷ್ಟಿಯುಳ್ಳ ರಾಜ್ಯವಾಗಿದೆ. ನಾವು ದೇಶದಲ್ಲಿ ಕೈಗಾರಿಕೀಕರಣಗೊಂಡ ಮೊಟ್ಟ ಮೊದಲ ರಾಜ್ಯಗಳಲ್ಲಿ ಒಂದಾಗಿದ್ದು, ಇಂದು ಕರ್ನಾಟಕವು ಮಾಹಿತಿ ತಂತ್ರಜ್ಞಾನ, ಸಾಫ್ಟ್‌ವೇರ್ ಅಭಿವೃದ್ಧಿ ಮತ್ತು ಬಯೋ ಟೆಕ್ನಾಲಜಿ ಕ್ಷೇತ್ರದಲ್ಲಿ ಜಗತ್ತಿನಲ್ಲೇ ಅತ್ಯಂತ ಖ್ಯಾತಿ ಪಡೆದ ರಾಜ್ಯವಾಗಿದೆ.  ಇದರ ಜೊತೆಗೆ, ಉತ್ಪಾದನಾ ಉದ್ಯಮಗಳಲ್ಲೂ ನಾವು ಗಮನಾರ್ಹ ಬಂಡವಾಳವನ್ನು ಆಕರ್ಷಿಸಿರುತ್ತೇವೆ.

ಪ್ರಸಕ್ತ ಈ ನೀತಿಯು ಐದು ಲಕ್ಷ ರೂ.ಗಳಿಗಿಂತಲೂ ಜಾಸ್ತಿ ಬಂಡವಾಳವನ್ನು ಆಕರ್ಷಿಸುವ ಹಾಗು 15 ಲಕ್ಷಕ್ಕಿಂತಲೂ ಹೆಚ್ಚು ಜನರಿಗೆ, ಮೂಲತ ಉತ್ಪಾದನಾ ಕ್ಷೇತ್ರದಲ್ಲಿ ಉದ್ಯೋಗಾವಕಾಶ ನೀಡುವ ಗುರಿಯನ್ನು ಇರಿಸಿಕೊಂಡಿದೆ. ಈ ನೀತಿಯು ಎಡರು-ತೊಡರುಗಳನ್ನು ಮತ್ತು ಸಮಸ್ಯೆಗಳನ್ನು ನಿವಾರಿಸುವ ಮೂಲಕ ಸೂಕ್ತವಾದ ಬಂಡವಾಳವನ್ನು ಆಕರ್ಷಿಸುವ ಗುರಿಯನ್ನೂ ಹೊಂದಿದೆ.  ಒಟ್ಟಂದದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ 'ರೆಡ್ ಟೇಪ್' ನ್ನು 'ರೆಡ್ ಕಾರ್ಪೆಟ್' ಆಗಿ ಪರಿವರ್ತಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗುತ್ತಿದೆ.

ರಾಜ್ಯವು ದೇಶದಾದ್ಯಂತ ಹಾಗು ವಿದೇಶಗಳಿಂದ ಬಂದಿರುವ ವೈವಿಧ್ಯಮಯ ಸಾಂಸ್ಕೃತಿಕ ಸಹಯೋಗದ ಜನರ ಚಟುವಟಿಕೆಗಳ ತಾಣವೆಂದು ಪರಿಗಣಿಸಲ್ಪಟ್ಟಿದೆ.  ಈ ನೂತನ ಕೈಗಾರಿಕಾ ನೀತಿಯು ಹೆಚ್ಚಿನ ಮೌಲ್ಯ ಮತ್ತು ಕೈಗಾರಿಕಾ ವೈವಿಧ್ಯತೆಯನ್ನು ಉತ್ತೇಜಿಸಿ, ತನ್ಮೂಲಕ ಹಲವು ಸಂಸ್ಕೃತಿ ಹಾಗು ಜನ ಸಮುದಾಯದ ಉತ್ಪಾದಕತೆಯನ್ನು ಅಧಿಕಗೊಳಿಸುತ್ತದೆ ಎಂದು ನಂಬಲಾಗಿದೆ. ಪರಿಸರ ಸಂರಕ್ಷಣೆಗೆ ಸರಿಸಮಾನವಾದ ಕಾಳಜಿಯ ಜೊತೆಗೆ ಉದ್ಯಮ-ಸ್ನೇಹಿ ರಾಜ್ಯವಾಗಿ ನಾವು ಉನ್ನತ ಸ್ಥಾನವನ್ನು ಕಾಪಾಡಿಕೊಳ್ಳಲು ಶಕ್ತರಾಗುತ್ತೇವೆ ಎಂದು ನನಗೆ ವಿಶ್ವಾಸವಿದೆ.

ದಿನಾಂಕ : 14.10.2014
ಬೆಂಗಳೂರು

**ಕೌಶಿಕ್ ಮುಖರ್ಜಿ**, ಭಾ.ಆ.ಸೇ.
ಮುಖ್ಯ ಕಾರ್ಯದರ್ಶಿ,
ಕರ್ನಾಟಕ ಸರ್ಕಾರ



## ಅಪರ ಮುಖ್ಯ ಕಾರ್ಯದರ್ಶಿಯವರ ಲೇಖನಿಯಿಂದ ...

ಕೈಗಾರಿಕಾ ನೀತಿ 2014-19, ಕೈಗಾರಿಕೆಗಳಿಗೆ ಅವಶ್ಯಕವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಿ, ಆಕರ್ಷಕವಾದ ಉತ್ತೇಜನ ಮತ್ತು ರಿಯಾಯಿತಿಗಳನ್ನು ನೀಡಿ, ಆಡಳಿತಾತ್ಮಕ ಸುಧಾರಣೆಯೊಂದಿಗೆ ಹೆಚ್ಚಿನ ಸವಲತ್ತುಗಳನ್ನು ನೀಡುವುದರ ಮೂಲಕ ರಾಜ್ಯದಲ್ಲಿ ಉದ್ಯಮ-ವ್ಯವಹಾರಗಳನ್ನು ಸರಾಗವಾಗಿ ಕೈಗೊಳ್ಳುವ ಪರಿಸರವನ್ನು ಸೃಷ್ಟಿ ಮಾಡಿ, ಕರ್ನಾಟಕವನ್ನು ಅಗ್ರಗಣ್ಯ ರಾಜ್ಯವನ್ನಾಗಿ ಮಾಡುವ ಗುರಿಯನ್ನು ಹೊಂದಿದೆ.

ಸಮಗ್ರವಾದ ಸವಲತ್ತುಗಳೊಂದಿಗೆ, ಗುಣಮಟ್ಟದ ಮೂಲಭೂತ ಸೌಲಭ್ಯದ ಸೃಷ್ಟಿ, ಸಾಮರ್ಥ್ಯ ವರ್ಧನೆ ಮತ್ತು ಕೌಶಲ್ಯತೆಯ ಸುಧಾರಣೆಯ ಮೂಲಕ ಮಾನವ ಸಂಪನ್ಮೂಲದ ಅಭಿವೃದ್ಧಿ ಹಾಗೂ ಕೈಗಾರಿಕೀಕರಣದ ಫಲ ಬೆಂಗಳೂರು ಕೇಂದ್ರೀಕೃತವಾಗದೆ ರಾಜ್ಯದ ಮೂಲೆ ಮೂಲೆಗಳಿಗೂ ಪ್ರಸರಿಸುವಂತೆ ಮಾಡುವುದರ ಮೂಲಕ ಕೈಗಾರಿಕಾ ನೀತಿ ತನ್ನ ಉದ್ದೇಶ ಸಾಧನೆಗಾಗಿ ಶ್ರಮಿಸಲಿದೆ.

ಮಹಿಳೆಯರು, ಪರಿಶಿಷ್ಟ ಜಾತಿ/ಪಂಗಡ ಮತ್ತು ಸಮಾಜದ ಇತರ ಹಿಂದುಳಿದ ವರ್ಗದವರನ್ನು ಉತ್ತೇಜಿಸುವುದರ ಮೂಲಕ ಆರ್ಥಿಕ ಅಭಿವೃದ್ಧಿಯ ಲಾಭ ಸಮಾಜದ ಎಲ್ಲಾ ವರ್ಗಗಳಿಗೆ ತಲುಪಿಸುವ ಯತ್ನವನ್ನು ಈ ನೀತಿಯ ಪ್ರಾಶಸ್ತ್ಯ ಕ್ಷೇತ್ರಗಳು ಮತ್ತು ಕಾರ್ಯತಂತ್ರಗಳ ಮೂಲಕ ಪ್ರಯತ್ನಿಸಲಾಗಿದೆ.

ಉದ್ಯೋಗ ವ್ಯವಹಾರಗಳು ಸುಲಭದಲ್ಲಿ ಸಾಧ್ಯವಾಗುವಂತೆ ಆನ್‌ಲೈನ್ ಮೂಲಕ ಕ್ರೋಢೀಕೃತ ಅರ್ಜಿ ನಮೂನೆಯನ್ನು ಸಲ್ಲಿಸುವುದು ಮತ್ತು ಅನುಮೋದನೆಯನ್ನು ನೀಡುವುದು, ಸಂಪನ್ಮೂಲಗಳ ಗರಿಷ್ಠ ಬಳಕೆ, ಕೈಗಾರಿಕಾ ಪ್ರದೇಶಗಳಲ್ಲಿ ಬಹು ಅಂತಸ್ತು ಸೌಲಭ್ಯದ ಅಭಿವೃದ್ಧಿಗೆ ಉತ್ತೇಜನ, ವಿರಳವಾದ ಕೈಗಾರಿಕಾ ಭೂಮಿಯ ರಕ್ಷಣೆ, ಪರಿವೀಕ್ಷಣೆಯನ್ನು ಕಡಿತಗೊಳಿಸುವುದು, ಸಲ್ಲಿಸಬೇಕಾದ ಮಾಹಿತಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಅವಕಾಶ ಮೊದಲಾದ ಕ್ರಮಗಳಿಂದ ಬಂಡವಾಳ ಹೂಡಿಕೆದಾರರ ಮನೋಸ್ಥೈರ್ಯವನ್ನು ಹೆಚ್ಚಿಸುವುದಕ್ಕಾಗಿ, ವಿವಿಧ ಪ್ರಮುಖ ಇಲಾಖೆಗಳ ನಿಯಮಾವಳಿಗಳಲ್ಲಿ ಹಲವಾರು ಸುಧಾರಣೆಗಳನ್ನು ಪ್ರಸ್ತಾಪಿಸಲಾಗಿದೆ.

ಉತ್ಪಾದನಾ ಕ್ಷೇತ್ರದ ಎಂ.ಎಸ್.ಎಂ.ಇ.ಗಳಿಗೆ ಮಾರುಕಟ್ಟೆ ಬೆಂಬಲ ಹಾಗೂ ಅಂತರಾಷ್ಟ್ರೀಯ ವ್ಯವಹಾರದಲ್ಲಿ ಸ್ಪರ್ಧಾ ಸಾಮರ್ಥ್ಯವನ್ನು ಹೆಚ್ಚಿಸುವ ಒತ್ತಾಸೆ, ಮೊದಲಾದ ವಿವಿಧ ಉಪಕ್ರಮಗಳ ಮೂಲಕ ಎಂ.ಎಸ್.ಎಂ.ಇ. ವಲಯಕ್ಕೆ ವಿಶೇಷ ಗಮನವನ್ನು ನೀಡಲಾಗಿದೆ.

ಈ ಕೈಗಾರಿಕಾ ನೀತಿಯನ್ನು ಅನುಷ್ಠಾನಗೊಳಿಸಲು ಅಗತ್ಯವುಳ್ಳ ಎಲ್ಲಾ ಸವಲತ್ತುಗಳನ್ನು ಒದಗಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗುವುದು ಹಾಗೂ ಕರ್ನಾಟಕವನ್ನು ಉದ್ಯಮಗಳಿಗೆ ಪ್ರಾಶಸ್ತ್ಯದ ತಾಣವನ್ನಾಗಿ ಮಾಡುವ ಪ್ರಯತ್ನದಲ್ಲಿ ನಮ್ಮ ಜೊತೆ ಕೈ ಜೋಡಿಸಬೇಕೆಂದು ಎಲ್ಲಾ ಭಾಗೀದಾರರಲ್ಲಿ ನಾನು ವಿನಂತಿಸುತ್ತೇನೆ.

(ಕೆ. ರತ್ನ ಪ್ರಭಾ, ಭಾ.ಆ.ಸೇ.)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ದಿನಾಂಕ : 01.10.2014
ಬೆಂಗಳೂರು

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:ಕರ್ನಾಟಕ ಕೈಗಾರಿಕಾ ನೀತಿ 2014–19 ಕುರಿತು.

ಓದಲಾಗಿದೆ: ಸರ್ಕಾರಿ ಆದೇಶ ಸಂಖ್ಯೆ: ಸಿಐ 233 ಎಸ್‌ಪಿಐ 2008, ದಿನಾಂಕ: 28.02.2009.

**ಪ್ರಸ್ತಾವನೆ:**

ಕೈಗಾರಿಕಾ ಬೆಳವಣಿಗೆಯು ಬಡತನವನ್ನು ನಿರ್ಮೂಲನೆ ಮಾಡಿ, ನಿರುದ್ಯೋಗವನ್ನು ನಿವಾರಣೆ ಮಾಡಲು ಒಂದು ಅತ್ಯುತ್ತಮ ಸಾಧನವಾಗಿದೆ ಎಂದು ರಾಜ್ಯ ಸರ್ಕಾರ ಪರಿಗಣಿಸುತ್ತದೆ. ಕೈಗಾರಿಕೆ, ವ್ಯಾಪಾರ ಹಾಗೂ ಸೇವಾ ವಲಯಗಳ ಅಭಿವೃದ್ಧಿಯು ಅಧಿಕ ಬಂಡವಾಳ ಹೂಡಿಕೆಯನ್ನು ಉತ್ತೇಜಿಸುತ್ತದೆ, ತಲಾವಾರು ವರಮಾನ ಮಟ್ಟವನ್ನು ಸುಧಾರಿಸುತ್ತದೆ, ಹೆಚ್ಚುವರಿ ಕಾರ್ಮಿಕ ಶಕ್ತಿಯನ್ನು ಉಪಯೋಗಿಸಿಕೊಳ್ಳುತ್ತದೆ. ಈ ಲಾಭಗಳನ್ನು ಉಪಯೋಗಿಸಿ, ಸಾಮಾಜಿಕ–ಆರ್ಥಿಕ ಬದಲಾವಣೆಗಳನ್ನು ತ್ವರಿತಗೊಳಿಸಲು, ರಾಜ್ಯವು ಕೈಗಾರಿಕಾಭಿವೃದ್ಧಿಗೆ ಪರಮ ಆದ್ಯತೆ ನೀಡುತ್ತದೆ. ಈ ಪ್ರಕ್ರಿಯೆಯಲ್ಲಿ ಎಲ್ಲಾ ಜನ ಸಮುದಾಯಗಳನ್ನು ಒಳಗೊಳ್ಳುವ ಬೆಳವಣಿಗೆ, ಸಮತೋಲನದ ಕೈಗಾರಿಕೀಕರಣ, ಹಾಗೂ ಜನ ಸಮುದಾಯದ ಎಲ್ಲ ವಿಭಾಗಗಳು ಮತ್ತು ವರ್ಗಗಳಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಧ್ಯೇಯವಿದೆ.

ರಾಜ್ಯ ಸರ್ಕಾರವು, ರಾಜ್ಯದಲ್ಲಿ ಉತ್ಪಾದನೆ ಮತ್ತು ಆಯ್ದ ಸೇವಾ ಕೈಗಾರಿಕೆಗಳನ್ನು ಉತ್ತೇಜಿಸುವ ಸಲುವಾಗಿ ದಿನಾಂಕ: 28.02.2009ರ ಸರ್ಕಾರಿ ಆದೇಶ ಸಂಖ್ಯೆ: ಸಿಐ 233 ಎಸ್‌ಪಿಐ 2008 ರೀತ್ಯಾ ಕರ್ನಾಟಕ ಕೈಗಾರಿಕಾ ನೀತಿ 2009–14ನ್ನು ಪ್ರಕಟಿಸಿತ್ತು. ಈ ನೀತಿ, 01.04.2009ರಿಂದ ಜಾರಿಗೆ ಬಂದು 31.03.2014 ರವರೆಗೆ ಚಾಲ್ತಿಯಲ್ಲಿತ್ತು. ಮುಂದುವರೆದಂತೆ ಹೊಸ ಕೈಗಾರಿಕಾ ನೀತಿ 2014–19ನ್ನು ಜಾರಿಗೆ ತರುವವರೆಗೆ ಇದರ ಅವಧಿಯನ್ನು ವಿಸ್ತರಿಸಲಾಗಿದೆ.

ಭಾರತ ಸರ್ಕಾರವು, ತ್ವರಿತ ಅಭಿವೃದ್ಧಿ, ಆಮೂಲಾಗ್ರ ಅಭಿವೃದ್ಧಿ ಮತ್ತು ಲಾಭಕರ ಉದ್ಯೋಗವನ್ನು ಕಲ್ಪಿಸುವ ಉದ್ದೇಶದಿಂದ ರಾಷ್ಟ್ರೀಯ ಉತ್ಪಾದನಾ ನೀತಿಯನ್ನು 2011ರಲ್ಲಿ ಜಾರಿಗೆ ತಂದಿತು. ಈ ನೀತಿಯು, ಜಿಡಿಪಿಯಲ್ಲಿ ಉತ್ಪಾದನಾ ವಲಯದ ಪಾಲನ್ನು 2025ರ ಹೊತ್ತಿಗೆ ಶೇ.25ಕ್ಕೆ ಹೆಚ್ಚಿಸಿ, ಸೂಕ್ತ ಕುಶಲತೆಗಳನ್ನು ಹೊಂದಿರುವ 100 ದಶಲಕ್ಷ ಉದ್ಯೋಗಗಳನ್ನು ಕಲ್ಪಿಸುವುದಲ್ಲದೇ, ಜಾಗತಿಕ ಸ್ಪರ್ಧೆಯನ್ನು ಎದುರಿಸುವ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸುವ ಗುರಿಯನ್ನು ಹೊಂದಿದೆ.

ಕರ್ನಾಟಕದ ಉತ್ಪಾದನಾ ವಲಯದ ಬಗ್ಗೆ ಅಧ್ಯಯನ ಮಾಡಲು ಮತ್ತು ಜಾಗತಿಕ ಸ್ಥಿತಿಗತಿಗಳನ್ನು ಉತ್ಪಾದನಾ ರಂಗವು ಎದುರಿಸಬೇಕಾದ ಪ್ರಸಕ್ತ ಸವಾಲುಗಳನ್ನು ಗಣನೆಗೆ ತೆಗೆದುಕೊಂಡು, ಸುಸ್ಥಿರ ಮತ್ತು ಸಮಗ್ರ ವಿಧಾನದಲ್ಲಿ ಬೆಳವಣಿಗೆಯನ್ನು ಸಾಧಿಸಲು ಕೈಗೊಳ್ಳಬೇಕಾದ ಅವಶ್ಯ ಕ್ರಮಗಳ ಕುರಿತು ಸಲಹೆ ನೀಡಲು ಕರ್ನಾಟಕ ಉತ್ಪಾದನಾ ಕಾರ್ಯ ಪಡೆ (ಎಮ್‌ಟಿಎಫ್) ಯನ್ನು ರಚಿಸಲಾಗಿತ್ತು. ಈ ಕಾರ್ಯಪಡೆಯು ಅಮೂಲ್ಯ ಸಲಹೆ ಮತ್ತು ಶಿಫಾರಸ್ಸುಗಳನ್ನು ನೀಡಿದೆ.

ಈ ಹಿನ್ನೆಲೆಯಲ್ಲಿ, ರಾಷ್ಟ್ರೀಯ ತಯಾರಿಕಾ ನೀತಿ 2011ರ ಗುರಿ, ಧ್ಯೇಯೋದ್ದೇಶ, ನೀತಿ ನಿಯಮಗಳ ಸ್ಥಿತ್ಯಂತರಕ್ಕೆ ಅನುವಾಗುವಂತೆ, ಕರ್ನಾಟಕ ಉತ್ಪಾದನಾ ಕಾರ್ಯಪಡೆಯ (ಎಮ್‌ಟಿಎಫ್) ಶಿಫಾರಸ್ಸುಗಳನ್ವಯ ಹಾಗೂ ಬಂಡವಾಳ ಹೂಡಿಕೆದಾರರ ಪ್ರಯೋಜನಕ್ಕಾಗಿ ರಾಜ್ಯ ಸರ್ಕಾರವು ಸುಗಮ ಪರಿವರ್ತನೆಯ ಸಕ್ರಿಯಗೊಳಿಸಲು ಹೊಸ ಕೈಗಾರಿಕಾ ನೀತಿಯೊಂದನ್ನು ರೂಪಿಸಲು ಬಯಸಿರುತ್ತದೆ.

ಮೂಲಭೂತ ಸೌಕರ್ಯ, ಸೌಲಭ್ಯ ಒದಗಿಸುವ ವ್ಯವಸ್ಥೆ, ಮಾನವ ಸಂಪನ್ಮೂಲ ಅಭಿವೃದ್ಧಿ, ಪ್ರೋತ್ಸಾಹ ಮತ್ತು ವಿನಾಯಿತಿಗಳು, ಎಂಎಸ್‌ಎಂಇ ಅಭಿವೃದ್ಧಿ, ಒತ್ತು ನೀಡಬಹುದಾದ ವಲಯಗಳು ಇತ್ಯಾದಿಯಂತಹ ವಿವಿಧ ವಿಷಯಗಳಿಗೆ ಸಂಬಂಧಿಸಿದ ಎಲ್ಲಾ ಭಾಗಿದಾರ ಸಂಘ ಸಂಸ್ಥೆಗಳಾದ ವ್ಯಾಪಾರ/ಸಂಸ್ಥೆ/ಸಂಘಗಳೊಂದಿಗೆ ಎರಡು ದಿನದ ಕಾರ್ಯಾಗಾರವನ್ನು ದಿನಾಂಕ: 07.01.2014 ಮತ್ತು 08.01.2014 ರಂದು ನಡೆಸಲಾಯಿತು.

ಕಾರ್ಯಾಗಾರದಲ್ಲಿ ನೀಡಲಾದ ಎಲ್ಲಾ ಸಲಹೆಗಳನ್ನು ಅಳವಡಿಸಿ ಕರಡು ನೀತಿಯನ್ನು ಪರಿಷ್ಕೃತಗೊಳಿಸಲಾಯಿತು.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಮುಂದಿನಂತೆ ಆದೇಶಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಿಐ 58 ಎಸ್‌ಪಿಐ 2013, ಬೆಂಗಳೂರು, ದಿನಾಂಕ: 01.10.2014**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು ಈ ಆದೇಶಕ್ಕೆ ಲಗತ್ತಿಸಿದ ವಿವರಣಾ ಪಟ್ಟಿಯಲ್ಲಿ (Annexe) ವಿವರಿಸಿರುವಂತೆ ಕರ್ನಾಟಕ ಕೈಗಾರಿಕಾ ನೀತಿ 2014–19ನ್ನು ಪ್ರಕಟಿಸಲು ಹರ್ಷಿಸುತ್ತದೆ. ಈ ಕೆಳಗಿನ ಅನುಬಂಧಗಳು ವಿವರಣಾ ಪಟ್ಟಿಯ ಭಾಗಗಳೆಂದು ಪರಿಗಣಿಸುವುದು.

| | |
|---|---|
| **ಅನುಬಂಧ–1** | ಪ್ರೋತ್ಸಾಹ ಮತ್ತು ರಿಯಾಯಿತಿಗಳಿಗೆ ಅರ್ಹವಾದ ಸೇವಾ ಉದ್ಯಮಗಳ ಪಟ್ಟಿ |
| **ಅನುಬಂಧ–2** | ಪ್ರೋತ್ಸಾಹನೆ ಮತ್ತು ರಿಯಾಯಿತಿಗಳಿಗೆ ಅರ್ಹವಲ್ಲದ ಚಟುವಟಿಕೆಗಳ ಪಟ್ಟಿ |
| **ಅನುಬಂಧ–3A** | ರಿಯಾಯಿತಿ ಮತ್ತು ಪ್ರೋತ್ಸಾಹನೆಗಳ ಮಂಜೂರಾತಿಯ ನಿಯಮಗಳು ಮತ್ತು ನಿಂಬಂಧನೆಗಳು |
| **ಅನುಬಂಧ–3B** | ಖಾಸಗಿ ಕೈಗಾರಿಕಾ ಪ್ರದೇಶ/ವಸಾಹತುಗಳಿಗೆ ಸಂಬಂಧಿಸಿದಂತೆ ಷರತ್ತು ಮತ್ತು ನಿಬಂಧನೆಗಳು |
| **ಅನುಬಂಧ–4** | ರಫ್ತು ಉತ್ತೇಜನಾ ಪ್ರೋತ್ಸಾಹನೆಗಳು |
| **ಅನುಬಂಧ–5** | ವ್ಯಾಖ್ಯಾನಗಳು |

ಒಳಗೊಳ್ಳುವಿಕೆ (inclusive), ಸುಸ್ಥಿರ (sustainable) ಮತ್ತು ಸಮತೋಲನ ಕೈಗಾರಿಕಾ ಬೆಳವಣಿಗೆ ಮೂಲಕ ಸಮೃದ್ಧ ಕರ್ನಾಟಕವನ್ನು ನಿರ್ಮಿಸುವುದು ಕೈಗಾರಿಕಾ ನೀತಿ 2014-19ರ ದೃಷ್ಟಿಕೋನವಾಗಿದೆ. ಕೈಗಾರಿಕಾ ನೀತಿಯ ಅವಧಿಯಲ್ಲಿ ಸಾಧಿಸಲು ಉದ್ದೇಶಿಸಿರುವ ಮುಖ್ಯ ಧ್ಯೇಯೋದ್ದೇಶಗಳು ಕೆಳಗಿನಂತಿರುತ್ತವೆ:

i) ಕೈಗಾರಿಕಾ ಬೆಳವಣಿಗೆ ದರ ವಾರ್ಷಿಕ ಶೇಕಡ 12ರಷ್ಟನ್ನು ಕಾಯ್ದುಕೊಳ್ಳುವುದು.

ii) ರಾಜ್ಯದ GDP ಗೆ ಉತ್ಪಾದನಾ ವಲಯದ ಕೊಡುಗೆಯನ್ನು ಪ್ರಸಕ್ತ ಶೇಕಡ 16.87 ರಿಂದ ಈ ಕೈಗಾರಿಕಾ ನೀತಿಯ ಅವಧಿಯ ಕೊನೆಯವರೆಗೆ ಶೇಕಡ 20ಕ್ಕೆ ಎತ್ತರಿಸುವುದು.

iii) ರೂ. 5.00 ಲಕ್ಷ ಕೋಟಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸುವುದು.

iv) 15 ಲಕ್ಷ ಜನರಿಗ ಉದ್ಯೋಗಾವಕಾಶವನ್ನು ಕಲ್ಪಿಸುವುದು.

v) ಬೆಂಗಳೂರಿನ ಸುತ್ತಮುತ್ತಲ ಪ್ರದೇಶಗಳಲ್ಲದೇ ರಾಜ್ಯದ ಇತರ ಭಾಗಗಳಲ್ಲಿಯೂ ಕೂಡ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದು.

vi) ರಾಜ್ಯದಲ್ಲಿ ವ್ಯವಹಾರ ಮಾಡುವ ರೀತಿಯನ್ನು ಮತ್ತಷ್ಟು ಸುಲಭವಾಗಿ ನಿರ್ವಹಿಸುವ ವಾತಾವರಣ ಸೃಷ್ಟಿಸುವುದು.

ಈ ಧ್ಯೇಯೋದ್ದೇಶಗಳನ್ನು ಸಾಧಿಸಲು ಕೆಳಕಂಡ ಕೈಗಾರಿಕೆ ನೀತಿಯ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

i) ಸಮಗ್ರ ಸೌಲಭ್ಯಗಳೊಂದಿಗೆ ಗುಣ ಮಟ್ಟದ ಮೂಲಭೂತ ಸೌಕರ್ಯ ಒದಗಿಸುವುದು.

ii) ಸಾಮರ್ಥ್ಯಧಾರಣೆ ಮತ್ತು ಕೌಶಲ್ಯ ಮೇಲ್ದರ್ಜೆಗೇರಿಸುವ ಮೂಲಕ ಮಾನವ ಸಂಪನ್ಮೂಲ ಅಭಿವೃದ್ಧಿ.

iii) ಸೌಲಭ್ಯ ಒದಗಿಸುವ ವ್ಯವಸ್ಥೆ ಮತ್ತು ಕಾರ್ಯವಿಧಾನಗಳ ಸುಧಾರಣೆ.

iv) ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಒತ್ತು ನೀಡುವುದು.

v) ಎಸ್‌ಸಿ/ಎಸ್‌ಟಿ ಉದ್ಯಮದಾರರಿಗೆ, ಮಹಿಳಾ ಉದ್ಯಮದಾರರಿಗೆ, ಅಲ್ಪಸಂಖ್ಯಾತರು, ಹಿಂದುಳಿದ ವರ್ಗದವರು ಮತ್ತು ಅನಿವಾಸಿ ಕನ್ನಡಿಗರಿಗೆ ಪ್ರೋತ್ಸಾಹ ನೀಡುವುದು.

vi) ರಫ್ತು ಉದ್ದಿಮೆದಾರರಿಗೆ ಪ್ರೋತ್ಸಾಹ ನೀಡುವುದು.

vii) ಸಂಶೋಧನೆ ಮತ್ತು ಅಭಿವೃದ್ಧಿಗೆ ನೇರ ಡಿಜಿಟಲ್ ಉತ್ಪಾದನೆಗೆ ಬೆಂಬಲ ನೀಡುವುದು.

viii) ಆ್ಯಂಕರ್ ಕೈಗಾರಿಕೆ ಪ್ರೋತ್ಸಾಹ ನೀಡುವುದು.

ix) ಆಕರ್ಷಕ ಪ್ರೋತ್ಸಾಹ ಮತ್ತು ರಿಯಾಯಿತಿಗಳು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: FD 726 Exp-1/2014 ದಿನಾಂಕ: 16.07.2014 ಮತ್ತು 06.08.2014, ಜಲಸಂಪನ್ಮೂಲ ಇಲಾಖೆಯ ಟಿಪ್ಪಣಿ ಸಂಖ್ಯೆ: WRD/140/KBN/2014, ದಿನಾಂಕ:

21.06.2014, ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಇಲಾಖೆಯ ಟಿಪ್ಪಣಿ ಸಂಖ್ಯೆ: IDD/28/I-TC/2014, ದಿನಾಂಕ: 05.06.2014, ಕಾರ್ಮಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಕಾಇ/170/ಎಲ್ಇಟಿ/2014, ದಿನಾಂಕ: 29.04.2014, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆಯ ದಿನಾಂಕ: 08.04.2014 ರ ಟಿಪ್ಪಣಿ, ಇಂಧನ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಇಎನ್ 2/ವಿಎಸ್‌ಸಿ/2014/ಪಿ1, ದಿನಾಂಕ: 30.06.2014 ಮತ್ತು 31.07.2014, ಯೋಜನಾ ಮತ್ತು ಸಾಂಖ್ಯಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 26 ಎಫ್‌ಆರ್‌ಓ 2014, ದಿನಾಂಕ: 16.06.2014, ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ: UDD/45/UMS/2014 ದಿನಾಂಕ: 21.07.2014, ಕಂದಾಯ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: RD/230/LGB/2014 ದಿನಾಂಕ: 21.07.2014, ಮತ್ತು ಅನಧಿಕೃತ ಟಿಪ್ಪಣಿ ಸಂಖ್ಯೆ: ಕಂಇ/25/ಮುನೋಮು/2014 ದಿನಾಂಕ: 22.07.2014, ಮಹಿಳಾ ಮತ್ತು ಮಕ್ಕಳ ಕಲ್ಯಾಣಾಭಿವೃದ್ಧಿ ಇಲಾಖೆಯ ಅಭಿಪ್ರಾಯ ಸಂಖ್ಯೆ: WCD/4397/PRS/2014, ದಿನಾಂಕ: 21.07.2014, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಕೆಎಸ್‌ಆರ್‌ಎಲ್‌ಪಿಎಸ್/ಕೈ ನೀ–2014–19/2014–15, ದಿನಾಂಕ: 23.07.2014 ಗಳ ಸಹಮತಿಯಂತೆ ಮತ್ತು ದಿನಾಂಕ: 11.09.2014 ರಂದು ನಡೆದ ಸಚಿವ ಸಂಪುಟ ಸಭೆಯ ಅನುಮೋದನೆಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ. ರತ್ನ ಪ್ರಭ, ಭಾ.ಆ.ಸೇ.)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

# ಪ್ರಸ್ತಾವನೆ

## ಭಾರತ – ಒಂದು ದೃಷ್ಟಿಕೋನ

ಭಾರತವು ಕಳೆದ ಎರಡು ದಶಕಗಳಲ್ಲಿ ಅಮೂಲಾಗ್ರ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಗಣನೀಯವಾಗಿ ಸಾಧಿಸಿದೆ. 1.2 ಬಿಲಿಯನ್ ಜನಸಂಖ್ಯೆ ಇರುವ ಭಾರತೀಯ ಅರ್ಥವ್ಯವಸ್ಥೆಯು ಇಂದು ವಿಶ್ವದ ಹತ್ತನೆಯ ಅತಿ ದೊಡ್ಡ ಅರ್ಥವ್ಯವಸ್ಥೆಯ ಸ್ಥಾನ ಮಾನವನ್ನು ಹೊಂದಿ, ಖರೀದಿ ಬಲದ ಅನುರೂಪತೆಯ ಆಧಾರದ ಮೇಲೆ ಮೂರನೆಯ ಅತಿ ಹೆಚ್ಚಿನ ಜಿ.ಡಿ.ಪಿ.ಯನ್ನು ಸಾಧಿಸಿದ ದೇಶವಾಗಿದೆ. ಪ್ರಗತಿಪರವಾದ ವಿದೇಶಿ ಬಂಡವಾಳ ಹಾಗೂ ವ್ಯಾಪಾರ ಧೋರಣೆಗಳು ಭಾರತದ ವೈಶಿಷ್ಟತೆಗಳಾಗಿದ್ದು, ಖಾಸಗಿ ವಲಯ ಇದರಲ್ಲಿ ಮಹತ್ತರ ಪಾತ್ರ ವಹಿಸಿದೆ. ಆದರೆ, ಇತರ ಎಲ್ಲಾ ಅರ್ಥವ್ಯವಸ್ಥೆಗಳಂತೆಯೇ, ಭಾರತವೂ 2008–2009ರ ಜಾಗತಿಕ ಆರ್ಥಿಕ ಹಿನ್ನಡೆಯನ್ನು ಎದುರಿಸಿದ್ದರೂ, ಇತ್ತೀಚಿನ ವರ್ಷಗಳಲ್ಲಿ ದೇಶವು ನಿಧಾನ ಗತಿಯಲ್ಲಿ ಆರ್ಥಿಕ ಬೆಳವಣಿಗೆಯನ್ನು ಸಾಧಿಸುತ್ತಿದೆ.

ಯೋಜನಾ ಮಂಡಳಿಯು 12ನೆಯ ಪಂಚ ವಾರ್ಷಿಕ ಯೋಜನೆಗಾಗಿ 8%ರಷ್ಟು ಸರಾಸರಿ ಜಿಡಿಪಿ ಬೆಳವಣಿಗೆಯ ಗುರಿಯನ್ನು ಹಮ್ಮಿಕೊಂಡಿದೆ. ಕೈಗಾರಿಕೆ ಮತ್ತು ಸೇವಾ ಕ್ಷೇತ್ರಕ್ಕಾಗಿ ಸರಾಸರಿ ಜಿಡಿಪಿ ಬೆಳವಣಿಗೆ ಗತಿಯು ಅನುಕ್ರಮವಾಗಿ 7.6% ಮತ್ತು 9%ಗಳಾಗಿವೆ. ಅತಿ ಮುಖ್ಯ ವಲಯಗಳ ಉತ್ಪಾದನೆಯನ್ನು ತೀವ್ರಗೊಳಿಸಿ, ಬೃಹತ್ ಯೋಜನೆಗಳ ಅನುಷ್ಠಾನವನ್ನು ತ್ವರಿತಗೊಳಿಸುವ ಜೊತೆಯಲ್ಲೇ ಉತ್ಪಾದನಾ ಕ್ಷೇತ್ರದಲ್ಲಿ ಭಾರತದ ಸ್ಪರ್ಧಾತ್ಮಕ ಬಲವನ್ನು ಉತ್ತಮಗೊಳಿಸಲು ಸಂಶೋಧನೆ ಮತ್ತು ಅಭಿವೃದ್ಧಿಗೆ ಒತ್ತುಕೊಟ್ಟು ಪರಿಣಿತ ಮಾನವ ಸಂಪನ್ಮೂಲ ಸಾಕಷ್ಟು ಲಭ್ಯವಿದೆ ಎನ್ನುವುದನ್ನು ಖಚಿತಪಡಿಸಿಕೊಳ್ಳುವುದು ಅತ್ಯಗತ್ಯವಾಗಿದೆ.

## ಕರ್ನಾಟಕ – ಒಂದು ದೃಷ್ಟಿಕೋನ

### ಸಾಮಾನ್ಯ :

ಭಾರತದ ಆರ್ಥಿಕ ಬೆಳವಣಿಗೆಯಲ್ಲಿ ಮಹತ್ತರವಾದ ಕೊಡುಗೆ ನೀಡುತ್ತಿರುವ ಪ್ರಮುಖ ರಾಜ್ಯಗಳಲ್ಲಿ ಕರ್ನಾಟಕವು ಒಂದಾಗಿದೆ ರಾಜ್ಯದ 2012–13ರ ಜಿಡಿಪಿಯು (ಸ್ಥಿರ ಬೆಲೆಗಳಲ್ಲಿ) ರೂ. 2970 ಬಿಲಿಯನ್‌ಗಳಷ್ಟು (ಯುಎಸ್ $ 49 ಬಿಲಿಯನ್) ಇದ್ದು ಆರ್ಥಿಕ ವರ್ಷ 2011–12ರ ಅವಧಿಗೆ ಹೋಲಿಸಿದರೆ 5.3%ರಷ್ಟು ಬೆಳವಣಿಗೆ ಸಾಧಿಸಿದೆ. ಇದು ರಾಷ್ಟ್ರೀಯ ಜಿಡಿಪಿಯ 5% ಬೆಳವಣಿಗೆಗಿಂತ ಅಧಿಕವಾಗಿದೆ.

2012–13ರ ಅವಧಿಯಲ್ಲಿ ರಾಜ್ಯದ ರಫ್ತು ರೂ. 2400 ಬಿಲಿಯನ್‌ಗಳಾಗಿದ್ದು (ಯುಎಸ್ $ 40 ಬಿಲಿಯನ್), ಇದು ಅಖಿಲಭಾರತ ರಫ್ತುಗಳ ಶೇ. 12.69% ಪ್ರಮಾಣವಾಗಿದೆ. ರಾಷ್ಟ್ರೀಯ ರಫ್ತಿನಲ್ಲಿ ರಾಜ್ಯದ ಪಾಲು ಐಟಿಗೆ ಸಂಬಂಧಪಟ್ಟಂತೆ 40% ಹಾಗೂ ಎಲೆಕ್ಟ್ರಾನಿಕ್ಸ್ ಮತ್ತು ಹಾರ್ಡ್‌ವೇರ್ ಕ್ಷೇತ್ರದಲ್ಲಿ 38% ಆಗಿದೆ. 2012–13ರ ಅವಧಿಗಾಗಿ ರಾಜ್ಯದ ರಫ್ತಿನಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಸಾಫ್ಟ್‌ವೇರ್‌ನ ಪಾಲು 60%. ಸಿಲಿಕಾನ್ ವ್ಯಾಲಿ, ಬಾಸ್ಟನ್ ಮತ್ತು ಲಂಡನ್ ನಂತರ, ವಿಶ್ವದಲ್ಲಿ ನಾಲ್ಕನೆಯ ಅತಿ ದೊಡ್ಡ ತಂತ್ರಜ್ಞಾನ ಸಮೂಹದ ನೆಲೆ ಎಂಬ ಹೆಗ್ಗಳಿಕೆ ರಾಜ್ಯಕ್ಕೆ ಸಂದಿದೆ.

ಉತ್ಪಾದನಾ ವಲಯವು ನೌಕರ ವರ್ಗದ ಶೇ 11ರಷ್ಟು ಜನರಿಗೆ ಉದ್ಯೋಗ ನೀಡಿದ್ದು, ತದನಂತರದ ಸ್ಥಾನ 9.60% ಇರುವ ನಿರ್ಮಾಣ ಕ್ಷೇತ್ರಕ್ಕೆ ಸಲ್ಲುತ್ತದೆ. ಕರ್ನಾಟಕದ 2013–14ರ ಆರ್ಥಿಕ ಸಮೀಕ್ಷೆಯ ಪ್ರಕಾರ, ಸೇವಾ ವಲಯವು (ದ್ವಿತೀಯ ಮತ್ತು ತೃತೀಯ ವಲಯ) ಒಟ್ಟು ಜನಸಂಖ್ಯೆಯ 46%ರಷ್ಟು ಜನರಿಗೆ ಉದ್ಯೋಗ ನೀಡಿದೆ.

ಕರ್ನಾಟಕವು 201ಕ್ಕೂ ಅಧಿಕ ಇಂಜನಿಯರಿಂಗ್ ಕಾಲೇಜುಗಳು, 114ಕ್ಕೂ ಅಧಿಕ ವೈದ್ಯಕೀಯ ವಿದ್ಯಾ ಸಂಸ್ಥೆಗಳು, 50 ವಿಶ್ವವಿದ್ಯಾಲಯಗಳು ಮತ್ತು 13 ಅಂತರರಾಷ್ಟ್ರೀಯ ಶಾಲೆಗಳ ಹೊರತಾಗಿ 370ಕ್ಕೂ ಹೆಚ್ಚಿನ ಸಂಖ್ಯೆಯ ವಿಶ್ವವಿಖ್ಯಾತ ಉಚ್ಚ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳನ್ನು ಹೊಂದಿದ್ದು, ವಿಖ್ಯಾತ ಜ್ಞಾನ ಕೇಂದ್ರವಾಗಿದೆ. ವಿನೂತನೆಗಾಗಿ ವಿಶ್ವದಲ್ಲಿ ಅಗ್ರಗಣ್ಯವೆಂದು ವರ್ಲ್ಡ್ ಎಕನಾಮಿಕ್ ಫೋರಮ್ ಗುರುತಿಸಿರುವ ಕೇಂದ್ರಗಳ ಪೈಕಿ ಕರ್ನಾಟಕ ನಾಲ್ಕನೆಯ ಸ್ಥಾನದಲ್ಲಿದೆ.

ಉತ್ತಮ ಸಂಚಾರ ಸಂಪರ್ಕ ಮತ್ತು ವ್ಯವಸ್ಥಾಪನಾ ತಂತ್ರ, ಉತ್ತಮ ಮೂಲಭೂತ ಸೌಲಭ್ಯಗಳು, ಅತ್ಯುತ್ತಮ ಟೆಲಿ ಸಂಪರ್ಕ ಕಾರ್ಯಜಾಲ ಮತ್ತು ಶಾಂತಿ ಪೂರ್ಣ ನೌಕರವರ್ಗ ಮುಂತಾದವುಗಳಿಂದಾಗಿ ಕರ್ನಾಟಕ ವಿದೇಶಿ ನೇರ ಬಂಡವಾಳವನ್ನು ಆಕರ್ಷಿಸುವುದರಲ್ಲಿ 4ನೆಯ ಅತಿ ದೊಡ್ಡ ರಾಜ್ಯವಾಗಿದ್ದು, ಭಾರತದಲ್ಲಿ ಅತ್ಯಂತ ತೀವ್ರ ಬೆಳವಣಿಗೆಯ ಅತಿ ದೊಡ್ಡ ಮಾರುಕಟ್ಟೆಯಾಗಿ ಹೊರಹೊಮ್ಮಿದೆ.

ಆರೋಗ್ಯಕರ ವ್ಯಾಪಾರ ಪರಿಸರ ಮತ್ತು ಬಂಡವಾಳವನ್ನು ಆಕರ್ಷಿಸುವುದರಲ್ಲಿ ವಿಶ್ವ ಬ್ಯಾಂಕ್‌ನ ಬಂಡವಾಳ ಸೂಚ್ಯಂಕದ ಪ್ರಕಾರ ಕ್ವಾಲಿಟಿ ಆಫ್ ಲಿವಿಂಗ್ ಸರ್ವೆ-ವರ್ಲ್ಡ್‌ವೈಡ್ ರ್‍ಯಾಂಕಿಂಗ್ಸ್, 2011-ಮರ್ಸರ್, ಬೆಂಗಳೂರನ್ನು ಭಾರತದಲ್ಲಿ ವಾಸಕ್ಕಾಗಿ ಸರ್ವಶ್ರೇಷ್ಠನಗರವೆಂದು ಮಾನ್ಯ ಮಾಡಿದೆ.

## ಕೈಗಾರಿಕಾ ಸ್ಥಿತಿಗತಿ

ರಾಜ್ಯದಲ್ಲಿ ವಿವಿಧ ಕ್ಷೇತ್ರದ ಸುಮಾರು 1054 ದೊಡ್ಡ ಮತ್ತು ಮಧ್ಯಮ ಉತ್ಪಾದನಾ ಕೈಗಾರಿಕೆಗಳಿದ್ದು, ಮಷೀನ್ ಟೂಲ್, ಸ್ಟೀಲ್, ಸಿಮೆಂಟ್, ಆಟೊಮೋಟಿವ್ ಮತ್ತು ಏರೋಸ್ಪೇಸ್ ಕೈಗಾರಿಕೆಗಳು ಪ್ರಮುಖವಾಗಿದೆ. ಜೊತೆಗೆ, 700ಕ್ಕೂ ಅಧಿಕ ಬಹುರಾಷ್ಟ್ರೀಯ ಕಂಪೆನಿಗಳು ಸೇರಿದಂತೆ ಸುಮಾರು 2500 ಐಟಿ ಕಂಪನಿಗಳು, ಸುಮಾರು 600 ಜವಳಿ ಘಟಕಗಳು ಹಾಗೂ ಬೃಹತ್ ಕೃಷಿ ಆಧಾರಿತ ಕೈಗಾರಿಕೆಗಳು ಯುವಜನರಿಗೆ ಗಣನೀಯ ಉದ್ಯೋಗಾವಕಾಶಗಳನ್ನು ಒದಗಿಸಿ, ಪ್ರಗತಿಗೆ ಮಹತ್ತರ ಕೊಡುಗೆ ಸಲ್ಲಿಸಿವೆ.

ರಾಜ್ಯವು, ಟೊಯೊಟಾ ಕಿರ್ಲೋಸ್ಕರ್, ವೋಲ್ವೊ, ಹೊಂಡ ಮೋಟಾರ್ಸ್, ಟಿವಿಎಸ್, ಟಾಟಾ-ಮಾರ್ಕೊಪೋಲೊ, ಎಲ್‌ಅಂಡ್‌ಟಿ ಕೊಮಾಟ್ಸು, ಮಹೀಂದ್ರ ರೇವಾ, ಸ್ಕಾನಿಯ, ಬೋಷ್, ಸೀಮನ್ಸ್, ಜೆಕೆ ಟೈರ್ಸ್ ಮೊದಲಾದ ಪ್ರಮುಖ ಆಟೊಮೋಟಿವ್ ಕೈಗಾರಿಕೆಗಳಿಗೆ ಆಸರೆ ನೀಡಿದೆ.

ರಾಜ್ಯವು ಭಾರತದ ಬಯೊ-ಟೆಕ್ ರಾಜಧಾನಿಯೂ ಆಗಿದ್ದು, ದೇಶದ ಸುಮಾರು ಶೇ. 60ರಷ್ಟು ಬಯೊ-ಟೆಕ್ ಘಟಕಗಳ ನೆಲೆಯಾಗಿದೆ. ಮೈಸೂರಿನಲ್ಲಿ ನ್ಯೂಟ್ರಿ/ನ್ಯೂಟ್ರಸ್ಯೂಟಿಕಲ್ ಮತ್ತು ಫೈಟೊ ಫಾರ್ಮಸ್ಯೂಟಿಕಲ್ ಪಾರ್ಕ್ (N2P2), ಮಂಗಳೂರಿನಲ್ಲಿ ಮೆರೈನ್ ಬಯೊ-ಟೆಕ್ ಪಾರ್ಕ್, ಧಾರವಾಡದಲ್ಲಿ ಅಗ್ರಿ ಬಯೊ-ಟೆಕ್ ಪಾರ್ಕ್ ಮತ್ತು ಬೀದರಿನಲ್ಲಿ ವಿವೇರಿಯಮ್ ಪ್ರಾಣಿಧಾಮ ಮುಂತಾದ ಜೈವಿಕ ತಂತ್ರಜ್ಞಾನ ಪಾರ್ಕ್‌ಗಳು ಮತ್ತು ಕೇಂದ್ರಗಳನ್ನು ಆಯೋಜಿಸಲಾಗಿದೆ. ಬಯೊಕಾನ್, ಗ್ಲಾಕ್ಸೊ ಸ್ಮಿತ್‌ಕ್ಲೈನ್ ಫಾರ್ಮಸ್ಯೂಟಿಕಲ್ಸ್ ಲಿ., ಜ್ಯೂಬಿಲೆಂಟ್ ಲೈಫ್ ಸೈನ್ಸ್‌ಸ್ ಲಿ. ಮತ್ತು ಆಸ್ಟ್ರ ಜೆನೆಕ ಇಂಡಿಯ, ಮುಂತಾದ ಪ್ರತಿಷ್ಠಿತ ಸಂಸ್ಥೆಗಳು ರಾಜ್ಯದಲ್ಲಿ ತಮ್ಮ ಕೇಂದ್ರಗಳನ್ನು ಸ್ಥಾಪಿಸಿವೆ.

ಹೆಚ್‌ಎಎಲ್, ಎನ್‌ಎಎಲ್, ಏರ್‌ಬಸ್, ಬೋಯಿಂಗ್, ಇಸ್ರೊ, ಹೆಚ್‌ಸಿಎಲ್, ಹನಿವೆಲ್, ಯುಟಿಸಿ ಏರೊಸ್ಪೇಸ್, ಗುಡ್‌ರಿಚ್ ಕಾರ್ಪೊರೇಷನ್ ಮುಂತಾದ ಪ್ರತಿಷ್ಠಿತ ಸಂಸ್ಥೆಗಳ ಅಸ್ತಿತ್ವ ಹಾಗೂ ಉತ್ತಮ ಪರಿಸರ ವ್ಯವಸ್ಥೆಯಿಂದಾಗಿ ಜಾಗತಿಕ ಏರೊಸ್ಪೇಸ್ ಕ್ಷೇತ್ರವು ರಾಜ್ಯವನ್ನು ತನ್ನ ವಿಶ್ವಾಸಾರ್ಹ ತಾಣವಾಗಿಸಿಕೊಂಡಿದೆ.

ಎಮ್‌ಎಸ್‌ಎಮ್‌ಇ ವಲಯವು, ಉದ್ಯೋಗ ಸೃಷ್ಟಿ ಮತ್ತು ಉತ್ಪಾದನೆಯಲ್ಲಿ ತನ್ನ ಕೊಡುಗೆಯನ್ನು ನೀಡುತ್ತಿದ್ದು, ರಾಜ್ಯ ಅರ್ಥವ್ಯವಸ್ಥೆಯ ಒಂದು ಪ್ರಮುಖ ಅಂಗವಾಗಿದೆ. 31.03.2014ರಂದು ಇದ್ದಂತೆ ಕರ್ನಾಟಕದಲ್ಲಿ ನೋಂದಣಿಯಾಗಿರುವ ಸುಮಾರು 4.81 ಲಕ್ಷ ಎಮ್‌ಎಸ್‌ಎಮ್‌ಇಗಳು ರೂ. 18,635 ಕೋಟಿಗಳ ಒಟ್ಟಾರೆ ಬಂಡವಾಳ ಹೂಡಿ, ಸುಮಾರು 28 ಲಕ್ಷ ಜನರಿಗೆ ಉದ್ಯೋಗವನ್ನು ಒದಗಿಸಿವೆ.

ರಾಜ್ಯವು ಜವಳಿ ಕ್ಷೇತ್ರದಲ್ಲೂ ತನ್ನ ಪ್ರಾಮುಖ್ಯತೆಯನ್ನು ಪ್ರಕಟ ಪಡಿಸಿದ್ದು, ದೇಶದಲ್ಲಿ ರೇಷ್ಮೆ ಮತ್ತು ರೇಷ್ಮೆ ಉತ್ಪನ್ನಗಳ ಅತಿ ದೊಡ್ಡ ಉತ್ಪಾದನಾ ಮತ್ತು ರಫ್ತುದಾರನಾಗಿ, ರಾಷ್ಟ್ರೀಯವಾಗಿ ಶೇ. 20ರಷ್ಟು ಸಿದ್ಧ ಉಡುಪು ತಯಾರಿಕೆಯನ್ನು ತನ್ನದಾಗಿಸಿಕೊಂಡಿದೆ. ಬೆಂಗಳೂರು ಗ್ರಾಮಾಂತರ, ತುಮಕೂರು, ಕೋಲಾರ, ಮಂಡ್ಯ, ಬೆಳಗಾವಿ, ಬೀದರ ಮತ್ತು ಧಾರವಾಡದಲ್ಲಿ ಸಿದ್ಧ ಉಡುಪುಗಳಿಗೆ ಮೀಸಲಾದ ವಲಯಗಳನ್ನು ರಾಜ್ಯವು ಆಯೋಜಿಸಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು (ಕೆಐಎಡಿಬಿ) ರಾಜ್ಯದ ಎಲ್ಲೆಡೆ 33, 513 ಎಕರೆಗಳಿಗೂ ಅಧಿಕ ವಿಸ್ತೀರ್ಣದಲ್ಲಿ 145 ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಿ, 16960ಕ್ಕೂ ಹೆಚ್ಚಿನ ಸಂಖ್ಯೆಯ ಘಟಕಗಳಿಗೆ ಭೂಮಿಯನ್ನು ಒದಗಿಸಿದೆ. ಕೆಐಎಡಿಬಿ, ಎಸ್‌ಯುಸಿ ಯೋಜನೆಯಡಿ 437 ಘಟಕಗಳಿಗೆ ಒದಗಿಸಲು, 44704 ಎಕರೆಗಳ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದೆ.

ಕರ್ನಾಟಕ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮವು (ಕೆಎಸ್‌ಎಸ್‌ಐಡಿಸಿ), ರಾಜ್ಯದ ಆದ್ಯಂತ ತನ್ನ 174 ಕೈಗಾರಿಕಾ ವಸಾಹತುಗಳಲ್ಲಿ 13,513 ಘಟಕಗಳಿಗೆ ಕೈಗಾರಿಕಾ ಷೆಡ್‌ಗಳು /ನಿವೇಶನಗಳನ್ನು ನೀಡಿದೆ.

## ವಿದ್ಯುತ್ ಸ್ಥಿತಿಗತಿ

ಕರ್ನಾಟಕವು, ಸುಮಾರು 14,159 ಮೆಗಾವಾಟ್‌ಗಳ ಸ್ಥಾಪಿತ ಉತ್ಪಾದನಾ ಸಾಮರ್ಥ್ಯವನ್ನು ಹೊಂದಿದ್ದು, ಇದರ ಪೈಕಿ ಸುಮಾರು 6,158 ಮೆಗಾವಾಟ್‌ಗಳು ಶಾಖೋತ್ಪನ್ನ ಮೂಲದಿಂದಲೂ, 3,600 ಮೆಗಾವಾಟ್ ಜಲವಿದ್ಯುತ್‌ದಿಂದಲೂ, 3,571 ಮೆಗಾವಾಟ್ ಪುನರ್‌ಬಳಕೆಯ ಇಂಧನ ಮೂಲಗಳಿಂದಲೂ ಹಾಗೂ 500 ಮೆಗಾವಾಟ್ ಇತರ ಮೂಲಗಳಿಂದಲೂ (ಅಣು ಮತ್ತು ಡೀಸಲ್) ಲಭಿಸುತ್ತವೆ. ಜಲವಿದ್ಯುತ್ ಉತ್ಪಾದನೆಯು, ಇಡೀ ವರ್ಷ, ವಿವಿಧ ಋತುಗಳಲ್ಲಿ ತನ್ನ ಅಗತ್ಯಗಳನ್ನು ಸರಿಹೊಂದಿಸುವಲ್ಲಿ ರಾಜ್ಯಕ್ಕೆ ನೆರವಾಗುತ್ತಿವೆ.

ಪ್ರಸಕ್ತ ವಾಯು/ಗಾಳಿ ಇಂಧನದಿಂದ 2,332 ಮೆಗಾವಾಟ್ ಮತ್ತು ಕಿರು ಜಲವಿದ್ಯುತ್‌ದಿಂದ 736 ಮೆಗಾವಾಟ್ ವಿದ್ಯುತ್ ಲಭ್ಯವಿದೆಯಲ್ಲದೆ, 1126 ಮೆಗಾವ್ಯಾಟ್ ವಿದ್ಯುತ್ತನ್ನು ಕೋ-ಜನರೇಶನ್‌ನಿಂದ ಉತ್ಪಾದಿಸಲಾಗುತ್ತಿದೆ.

ಕರ್ನಾಟಕದಲ್ಲಿ ಪುನರ್ ಬಳಕೆ ಇಂಧನ ಕ್ಷೇತ್ರದ ಸಾಮರ್ಥ್ಯವು ಸುಮಾರು 30,000 ಮೆಗಾವಾಟ್‌ಗಳೆಂದು ಅಂದಾಜು ಮಾಡಲಾಗಿದ್ದು, ಇದರಲ್ಲಿ ಸುಮಾರು 13,323 ಮೆಗಾವಾಟ್ ವಾಯು ಇಂಧನ ಮತ್ತು 10,000 ಮೆಗಾವಾಟ್ ಸೌರ ಇಂಧನ ಸೇರಿದ್ದು, ಖಾಸಗಿ ವಲಯದ ಬಂಡವಾಳ ಹೂಡಿಕೆದಾರರು ಈ ಸಾಧ್ಯತೆಗಳನ್ನು ಪರಿಶೀಲಿಸಬಹುದಾಗಿದೆ.

ಕೆಪಿಸಿಎಲ್, ಎನ್‌ಟಿಪಿಸಿ, ಐಪಿಪಿಗಳು ಹಾಗೂ ಪುನರ್‌ಬಳಕೆ ಇಂಧನವನ್ನು ಅಭಿವೃದ್ಧಿಮಾಡುವವರು ಈಗಾಗಲೇ ಕೈಗೆತ್ತಿಕೊಂಡಿರುವ ಮತ್ತು ಉದ್ದೇಶಿಸಿರುವ ಸುಮಾರು 15,535 ಮೆಗಾವಾಟ್ ಸಾಮರ್ಥ್ಯದ ಯೋಜನೆಗಳು, ಮುಂಬರುವ ಕೆಲವು ವರ್ಷಗಳಲ್ಲಿ ರಾಜ್ಯದ ಸ್ಥಾಪಿತ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ವೃದ್ಧಿಸುವ ನಿರೀಕ್ಷೆಯಿದೆ.

## ಜಲದ ಸ್ಥಿತಿಗತಿ

ದೇಶದಲ್ಲಿ ನದಿ ಇತ್ಯಾದಿಗಳಿಂದ ಲಭಿಸುವ 17 ಲಕ್ಷ ಮಿಲಿಯನ್ ಕ್ಯೂಬಿಕ್ ಮೀಟರ್‌ಗಳ ಜಲ ಸಂಪನ್ಮೂಲದಲ್ಲಿ ಸುಮಾರು ಶೇ 6ರಷ್ಟು ಪಾಲನ್ನು ಕರ್ನಾಟಕವು ಹೊಂದಿದೆ. ಇದರ ಸುಮಾರು ಶೇ.40ರಷ್ಟು ಪ್ರಮಾಣ ಪೂರ್ವ ದಿಕ್ಕಿಗೆ ಹರಿಯುವ ನದಿಗಳಿಂದಲೂ, ಇನ್ನುಳಿದ ಪ್ರಮಾಣ ಪಶ್ಚಿಮ ದಿಕ್ಕಿನತ್ತ ಹರಿಯುವ ನದಿಗಳಿಂದಲೂ ಲಭಿಸುತ್ತವೆ. ರಾಜ್ಯದಲ್ಲಿ ತಮ್ಮ ಆಯಾ ಉಪನದಿಗಳನ್ನು ಒಗ್ಗೂಡಿಸಿಕೊಂಡು ಹರಿಯುವ ಏಳು ನದಿ ಜಲಾನಯನಗಳಿವೆ ಮತ್ತು ನದಿ ವ್ಯವಸ್ಥೆಗಳಲ್ಲಿ ಒಳಪಟ್ಟಿವೆ:ಕೃಷ್ಣ, ಕಾವೇರಿ, ಗೋದಾವರಿ, ಪಶ್ಚಿಮದತ್ತ ಹರಿಯುವ ನದಿಗಳು, ಉತ್ತರ ಪೆನ್ನಾರ್, ದಕ್ಷಿಣ ಪೆನ್ನಾರ್ ಮತ್ತು ಪಾಲಾರ್. ಈ ವ್ಯವಸ್ಥೆಯಲ್ಲಿನ ಅನೇಕ ನದಿಗಳು ಅಂತರರಾಜ್ಯ ನದಿಗಳಾಗಿವೆ ಮತ್ತು ಪೂರ್ವಾಭಿಮುಖವಾಗಿವೆ. ಏಳು ಜಲಾನಯನಗಳಲ್ಲಿನ ಇಳುವರಿ, 50% ಅವಲಂಬನೆಯಡಿ 3,418 ಟಿಎಮ್‌ಸಿಗಳಾಗಿವೆ ಮತ್ತು 75% ಅವಲಂಬನೆಯಡಿ 2,934 ಟಿಎಮ್‌ಸಿಗಳಾಗಿದೆ. ರಾಜ್ಯವು ವಾರ್ಷಿಕ 55 ಮಳೆ ದಿನಗಳಂದು ಸರಾಸರಿಯಾಗಿ ಸುಮಾರು 1138 ಮಿಮೀ ಮಳೆಯನ್ನು ಪಡೆಯುತ್ತದೆ; ಭೂಜಲದ ಲಭ್ಯತೆ 485 ಟಿಎಮ್‌ಸಿಗಳೆಂದು ಅಂದಾಜುಮಾಡಲಾಗಿದೆ.

ಜಲಸಂಪನ್ಮೂಲಗಳನ್ನು ಕಾಪಾಡಿ, ಸಮಗ್ರ ಅಭಿವೃದ್ಧಿಗಾಗಿ ಹೊಸ ವ್ಯವಸ್ಥಾತ್ಮಕ ನಿಲುವನ್ನು ಅಂಗೀಕರಿಸುವ ಉದ್ದೇಶದಿಂದ ರಾಜ್ಯವು 2002ರಲ್ಲಿ ರಾಜ್ಯ ಜಲ ನೀತಿಯನ್ನು ರೂಪಿಸಿದೆ. ಈ ನೀತಿಯ ಪ್ರಕಾರ ಕುಡಿಯುವ ನೀರಿನ ಪೂರೈಕೆ ಪ್ರಥಮ ಪ್ರಾಶಸ್ತ್ಯವಾಗಿದ್ದು ಆನಂತರದ ಪ್ರಾಶಸ್ತ್ಯವು ನೀರಾವರಿ ಮತ್ತು ಕೈಗಾರಿಕೆಗಳಿಗೆ ಲಭಿಸಿದೆ.

ಪಶ್ಚಿಮ ದಿಕ್ಕಿನತ್ತ ಹರಿಯುವ ಜಲಸಂಪನ್ಮೂಲಗಳನ್ನು ಹೊರತುಪಡಿಸಿ ರಾಜ್ಯದ ಇತರೆ ಜಲ ಸಂಪನ್ಮೂಲಗಳು ನದಿ ತೀರಕ್ಕೆ ಹೊಂದಿದ್ದು ವಿವಿಧ ಟ್ರಿಬ್ಯೂನಲ್‌ಗಳ ಆದೇಶಗಳಿಗೆ ಒಳಪಟ್ಟಿವೆ. ದೇಸಾಯಿ ಸಮಿತಿ ವರದಿಯ ಪ್ರಕಾರ, ವಿವಿಧ ಜಲನಯನಗಳಲ್ಲಿ ಲಭ್ಯವಿರುವ ನೀರನ್ನು ಗುರುತಿಸಿದ್ದು, ಕೈಗಾರಿಕೆಗಳ ಅಗತ್ಯಕ್ಕೆ ಅನುಗುಣವಾಗಿ ಹಾಗೂ ಮೂಲ ಮತ್ತು ಇಳುವರಿ ಆಧಾರದ ಮೇಲೆ ನೀರನ್ನು ಒದಗಿಸಲು ಅವಕಾಶವಿರುತ್ತದೆ.

ಕೈಗಾರಿಕೆಯು ಮಳೆಗಾಲದಲ್ಲಿ ನೀರಿನ ಮೂಲದಿಂದಲೇ ನೇರವಾಗಿ ನೀರನ್ನು ಪಡೆಯ ಬೇಕಾಗಿದ್ದು, ವರ್ಷವಿಡಿ ನೀರಿನ ಅಗತ್ಯವಿರುವ ಕೈಗಾರಿಕೆಗಳು ತಮ್ಮ ಸ್ವಂತ ವೆಚ್ಚದಲ್ಲಿ ನೀರಿನ ಸಂಗ್ರಹಣಾ ವ್ಯವಸ್ಥೆಯನ್ನು ನಿರ್ಮಿಸಿ, ಕೊರತೆಯ ಅವಧಿಯಲ್ಲಿ ನೀರಿನ ಅಗತ್ಯಗಳನ್ನು ಪೂರೈಸಿಕೊಳ್ಳಬೇಕು.

## ಇತರ ಮೂಲಭೂತ ಸೌಕರ್ಯಗಳ ಸ್ಥಿತಿಗತಿ

ಕರ್ನಾಟಕಕ್ಕೆ ಮಂಗಳೂರು ಮತ್ತು ಕಾರವಾರದಲ್ಲಿ 2 ಪ್ರಮುಖ ಬಂದರುಗಳೊಂದಿಗೆ 320 ಕಿಮೀಗಳ ಕರಾವಳಿಯು ನಿಸರ್ಗದತ್ತ ಕೊಡುಗೆಯಾಗಿದೆ. ರಾಜ್ಯದಲ್ಲಿ10 ಕಿರು ಬಂದರುಗಳು ಸಹ ಇವೆ. ರಾಜ್ಯ ಸರ್ಕಾರವು ತದಡಿ ಬಂದರನ್ನು ಸಹಾ ಅಭಿವೃದ್ಧಿಪಡಿಸುತ್ತಿದೆ.

ಪಶ್ಚಿಮ ಕರಾವಳಿಯ ಮುಖಜ ಪ್ರದೇಶದಲ್ಲಿ 15.4 ಮೀಟರ್‌ಗಳ ಆಳವನ್ನು ಹೊಂದಿ, ಅತ್ಯಂತ ಆಳವಾದ ಒಳಬಂದರಾಗಿರುವ ಮಂಗಳೂರು, ಭಾರತದ ಪ್ರಮುಖ ಬಂದರುಗಳ ಪೈಕಿ ಅತ್ಯಧಿಕ ಉತ್ಪಾದಕತೆಯನ್ನು ಹೊಂದಿದೆ. ಇದು ಮೂರು ರಾಷ್ಟ್ರೀಯ ಹೆದ್ದಾರಿಗಳು ಅಂದರೆ ಎನ್‌ಹೆಚ್ 13,17 ಮತ್ತು 18, ದಕ್ಷಿಣ, ನೈರುತ್ಯ ಮತ್ತು ಕೊಂಕಣ ರೈಲ್ವೆಗಳೊಂದಿಗೆ ಸಂಚಾರ ಸಂಪರ್ಕ ಹೊಂದಿದೆ. ರಾಜ್ಯಕ್ಕಾಗಿ ಈ ಬಂದರಿನ ಉಪಯುಕ್ತತೆಯನ್ನು ಸುಧಾರಿಸಿ, ಬೆಂಗಳೂರು, ಹಾಸನ, ತುಮಕೂರು, ಚಿತ್ರದುರ್ಗ ಜಿಲ್ಲೆಗಳು ಮುಂತಾದ ಒಳನಾಡಿನೊಂದಿಗೆ ಜೋಡಿಸುವುದರೊಂದಿಗೆ ಸರಕು ನಿರ್ವಹಣಾ ಸಾಮರ್ಥ್ಯವನ್ನು ವೃದ್ಧಿಸಬೇಕಾದ ತುರ್ತು ಅಗತ್ಯವಿದೆ. ಈ ಧ್ಯೇಯಗಳನ್ನು ಸಾಧಿಸಲು ರಾಜ್ಯ ಸರ್ಕಾರವು ಎನ್‌ಎಮ್‌ಪಿಟಿಯ ಸಹಯೋಗ ಪಡೆಯಲಿದೆ ಎನ್‌ಹೆಚ್‌ಎ ಐಯು ಜೆಐಸಿಎ ಸಹಕಾರದಲ್ಲಿ ಶಿರಾಡಿ ಘಾಟಿಯಲ್ಲಿ ಚತುಷ್ಪಥ ಸುರಂಗ ಮಾರ್ಗವನ್ನು ಯೋಜಿಸಿದೆ. ರಾಜ್ಯದ ರಫ್ತಿಗೆ ಉತ್ತೇಜನ ನೀಡಲು ಚೆನ್ನೈ ಬೆಂಗಳೂರು ಚಿತ್ರದುರ್ಗ ಕೈಗಾರಿಕಾ ಕಾರಿಡಾರ್ (ಸಿಬಿಸಿಐಸಿ) ಮತ್ತು ಬೆಂಗಳೂರು ಮುಂಬೈ ಆರ್ಥಿಕ ಕಾರಿಡಾರ್ (ಬಿಎಮ್‌ಇಸಿ) ಯೋಜನೆಗಳ ಒಂದು ಮುಖ್ಯ ಅಂಗವಾಗಿ ಈ ಯೋಜನೆಗಳನ್ನು ಒಳಪಡಿಸಲು ಉದ್ದೇಶಿಸಿದೆ.

ರಾಜ್ಯದ ಉದ್ದಗಲಕ್ಕೆ 4,490.71 ಕಿಮೀಗಳ ರಾಷ್ಟ್ರೀಯ ಹೆದ್ದಾರಿ ಮತ್ತು ಸುಮಾರು 20,774.37 ಕಿಮೀಗಳ ರಾಜ್ಯ ಹೆದ್ದಾರಿ ಜೊತೆಗೆ 49,905.56 ಕಿಮೀಗಳ ಪ್ರಮುಖ ಜಿಲ್ಲಾ ರಸ್ತೆ ಸಂಪರ್ಕ ಜಾಲವೂ ಇರುವುದರಿಂದ ಸರಕು ಮತ್ತು ಪ್ರಯಾಣಿಕರ ಸಂಚಾರ ಸುಲಭವಾಗಿದೆ.

ಕರ್ನಾಟಕ, ಎಲ್ಲೆಡೆ ವ್ಯಾಪಿಸಿರುವ 3250 ಕಿಮೀಗಳಷ್ಟು ರೈಲ್ವೆ ಲೈನ್‌ಗಳನ್ನು ಹೊಂದಿದೆ ಹಾಗೂ ವೆಚ್ಚ ಹಂಚಿಕೆ ಆಧಾರದ ಮೇಲೆ ರಾಜ್ಯದಲ್ಲಿ ಇನ್ನೂ ಹೆಚ್ಚು ರೈಲ್ವೆ ಮಾರ್ಗಗಳ ಅಭಿವೃದ್ಧಿಯನ್ನು ಕೈಗೆತ್ತಿಕೊಳ್ಳಬೇಕೆಂದು ಭಾರತ ಸರ್ಕಾರವನ್ನು ಕೋರಿದೆ. ಪಿಪಿಪಿ ನಮೂನೆಯನ್ನು ಸಹ ಪರಿಶೀಲಿಸಲಾಗುತ್ತಿದೆ.

ರಾಜ್ಯ ಸರ್ಕಾರವು ಹುಬ್ಬಳ್ಳಿ-ಅಂಕೋಲ ರೈಲ್ವೆ ಮಾರ್ಗ ಕುರಿತ ಪ್ರಸ್ತಾವನೆಯನ್ನು ಈಗಾಗಲೇ ಮಂಡಿಸಿದ್ದು, ಪರಿಸರ ಸಂಬಂಧಿತ ಅನುಮತಿಗಾಗಿ ಕಾಯುತ್ತಿದೆ. ಇದು, ಹಾಸನ-ಮಂಗಳೂರು ರೈಲ್ವೆ ಮಾರ್ಗದ ಜೊತೆಯಲ್ಲಿ ಒಳನಾಡನ್ನು ಕರಾವಳಿಯೊಂದಿಗೆ ಜೋಡಿಸುತ್ತದೆ. ಬೆಂಗಳೂರು-ಮೈಸೂರು ಮಧ್ಯೆ ಜೋಡಿ ರೈಲು ಹಳಿಯ ಕಾರ್ಯ ಮಾರ್ಚ್ 2015ರ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

ಕರ್ನಾಟಕವು, ಐದು ಕಾರ್ಯ ನಿರ್ವಹಿಸುವ ವಿಮಾನ ನಿಲ್ದಾಣಗಳನ್ನು ಹೊಂದಿದ್ದು, ಇವುಗಳ ಪೈಕಿ ಎರಡು ಅಂತರರಾಷ್ಟ್ರೀಯ ಮಟ್ಟದ ವಿಮಾನನಿಲ್ದಾಣಗಳಾಗಿವೆ (ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನನಿಲ್ದಾಣ, ಬೆಂಗಳೂರು ಮತ್ತು ಮಂಗಳೂರು ವಿಮಾನನಿಲ್ದಾಣ, ಮಂಗಳೂರು). ರಾಜ್ಯವು ಹುಬ್ಬಳ್ಳಿ ವಿಮಾನನಿಲ್ದಾಣವನ್ನು ಅಂತರರಾಷ್ಟ್ರೀಯ ದರ್ಜೆಗೆ ಉತ್ತಮಪಡಿಸಲು ಉದ್ದೇಶಿಸಿದೆ. ಬೆಳಗಾವಿ ವಿಮಾನನಿಲ್ದಾಣವು ಉತ್ತರ ಕರ್ನಾಟಕ ಮತ್ತು ಇತರ ರಾಜ್ಯಗಳ ಮಧ್ಯೆ ಸಂಚಾರವನ್ನು ಸುಗಮಗೊಳಿಸಿದೆ ; ಮೈಸೂರು ವಿಮಾನನಿಲ್ದಾಣವನ್ನು ವಿಸ್ತರಿಸಲಾಗುತ್ತಿದೆ. ರಾಜ್ಯದಲ್ಲಿ ವಿಮಾನ ಸಂಚಾರವನ್ನು ಮತ್ತಷ್ಟು ಅಭಿವೃದ್ಧಿಪಡಿಸಲು, ಗುಲ್ಬರ್ಗಾ, ಶಿವಮೊಗ್ಗ, ಬಿಜಾಪುರ, ಬಳ್ಳಾರಿ ಮತ್ತು ಹಾಸನದಲ್ಲಿ ಕಿರು ವಿಮಾನನಿಲ್ದಾಣಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ರಾಜ್ಯ, ಬೀದರ ಮತ್ತು ಬೆಳಗಾವಿಯಲ್ಲಿ ಎರಡು ವಾಯುಪಡೆ ಹಾರಾಟ ಕೇಂದ್ರಗಳನ್ನು ಹೊಂದಿದೆ.

ಪ್ರಮುಖ ನಗರಗಳ ಸುತ್ತಮುತ್ತ ಸರಕುಗಳ ಆಯೋಜಿತ ಮತ್ತು ವ್ಯವಸ್ಥಾತ್ಮಕ ನಿರ್ವಹಣೆಗಾಗಿ ಲಾಜಿಸ್ಟಿಕ್ಸ್ ಪಾರ್ಕ್‌ಗಳನ್ನು ಸಹ ಅಭಿವೃದ್ಧಿಪಡಿಸಲಾಗುತ್ತಿದೆ.

ಬೆಂಗಳೂರಿನ ಮೆಟ್ರೊ ಯೋಜನೆಯು (42.3 ಕೀ. ಮಿ. ಉದ್ದದ ಮೊದಲ ಹಂತ) 2015ರ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ ಹಾಗೂ 72 ಕೀ. ಮೀ. ಉದ್ದದ ಎರಡನೇ ಹಂತದ ಯೋಜನೆಗೆ ಅನುಮೋದನೆ ನೀಡಲಾಗಿದೆ.

## ರಾಜ್ಯದಲ್ಲಿ ನೈಸರ್ಗಿಕ ಅನಿಲ ಪೈಪ್‌ಲೈನ್ ಮೂಲಸೌಲಭ್ಯ

ಭಾರತ ಸರ್ಕಾರದ ಉದ್ದಿಮೆಯಾದ ಗ್ಯಾಸ್ ಅಥಾರಿಟಿ ಆಫ್ ಇಂಡಿಯ ಲಿಮಿಟೆಡ್ (ಜಿಎಐಎಲ್) ಧಾಬೋಲ್‌ದಿಂದ ಬೆಂಗಳೂರಿಗೆ, ಸುಮಾರು 746 ಕಿಮೀ ದೂರಕ್ಕಾಗಿ 16 ಎಮ್‌ಎಮ್‌ಎಸ್‌ಸಿಎಮ್‌ಡಿ ಸಾಮರ್ಥ್ಯವುಳ್ಳ ಮುಖ್ಯ ಗ್ಯಾಸ್ ಪೈಪ್‌ಲೈನ್‌ಗಳನ್ನು ಸ್ಥಾಪಿಸಿದೆ. ಬೆಳಗಾವಿಯಿಂದ ಬೆಂಗಳೂರುವರೆಗಿನ 9 ಜಿಲ್ಲೆಗಳು ಇದರ ವ್ಯಾಪ್ತಿಗೆ ಬರುತ್ತವೆ. ಸ್ಪರ್‌ಲೈನ್‌ಗಳೊಂದಿಗೆ ಒಟ್ಟಾರೆ 1370 ಕಿಮೀಗಳನ್ನು ತನ್ನ ವ್ಯಾಪ್ತಿಗೆ ಒಳಪಡಿಸುವ ಉದ್ದೇಶವಿದೆ. ಈ ಪೈಪ್‌ಲೈನ್ ಭಾರತ ಸರ್ಕಾರ ಹೂಡಲಿರುವ ಬೆಂಗಳೂರು-ಮುಂಬೈ ಆರ್ಥಿಕ ಕಾರಿಡಾರ್ (ಬಿಎಮ್‌ಇಸಿ) ಮತ್ತು ಚೆನ್ನೈ ಬೆಂಗಳೂರು ಚಿತ್ರದುರ್ಗ ಕೈಗಾರಿಕಾ ಕಾರಿಡಾರ್ (ಸಿಬಿಸಿಐಸಿ)ಗಳ ಮಹತ್ವಪೂರ್ಣ ಪ್ರದೇಶದಲ್ಲಿರುತ್ತದೆ. ಮತ್ತು ಬಿಎಮ್‌ಇಸಿ ಹಾಗೂ ಸಿಬಿಸಿಐಸಿಗಳ ಉದ್ದಕ್ಕೂ ಕೈಗಾರಿಕಾ ಪ್ರದೇಶಗಳು/ವಲಯಗಳ ಅಭಿವೃದ್ಧಿಗೆ ಇಂಬು ನೀಡುತ್ತದೆ.

ಧಾಬೋಲ್-ಬೆಂಗಳೂರು ಗ್ಯಾಸ್ ಪೈಪ್‌ಲೈನ್‌ನ ಆರಂಭ ಉತ್ತೇಜಕವಾಗಿ, ರಾಜ್ಯದಲ್ಲಿ ಪರಿಸರ-ಪೂರಕ ಕೈಗಾರಿಕಾಭಿವೃದ್ಧಿಯನ್ನು ಹೆಚ್ಚು ದಕ್ಷ ಮತ್ತು ವೆಚ್ಚ ಪರಿಣಾಮಕಾರಿಯಾಗಿಸಲು ಅಪಾರ ಸಾಧ್ಯತೆಗಳಿಗೆ ನಾಂದಿ ಹಾಕಿದೆ. ನೈಸರ್ಗಿಕ ಅನಿಲದ ಪರಿಸರಪೂರಕ ಗುಣವನ್ನುಪರಿಗಣಿಸಿ, ಈ ಕಾರಿಡಾರ್ ಅನ್ನುಹಸಿರು ಕಾರಿಡಾರ್ ಆಗಿ ಅಭಿವೃದ್ಧಿಪಡಿಸುವ ಉದ್ದೇಶವಿದೆ.

ಗ್ಯಾಸ್‌ಪೈಪ್‌ಲೈನ್ ಕೈಗಾರಿಕೆಯ ಅಗತ್ಯಗಳನ್ನು ಪೂರೈಸುತ್ತದೆ ; ಬೆಂಗಳೂರು ನಗರದಿಂದ ಆರಂಭಿಸಿ, ಕಾರಿಡಾರ್ ಉದ್ದಕ್ಕೂ ಇರುವ ಪ್ರಮುಖ ನಗರಗಳಲ್ಲಿ ಸಾರಿಗೆಕ್ಷೇತ್ರ ಮತ್ತು ನಗರ ಅನಿಲ ವಿತರಣೆ (ಸಿಜಿಡಿ) ಸಹ ಈ ಯೋಜನೆಯಿಂದ ಪ್ರಯೋಜನ ಪಡೆಯುತ್ತವೆ.

## ಕರ್ನಾಟಕದ ಕೈಗಾರಿಕಾ ನೀತಿ

ಕೈಗಾರಿಕಾ ಬೆಳವಣಿಗೆಯು ಬಡತನವನ್ನು ನಿರ್ಮೂಲನೆ ಮಾಡಿ, ನಿರುದ್ಯೋಗವನ್ನು ನಿವಾರಿಸುವ ಒಂದು ಅತ್ಯುತ್ತಮ ಸಾಧನವಾಗಿದೆಯೆಂದು ರಾಜ್ಯ ಸರ್ಕಾರ ಮನಗಂಡಿದೆ, ಕೈಗಾರಿಕೆ, ವ್ಯಾಪಾರ ಮತ್ತು ಸೇವಾ ವಲಯಗಳ ಬೆಳವಣಿಗೆಯು ಅಧಿಕ ಬಂಡವಾಳ ಹೂಡಿಕೆಯನ್ನು ಉತ್ತೇಜಿಸುತ್ತದೆ, ತಲಾವಾರು ವರಮಾನ ಮಟ್ಟವನ್ನು ಸುಧಾರಿಸುತ್ತದೆ ಹಾಗೂ ಮಡಿಯುವ ಕೈಗಳಿಗೆ ಉದ್ಯೋಗ ನೀಡುತ್ತದೆ. ಈ ಪ್ರಯೋಜನಗಳನ್ನು ಸಾಕಾರಗೊಳಿಸಿ, ಸಾಮಾಜಿಕ -ಆರ್ಥಿಕ ಬದಲಾವಣೆಗಳನ್ನು ಚುರುಕುಗೊಳಿಸಲು, ರಾಜ್ಯವು ಕೈಗಾರಿಕಾಭಿವೃದ್ಧಿಗೆ ಪರಮ ಆದ್ಯತೆ ನೀಡುತ್ತದೆ. ಈ ಕಾರ್ಯವಿಧಾನದಲ್ಲಿ ಎಲ್ಲಾ ರಂಗಗಳನ್ನು ಒಳಪಡಿಸುವಿಕೆ,ಸಮತೋಲನದ ಕೈಗಾರಿಕೀಕರಣ, ಸಮಾಜದ ವಿವಿಧ ಗುಂಪುಗಳು ಮತ್ತು ವರ್ಗಗಳಿಗೆ ಎಲ್ಲೆಡೆ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಧ್ಯೇಯವಿದೆ. ಕರ್ನಾಟಕವು, ಕೈಗಾರಿಕಾ ನೀತಿಯನ್ನುರೂಪಿಸಿದ ಮೊದಲ ರಾಜ್ಯವಾಗಿದ್ದು, ಕೈಗಾರಿಕೀಕರಣದ ಮಟ್ಟವನ್ನು ಸದಾ ಹೆಚ್ಚಿಸಿ, ಕೈಗಾರಿಕಾ ಬೆಳವಣಿಗೆಯನ್ನು ಪೋಷಿಸುವ ಏಕೈಕ ಗುರಿಯಿಂದ ರಾಜ್ಯವು ಆನಂತರವೂ ಕಾಲಕಾಲಕ್ಕೆ ಕೈಗಾರಿಕಾ ನೀತಿಗಳನ್ನು ಜಾರಿಗೆ ತರುತ್ತಿದೆ.

ರಾಜ್ಯ ಸರ್ಕಾರವು, ರಾಜ್ಯದಲ್ಲಿ ಉತ್ಪಾದನಾ ಮತ್ತು ಆಯ್ದ ಸೇವಾ ಕೈಗಾರಿಕೆಗಳನ್ನು ಉತ್ತೇಜಿಸುವ ಸಲುವಾಗಿ 28.02.2009ರಂದು ಸರ್ಕಾರಿ ಆದೇಶ ಸಂ. ಸಿಐ 233 ಎಸ್‌ಪಿಐ 2008ರೀತ್ಯ ಕರ್ನಾಟಕ ಕೈಗಾರಿಕಾ ನೀತಿ 2009-2014ನ್ನು ಪ್ರಕಟಿಸಿತ್ತು. ಈ ನೀತಿ, 01.04.2009ರಿಂದ ಜಾರಿಗೆ ಬಂದು 31.03.2014ರವರೆಗೆ ಊರ್ಜಿತವಾಗಿದ್ದರೂ, 2014-19ರ ನೀತಿ ಜಾರಿಯಾಗುವವರೆಗೆ ಇದನ್ನು ವಿಸ್ತರಿಸಲಾಗಿದೆ.

## 2009-14ರ ನೀತಿಯ ಅವಧಿಯಲ್ಲಿ ಸಾಧಿಸಲಾದ ಪ್ರಗತಿ

ನೀತಿಯ ಅವಧಿಯಲ್ಲಿ ರೂ. 3 ಲಕ್ಷ ಕೋಟಿಯ ಬಂಡವಾಳ ಹೂಡಿ, ಸುಮಾರು 10 ಲಕ್ಷ ಜನರಿಗೆ ಉದ್ಯೋಗ ಕಲ್ಪಿಸುವ ಗುರಿಗೆ ಪ್ರತಿಯಾಗಿ ರೂ.7.13 ಲಕ್ಷ ಕೋಟಿಗಳ ಪ್ರಸ್ತಾವಿತ ಬಂಡವಾಳದ, ಸುಮಾರು 26.84 ಲಕ್ಷ ಜನರಿಗೆ ಉದ್ಯೋಗಾವಕಾಶ ನೀಡಬಲ್ಲ ಸುಮಾರು 1,450 ಯೋಜನಾ ಪ್ರಸ್ತಾವನೆಗಳನ್ನು ಅನುಮೋದಿಸಿದ್ದು, ಇವುಗಳ ಪೈಕಿ ಸುಮಾರು ರೂ. 1.08 ಲಕ್ಷ ಕೋಟಿಗಳ ಬಂಡವಾಳವಿರುವ, ಸುಮಾರು 169 ಪ್ರಸ್ತಾವನೆಗಳನ್ನು ಅನುಷ್ಠಾನಕ್ಕೆ ತಂದು ಸುಮಾರು 1.47 ಲಕ್ಷ ಜನರಿಗೆ ಉದ್ಯೋಗಗಳನ್ನು ಕಲ್ಪಿಸಲಾಯಿತು. ಇದಲ್ಲದೇ, ರೂ. 9037 ಕೋಟಿಗಳ ಬಂಡವಾಳ ಹೂಡಿ, ಸುಮಾರು 6.77 ಲಕ್ಷ ಜನರಿಗೆ ಉದ್ಯೋಗ ಒದಗಿಸುವ 1.07 ಲಕ್ಷ ಎಮ್‌ಎಸ್‌ಎಮ್‌ಇಗಳು ಸರ್ಕಾರದಲ್ಲಿ ಈ ಅವಧಿಯಲ್ಲಿ ನೋಂದಣಿಯಾಗಿವೆ.

ಇತರ ಕೆಲವು ಸಾಧನೆಗಳನ್ನು ಕೆಳಗೆ ಪಟ್ಟಿಮಾಡಲಾಗಿದೆ.

## ಭೂಮಿ ಮತ್ತು ಮೂಲಸೌಲಭ್ಯಗಳು

- ಭೂ-ಬ್ಯಾಂಕ್ ಯೋಜನೆಯಡಿ ಸುಮಾರು 1,15,000 ಎಕರೆಗಳನ್ನು ಗುರುತಿಸಿ, ಸುಮಾರು 50,887 ಎಕರೆಗಳನ್ನು ಸ್ವಾಧೀನಕ್ಕಾಗಿ ಪ್ರಕಟಿಸಲಾಗಿದೆ ಹಾಗೂ 21,480 ಎಕರೆಗಳನ್ನು ಈಗಾಗಲೇ ಸ್ವಾಧೀನಪಡಿಸಿಕೊಳ್ಳಲಾಗಿದೆ.
- ಕೈಗಾರಿಕಾ ಪ್ರದೇಶಗಳಿಗೆ ನೀರನ್ನು ಒದಗಿಸಲು, ಕೆಐಎಡಿಬಿ, ಟರ್ಷರಿ ಸಂಸ್ಕರಣಾ ಕಾರ್ಖಾನೆಗಳನ್ನು ಸ್ಥಾಪಿಸುವ ಕ್ರಮ ಕೈಗೊಂಡಿದೆ.
- ಫಾರ್ಮ, ಏರೋಸ್ಪೇಸ್, ಸಾಂಬಾರ ಪದಾರ್ಥ ಹಾರ್ಡ್‌ವೇರ್, ಐಟಿ, ಆಹಾರ, ಜವಳಿ ಮತ್ತು ಉಡುಪುಗಳಂತಹ ವಲಯಗಳಿಗಾಗಿ ನಿರ್ದಿಷ್ಟ ಪಾರ್ಕ್‌ಗಳನ್ನು ಸ್ಥಾಪಿಸಲು ಕ್ರಮವನ್ನು ಆರಂಭಿಸಲಾಗಿದೆ.
- ಮೊದಲನೆಯ ಹೆಜ್ಜೆಯಾಗಿ ಕರ್ನಾಟಕ ಮುನಿಸಿಪಾಲಿಟೀಸ್ ಕಾಯ್ದೆ, 1964ರ ಸೆಕ್ಷನ್ 364-ಎ ಅನ್ವಯ , 903 ಎಕರೆ 11 ಗುಂಟಗಳ ವಿಸ್ತೀರ್ಣದಲ್ಲಿ ಎಲೆಕ್ಟ್ರಾನಿಕ್ ಸಿಟಿ, ಹಂತ 1, 2 ಮತ್ತು 3ನ್ನು , ಇ-ಸಿಟಿ ಇಂಡಸ್ಟ್ರಿಯಲ್ ಟೌನ್‌ಶಿಪ್ ಏರಿಯಾ ಎಂದು ಘೋಷಿಸಿ, ಎಲೆಕ್ಟ್ರಾನಿಕ್ಸ್ ಸಿಟಿ ಇಂಡಸ್ಟ್ರಿಯಲ್ ಟೌನ್‌ಶಿಪ್ ಪ್ರಾಧಿಕಾರವನ್ನು ಸ್ಥಾಪಿಸಲಾಗಿದೆ.

## ಸವಲತ್ತುಗಳು

- ಜಿಲ್ಲಾ ಮತ್ತು ರಾಜ್ಯ ಮಟ್ಟದ ಏಕಗವಾಕ್ಷ ಮಂಜೂರಾತಿ ಸಮಿತಿ (ಡಿಎಲ್‌ಎಸ್‌ಡಬ್ಲ್ಯುಸಿಸಿ/ಎಸ್‌ಎಲ್‌ಡಬ್ಲ್ಯುಸಿಸಿ)ಗಳಿಗೆ ಹೆಚ್ಚಿನ ಅಧಿಕಾರವನ್ನು ನೀಡಲು, ಕೈಗಾರಿಕಾ (ಫೆಸಿಲಿಟೇಶನ್) ಕಾಯ್ದೆ, 2002ಕ್ಕೆ ತಿದ್ದುಪಡಿಗಳನ್ನು ತರಲಾಯಿತು.
- ಆನ್‌ಲೈನ್ ಅರ್ಜಿ ಸಲ್ಲಿಸುವಿಕೆ ಮತ್ತು ನಿಗಾ ವ್ಯವಸ್ಥೆಗಾಗಿ ಕರ್ನಾಟಕ ಉದ್ಯೋಗ ಮಿತ್ರದಲ್ಲಿ ಇ-ಉದ್ಯಮಿ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.
- ಕೈಗಾರಿಕೆಗಳು ಎದುರಿಸುವ ವಿವಿಧ ಸಮಸ್ಯೆಗಳನ್ನು ಪರಿಹರಿಸಲು, ಕೈಗಾರಿಕಾ ಅದಾಲತ್‌ಗಳನ್ನು ಜಿಲ್ಲಾ ಮತ್ತು ವಿಭಾಗೀಯ ಮಟ್ಟದಲ್ಲಿ ನಡೆಸಲಾಯಿತು.
- ರಾಜ್ಯದಲ್ಲಿ ಬಂಡವಾಳ ಅವಕಾಶಗಳನ್ನು ಪ್ರಚುರಪಡಿಸಲು, ಜಾಗತಿಕ ಬಂಡವಾಳಹೂಡಿಕೆದಾರರ ಸಮಾವೇಶ (ಜಿಐಎಮ್) 2010 ಮತ್ತು ಜಿಐಎಮ್2012ಗಳನ್ನು ಯಶಸ್ವಿಯಾಗಿ ನಡೆಸಲಾಯಿತು.

### ಪ್ರೋತ್ಸಾಹಗಳು ಮತ್ತು ವಿನಾಯಿತಿಗಳು

- 4000ಕ್ಕೂ ಅಧಿಕ ಘಟಕಗಳಿಗೆ ರೂ. 250 ಕೋಟಿಗಳ ಪ್ರೋತ್ಸಾಹಗಳು ಮತ್ತು ವಿನಾಯಿತಿಗಳನ್ನು ನೀಡಲಾಯಿತು.

### ಕುಶಲತೆಯ ಅಭಿವೃದ್ಧಿ

- ಕುಶಲತೆಯನ್ನು ಬೆಳೆಸಿ, ಉತ್ತಮ ಉದ್ಯೋಗಾವಕಾಶಗಳನ್ನು ಕಲ್ಪಿಸಲು, ಪಿಪಿಪಿ ನಮೂನೆಯಡಿ, ಖಾಸಗಿ ಸಂಸ್ಥೆಗಳ ಸಹಯೋಗದೊಂದಿಗೆ13 ಕುಶಲತಾ ಅಭಿವೃದ್ಧಿ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಯಿತು.

### ಕೈಗಾರಿಕೆಗಳಿಗೆ ಸಕಾಲಿಕ ಸೇವೆ

- ಕೈಗಾರಿಕೆಗಳಿಗೆ ಸಕಾಲಿಕ ಸೇವೆ ಸಲ್ಲಿಸುವ ಸಲುವಾಗಿ ಕೈಗಾರಿಕಾ ಇಲಾಖೆಯ ಆರು ಸೇವೆಗಳನ್ನು ಕರ್ನಾಟಕ ಸಕಾಲ ಸೇವೆಗಳ ಕಾಯ್ದೆ-2011 ರ ವ್ಯಾಪ್ತಿಗೆ ತರಲಾಯಿತು.

11ನೆಯ ಪಂಚವಾರ್ಷಿಕ ಯೋಜನೆಯಡಿ ಭಾರತದ ಒಟ್ಟಾರೆ ಆರ್ಥಿಕ ಸ್ಥಿತಿ, 2008ರ ಆರಂಭದಿಂದ ತಲೆದೋರಿದ ಜಾಗತಿಕ ಹಿನ್ನಡತೆಯ ಕಾರಣ, ನಿರೀಕ್ಷಿತ ಗತಿಯಲ್ಲಿ ಬೆಳೆಯಲಿಲ್ಲ. ಕರ್ನಾಟಕವೂ ಇದಕ್ಕೆ ಹೊರತಾಗಿರಲಿಲ್ಲ. ಸಾಮಾನ್ಯವಾಗಿ, ಕರ್ನಾಟಕದ ಕೈಗಾರಿಕಾ ಬೆಳವಣಿಗೆ 2009-14ರ ನೀತಿ ಅವಧಿಯಲ್ಲಿ ನಿಧಾನವಾಗಿತ್ತು. ರಾಜ್ಯದಲ್ಲಿ ಉಂಟಾದ ವ್ಯಾಪಕ ಅನಾವೃಷ್ಟಿಯೂ ಈ ಮಂದಗತಿಗೆ ಮತ್ತಷ್ಟು ಕಾರಣವಾಯಿತು.

### ಹೊಸ ಕೈಗಾರಿಕಾ ನೀತಿಯ ಅಗತ್ಯ

ರಾಜ್ಯ ಸರ್ಕಾರವು ಈವರೆಗೆ ರೂಪಿಸಲಾಗಿದ್ದ ಕಾರ್ಯತಂತ್ರಗಳು ಮತ್ತು ಸಾಧನೆಗಳನ್ನು ಕ್ರೋಢೀಕರಿಸುವ ಸಲುವಾಗಿ ಸಮರ್ಪಕ ಮೂಲಸೌಲಭ್ಯಗಳು, ಆಕರ್ಷಕ ಹಾಗೂ ಅಧಿಕ ಪ್ರೋತ್ಸಾಹಗಳು ಮತ್ತು ಸುಧಾರಿತ ಅನುಕೂಲಗಳ ವ್ಯವಸ್ಥೆಯೊಂದಿಗೆ ಆಡಳಿತ ಸುಧಾರಣೆಗಳ ಬೆಂಬಲವನ್ನು ಒದಗಿಸಲು ಉದ್ದೇಶಿಸಿದೆ.

ಭಾರತ ಸರ್ಕಾರವು, ಚುರುಕುಗೊಂಡ ಬೆಳವಣಿಗೆ, ಆಮೂಲಾಗ್ರ ಅಭಿವೃದ್ಧಿ ಮತ್ತು ಲಾಭಕರ ಉದ್ಯೋಗವನ್ನು ಕಲ್ಪಿಸುವ ಉದ್ದೇಶದಿಂದ ರಾಷ್ಟ್ರೀಯ ಉತ್ಪಾದನಾ ನೀತಿಯನ್ನು 2011ರಲ್ಲಿ ಜಾರಿಗೆ ತಂದಿತು. ಈ ನೀತಿಯು ಒಂದು ದಶಕದಲ್ಲಿ ಜಿಡಿಪಿಯಲ್ಲಿ ಉತ್ಪಾದನಾ ಕ್ಷೇತ್ರದ ಪಾಲನ್ನು 25%ಗೆ ಹೆಚ್ಚಿಸಿ, ಸೂಕ್ತ ಕುಶಲತೆಗಳನ್ನು ಹೊಂದಿರುವ 100 ದಶಲಕ್ಷ ಉದ್ಯೋಗಗಳನ್ನು ಕಲ್ಪಿಸುವುದಲ್ಲದೇ, ಜಾಗತಿಕವಾಗಿ ಸ್ಪರ್ಧೆಯನ್ನು ಎದುರಿಸುವ ಉತ್ಪಾದನೆಯನ್ನು ಗಹನಗೊಳಿಸುವ ಗುರಿ ಯನ್ನುಹಮ್ಮಿಕೊಂಡಿದೆ.

ಕರ್ನಾಟಕದಲ್ಲಿ ಉತ್ಪಾದನಾ ವಲಯದ ಬಗ್ಗೆ ಅಧ್ಯಯನ ಮಾಡಿ, ಇದು ಎದುರಿಸುವ ಪ್ರಸಕ್ತ ಸವಾಲುಗಳು ಮತ್ತು ಜಾಗತಿಕ ಬೇಕುಬೇಡಗಳನ್ನು ಗಣನೆಗೆ ತೆಗೆದುಕೊಂಡು, ಸತತ ಮತ್ತು ಸಂಪೂರ್ಣ ವಿಧಾನದಲ್ಲಿ ಬೆಳವಣಿಗೆಯನ್ನು ಸಾಧಿಸಲು ರಚಿಸಲಾದ ಕರ್ನಾಟಕ ಉತ್ಪಾದನಾ ಕಾರ್ಯ ಪಡೆಯು (ಎಮ್‌ಟಿಎಫ್) ಅಮೂಲ್ಯ ಸಲಹೆಗಳನ್ನು ಶಿಫಾರಸು ಮಾಡಿದೆ.

ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು, ರಾಜ್ಯದ ಬಂಡವಾಳಹೂಡಿಕೆದಾರರ ಪ್ರಯೋಜನಕ್ಕಾಗಿ ಸುಸೂತ್ರ ಕ್ರಮಗಳನ್ನು ಒದಗಿಸುವಂತೆ ರಾಷ್ಟ್ರೀಯ ಉತ್ಪಾದನಾ ನೀತಿ 2011ದ ಧ್ಯೇಯೋದ್ದೇಶಗಳು ಮತ್ತು ಗುರಿಗಳು ಹಾಗೂ ಕರ್ನಾಟಕ ಉತ್ಪಾದನಾ ಕಾರ್ಯಪಡೆಯ (ಎಮ್‌ಟಿಎಫ್) ಶಿಫಾರಸುಗಳಿಗೆ ಅನುರೂಪವಾದ ಒಂದು ಹೊಸ ಕೈಗಾರಿಕಾ ನೀತಿಯನ್ನು ರೂಪಿಸಲು ಬಯಸುತ್ತದೆ

## 1. ದೃಷ್ಟಿಕೋನ

ಸರ್ವರನ್ನೂ ಒಳಗೊಂಡ, ಸುಸ್ಥಿರ ಮತ್ತು ಸಮತೋಲನದ ಕೈಗಾರಿಕಾ ಅಭಿವೃದ್ಧಿಯ ಮೂಲಕ ಸಮೃದ್ಧ ಕರ್ನಾಟಕವನ್ನು ನಿರ್ಮಿಸಿ, ತನ್ಮೂಲಕ ವಿಫುಲ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು.

## 2. ಧ್ಯೇಯ

2.1 ಉತ್ಪಾದನಾ ವಲಯಕ್ಕೆ ವಿಶೇಷ ಆದ್ಯತೆ ನೀಡಿ , ಕೈಗಾರಿಕಾ ಬಂಡವಾಳ ಹೂಡಿಕೆಗಾಗಿ ಕರ್ನಾಟಕವನ್ನು ಪ್ರಾಶಸ್ತ್ಯದ ತಾಣವನ್ನಾಗಿ ಮಾಡುವುದು.

2.2 ಕೈಗಾರಿಕಾ ಅಭಿವೃದ್ಧಿಗಾಗಿ ರಾಜ್ಯದ ಎಲ್ಲೆಡೆ ಅವಕಾಶಗಳನ್ನು ಕಲ್ಪಿಸಿ, ಖಾಸಗಿ ವಲಯದ ಮೂಲಕ ಸ್ಥಳೀಯರಿಗೆ ಬೃಹತ್ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು.

2.3 ಕೈಗಾರಿಕೆಗಳ ಅಗತ್ಯಗಳನ್ನು ಪೂರೈಸಲು ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವುದು

2.4 ಸುಸ್ಥಿರವಾದ ಕೈಗಾರಿಕಾ ಅಭಿವೃದ್ಧಿಗಾಗಿ ನೈಸರ್ಗಿಕ ಸಂಪನ್ಮೂಲಗಳ ಗರಿಷ್ಠ ಬಳಕೆಯನ್ನು ಸಾಧಿಸುವ ಪೂರಕ ಪರಿಸರವನ್ನು ಸೃಷ್ಟಿಸುವುದು.

## 3. ಉದ್ದೇಶಗಳು

3.1 ಕೈಗಾರಿಕಾ ಬೆಳವಣಿಗೆಯನ್ನು ವಾರ್ಷಿಕ ಶೇ 12ರ ಗತಿಯಲ್ಲಿ ಮುಂದುವರಿಸುವುದು

3.2 ರಾಜ್ಯ ಜಿಡಿಪಿಯಲ್ಲಿ ಪ್ರಸಕ್ತ 16.87% ಇರುವ ಉತ್ಪಾದನಾ ವಲಯದ ಪಾಲನ್ನು, ನೀತಿಯ ಅವಧಿಯ ಅಂತ್ಯದ ವೇಳೆಗೆ 20%ಗೆ ಹೆಚ್ಚಿಸುವುದು

3.3 ರೂ. 5 ಲಕ್ಷ ಕೋಟಿಗಳ ಬಂಡವಾಳವನ್ನು ಆಕರ್ಷಿಸುವುದು

3.4 15 ಲಕ್ಷ ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸುವುದು

3.5 ರಾಜ್ಯದಲ್ಲಿ ಸುಸೂತ್ರವಾಗಿ ಉದ್ಯಮ–ವ್ಯವಹಾರ ಕೈಗೊಳ್ಳುವಂತಹ ವಾತಾವರಣವನ್ನು ಕಲ್ಪಿಸುವುದು

## 4. ಕಾರ್ಯತಂತ್ರಗಳು

4.1 ಸಮಗ್ರ ಸೌಲಭ್ಯಗಳಿರುವ ಉತ್ತಮ ಗುಣಮಟ್ಟದ ಮೂಲಭೂತ ಸೌಕರ್ಯವನ್ನು ಕಲ್ಪಿಸುವುದು

4.2 ಸಾಮರ್ಥ್ಯ ವರ್ಧನೆ ಮತ್ತು ಕುಶಲತೆಯ ಆಧುನೀಕರಣದ ಮೂಲಕ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವುದು

4.3 ಅನುಕೂಲಕರ ವ್ಯವಸ್ಥೆ ಮತ್ತು ನೀತಿನಿಯಮಗಳ ಸುಧಾರಣೆ

4.4 ತಾಲೂಕುಗಳ ವರ್ಗೀಕರಣ

4.5 ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಕೈಗಾರಿಕಾಭಿವೃದ್ಧಿಗೆ ಉತ್ತೇಜನ

4.6 ಎಮ್ ಎಸ್ ಎಮ್ ಇಗಳಿಗೆ ಉತ್ತೇಜನ

4.7 ಪರಿಶಿಷ್ಟ ಜಾತಿ/ ಪಂಗಡಗಳನ್ನು ಉತ್ತೇಜಿಸಲು ವಿಶೇಷ ಒತ್ತು

4.8 ಮಹಿಳಾ ಉದ್ಯಮಶೀಲರಿಗೆ ಉತ್ತೇಜನ

4.9 ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು, ಅಂಗವಿಕಲರು, ಮಾಜಿ ಯೋಧ ಉದ್ಯಮಶೀಲರಿಗೆ ಉತ್ತೇಜನ

4.10 ಅನಿವಾಸಿ ಕನ್ನಡಿಗರಿಗೆ (ಎನ್ ಆರ್ ಕೆಗಳು) ಉತ್ತೇಜನ

4.11 ರಫ್ತು ವಲಯಕ್ಕೆ ಉತ್ತೇಜನ

4.12 ಇಂಧನ ಉಳಿತಾಯ ಕ್ರಮಗಳನ್ನು ಅಳವಡಿಸುವ ಘಟಕಗಳಿಗೆ ಉತ್ತೇಜನ

4.13 ಪುನರ್ ಬಳಕೆ ಇಂಧನ ಯೋಜನೆಗಳಿಗೆ ಉತ್ತೇಜನ

4.14 ಪರಿಸರ ಸ್ನೇಹಿ ಹಸಿರು ಮತ್ತು ಸ್ವಚ್ಛ ಯೋಜನೆಗಳಿಗೆ ಉತ್ತೇಜನ

4.15 ಆರ್ ಅಂಡ್ ಡಿ ಹಾಗೂ ಡಿಜಿಟಲ್ ಡೈರೆಕ್ಟ್ ತಯಾರಿಕೆಗೆ ಬೆಂಬಲ

4.16 ಇಂಟಲೆಕ್ಚುವಲ್ ಪ್ರಾಪರ್ಟಿ ರೈಟ್ಸ್‌ಗಾಗಿ ಉಪಕ್ರಮ

4.17 ಬಂಡವಾಳ ಮತ್ತು ವ್ಯಾಪಾರಕ್ಕೆ ಪ್ರೋತ್ಸಾಹ

4.18 ಆ್ಯಂಕರ್ ಕೈಗಾರಿಕೆಗಳಿಗೆ ಉತ್ತೇಜನ

4.19 ದೊಡ್ಡ, ಬೃಹತ್, ಅತಿ ಬೃಹತ್, ಅತ್ಯಂತ ಬೃಹತ್ ಉದ್ಯಮಗಳಿಗಾಗಿ ಪ್ರೋತ್ಸಾಹಗಳು ಮತ್ತು ವಿನಾಯಿತಿಗಳು

4.20 ಪ್ರಮುಖ ಒತ್ತಾಸೆಯ ಕೈಗಾರಿಕೆಗಳು

4.21 ಆಯವ್ಯಯದ ಬೆಂಬಲ

5. ನೀತಿಯ ಕ್ರಮಗಳು

**5.1 ಸಮಗ್ರ ಸೌಲಭ್ಯಗಳಿರುವ ಉತ್ತಮ ಗುಣಮಟ್ಟದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದು:**

**5.1.1 ಕೆಐಎಡಿಬಿ ಮೂಲಕ ಹೊಸ ಕೈಗಾರಿಕಾ ಪ್ರದೇಶಗಳ ಸ್ಥಾಪನೆ :**

5.1.1.1 ಕೈಗಾರಿಕಾಭಿವೃದ್ಧಿಗಾಗಿ ಸಾಕಷ್ಟು ವಿಸ್ತೀರ್ಣದ, ಬಳಸಲು ಸಿದ್ಧವಾದ ಭೂಮಿ ಪೂರ್ವಾಗತ್ಯವಾಗಿದೆ. ರಾಜ್ಯದ ಎಲ್ಲೆಡೆ ಬಂಡವಾಳ ಹೂಡಿಕೆದಾರರಿಗೆ ಸಮಗ್ರ ಮೂಲಸೌಕರ್ಯಗಳಿರುವ ಕೈಗಾರಿಕಾ ಭೂಮಿಯನ್ನು ಒದಗಿಸುವತ್ತ ರಾಜ್ಯವು ಹೆಚ್ಚಿನ ಗಮನವನ್ನು ನೀಡಲಿದೆ.

5.1.1.2 ಕೈಗಾರಿಕಾ ಉದ್ದೇಶಗಳಿಗಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಭಾರತ ಸರ್ಕಾರ "The right to fair compensation and transparency in land acquisition, rehabilitation and resettlement Act 2013"ರಲ್ಲಿ ಘೋಷಿಸಿರುವ ಮಾರ್ಗದರ್ಶನಗಳನ್ನು ಅನುಸರಿಸಲಾಗುವುದು. ಕೈಗಾರಿಕಾ ಉದ್ದೇಶಗಳಿಗಾಗಿ ನಿಷ್ಕ್ರಿಯ, ಬಂಜರು, ಖರಾಬ್, ಒಣ ಮತ್ತು ಒಂದು ಬೆಳೆಯ ಭೂಮಿಯನ್ನು ಮಾತ್ರ ಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಖಾತರಿಪಡಿಸಲಾಗುವುದು.

ಕೆಐಎಡಿಬಿಯು ಕೈಗಾರಿಕೆಗಳಿಗೆ ಭೂಮಿಯನ್ನು ಸ್ವಾಧೀನ ಪಡಿಸುವ ಸಂದರ್ಭದಲ್ಲಿ, ಸಾಧ್ಯವಾದಷ್ಟು ಮಟ್ಟಿಗೆ ಭೂಮಿ ಕಳೆದುಕೊಳ್ಳುವ ಪ್ರತಿ ಕುಟುಂಬದಲ್ಲಿ ಕನಿಷ್ಠ ಒಬ್ಬರಿಗಾದರೂ ಉದ್ಯೋಗವನ್ನು ದೊರಕಿಸುವ ನಿಟ್ಟಿನಲ್ಲಿ ಯತ್ನಿಸಲಿದೆ.

5.1.1.3 ಪ್ರತಿ ಕೈಗಾರಿಕಾ ಪ್ರದೇಶವನ್ನು, ಸೂಕ್ತ ಸಂಪರ್ಕ, ಸಮರ್ಪಕ ನೀರು ಪೂರೈಕೆ, ವಿದ್ಯುಚ್ಛಕ್ತಿ ಹಾಗೂ ಇತರ ಅತ್ಯವಶ್ಯಕ ಸೌಕರ್ಯಗಳೊಂದಿಗೆ ಆರ್ಥಿಕವಾಗಿ ಲಾಭದಾಯಕವಾಗುವಂತೆ ಮಾತ್ರ ನಿರ್ಮಿಸಲಾಗುವುದು. ಕೈಗಾರಿಕಾ ಪ್ರದೇಶದ ಸಂಪೂರ್ಣ ಅಭಿವೃದ್ಧಿಯ ನಂತರವೇ ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು.

5.1.1.4 ಒಂದು ಸಾವಿರ ಎಕರೆಗಳನ್ನು ಮೀರಿದ ವಿಸ್ತೀರ್ಣದ ಎಲ್ಲಾ ಮುಂಬರುವ ಕೆಐಎಡಿಬಿ ಕೈಗಾರಿಕಾ ಪ್ರದೇಶಗಳಲ್ಲಿ ವಸತಿ, ಸರ್ವಿಸ್ ಅಪಾರ್ಟ್‌ಮೆಂಟ್ಸ್, ಆಸ್ಪತ್ರೆಗಳು, ಷಾಪಿಂಗ್ ಸಮುಚ್ಚಯಗಳು, ಉಪಾಹಾರಗೃಹಗಳು ಮುಂತಾದ ಬೆಂಬಲಾತ್ಮಕ ಸಾಮಾಜಿಕ ಸೌಲಭ್ಯಗಳಿಗಾಗಿ ಶೇ 10ರಷ್ಟು ಜಾಗವನ್ನು ಮೀಸಲಾಗಿಡಲು ಉದ್ದೇಶಿಸಲಾಗಿದೆ.

5.1.1.5 ಕೆಐಎಡಿಬಿ ಕೈಗಾರಿಕಾ ಪ್ರದೇಶಗಳಲ್ಲಿ ವಿದ್ಯುತ್ ಉತ್ಪಾದನಾ ಘಟಕಗಳಿಗೆ ಭೂಮಿ ಒದಗಿಸುವತ್ತ ಆದ್ಯತೆ ನೀಡಲಾಗುವುದು.

5.1.1.6 ಲಭ್ಯವಿರುವ ಭೂಮಿಯನ್ನು ಗರಿಷ್ಠವಾಗಿ ಉಪಯೋಗಿಸಿಕೊಳ್ಳಲಾಗುತ್ತದೆ ಎನ್ನುವುದನ್ನು ಖಚಿತಪಡಿಸಿಕೊಳ್ಳಲು ಸರ್ಕಾರವು ಅನುಮೋದನೆಗೆ ಮುಂಚಿತವಾಗಿ ಯೋಜನೆಯ ಭೂ ಅಗತ್ಯತೆಗಳನ್ನು ಪರಿಶೀಲಿಸಲಾಗುವುದು.

5.1.1.7 ಇನ್ನು ಮುಂದೆ ಕೆಐಎಡಿಬಿ, ಯೋಜನಾ ಪ್ರತಿಪಾದಕರಿಗೆ 99 ವರ್ಷಗಳ ಗುತ್ತಿಗೆಯ ಆಧಾರದ ಮೇಲೆ ಮಾತ್ರ ಕೈಗಾರಿಕಾ ಭೂಮಿಯನ್ನು ನೀಡುತ್ತದೆ.

5.1.1.8 ಕೈಗಾರಿಕಾ ಬಳಕೆಗಾಗಿ ಕೈಗಾರಿಕಾ ಪ್ರದೇಶಗಳಿಗೆ ಕೆಐಎಡಿಬಿಯು ಸಂಸ್ಕರಿತ ನೀರನ್ನು ಪೂರೈಸುತ್ತದೆ. ಕೆಐಎಡಿಬಿ, ಕುಡಿಯುವ ನೀರಿನ ಪೂರೈಕೆಗಾಗಿಯೂ ಸೂಕ್ತ ವ್ಯವಸ್ಥೆಗಳನ್ನು ಮಾಡುತ್ತದೆ.

5.1.1.9 ಕೆಪಿಟಿಸಿಎಲ್, ಈಗಿನ ಮತ್ತು ಮುಂಬರುವ ಕೆಐಎಡಿಬಿ ಕೈಗಾರಿಕಾ ಪ್ರದೇಶಗಳಿಗಾಗಿ ಸೂಕ್ತ ಸಾಮರ್ಥ್ಯಗಳ ವಿದ್ಯುತ್ ಉಪ ಕೇಂದ್ರಗಳನ್ನು ನಿರ್ಮಿಸುತ್ತದೆ ಮತ್ತು ಇದರ ವೆಚ್ಚವನ್ನು ಸರ್ಕಾರದವತಿಯಿಂದ ಅಥವಾ ಟ್ಯಾರಿಫ್ ಮೂಲಕ ಭರಿಸಲಾಗುವುದು.

5.1.1.10 33ಕೆವಿ/66 ಕೆವಿ/110ಕೆವಿ/220ಕೆವಿಗಳ ಎಲ್ಲಾ ಕೈಗಾರಿಕಾ ಫೀಡರ್‌ಗಳನ್ನು 24/7 ವಿದ್ಯುತ್ ಪೂರೈಕೆ ಇರುವ ಎಕ್ಸ್‌ಪ್ರೆಸ್ ಫೀಡರ್‌ಗಳೆಂದು ಪರಿಗಣಿಸಲಾಗುವುದು.

5.1.1.11 ಕೆಐಎಡಿಬಿ, ತನ್ನ ವೆಬ್‌ಸೈಟ್ ಮೂಲಕ ಸಾರ್ವಜನಿಕರಿಗೆ ಭೂಮಿ/ನಿವೇಶನದ ಲಭ್ಯತೆಯ ಬಗ್ಗೆ ತಾಜಾ ಮಾಹಿತಿಯನ್ನು ಒದಗಿಸುತ್ತದೆ.

5.1.1.12 ಕೆಐಎಡಿಬಿ, ನೀತಿಯ ಅವಧಿಯಲ್ಲಿ ಕೈಗಾರಿಕಾ ಅಗತ್ಯಗಳಿಗಾಗಿ ರಾಜ್ಯದ ಎಲ್ಲೆಡೆ ಸುಮಾರು 40,000 ಎಕರೆಗಳಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿದೆ. ಕೈಗಾರಿಕಾ ಪ್ರದೇಶಗಳನ್ನು ರೂಪಿಸಲು ಪ್ರತಿ ವರ್ಷ ಸುಮಾರು 8,000 ಎಕರೆಗಳಷ್ಟು ಭೂಮಿಯನ್ನು (ಎಸ್‌ಯುಸಿಗಳು ಒಳಪಟ್ಟಂತೆ) ಹಂತಾನುಹಂತವಾಗಿ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿದೆ.

5.1.1.13 ಹಣದ ಅಗತ್ಯಗಳನ್ನು ಪೂರೈಸಲು ಕೆಐಎಡಿಬಿ, ಒಂದು ಕಾರ್ಪಸ್ ಫಂಡ್‌ನ್ನು ರಚಿಸಲಿದ್ದು, ಇದನ್ನು ಸ್ವಂತ ಹಣಕಾಸು ಸಾಮರ್ಥ್ಯವನ್ನು ವೃದ್ಧಿಗೊಡಿಸಿಕೊಳ್ಳುವಂತೆ ರಿವಾಲ್ವಿಂಗ್ ಆಧಾರದ ರೀತ್ಯ ರೂಪಿಸಲಾಗುವುದು.

### 5.1.2 ಕೈಗಾರಿಕಾ ಕಾರಿಡಾರ್‌ಗಳ ಸ್ಥಾಪನೆ

5.1.2.1 ಚೆನ್ನೈ-ಬೆಂಗಳೂರು-ಚಿತ್ರದುರ್ಗ ಕೈಗಾರಿಕಾ ಕಾರಿಡಾರ್ ( ಸಿಬಿಸಿಐಸಿ) ಮತ್ತು ಬೆಂಗಳೂರು-ಮುಂಬೈ ಆರ್ಥಿಕ ಕಾರಿಡಾರ್ ( ಬಿಎಮ್‌ಇಸಿ) -ಇವುಗಳ ಮೇಲಿನ ಕಾರ್ಯವನ್ನು ದೆಹಲಿ-ಮುಂಬೈ ಕೈಗಾರಿಕಾ ಕಾರಿಡಾರ್ ರೀತಿಯಲ್ಲಿ, ಭಾರತ ಸರ್ಕಾರದ ಬೆಂಬಲದೊಂದಿಗೆ ತ್ವರಿತಗೊಳಿಸಲಾಗುವುದು. ಈ ಕಾರಿಡಾರ್‌ಗಳ ಉದ್ದಕ್ಕೆ ಕೈಗಾರಿಕಾ ಬೆಳವಣಿಗೆಯನ್ನು ಸಾಧಿಸಲು, ಜಪಾನ್ ಇಂಟರ್‌ನ್ಯಾಷನಲ್ ಕೋ-ಆಪರೇಷನ್ ಏಜೆನ್ಸಿ (ಜೆಐಸಿಎ) ಮೂಲಕ ಲಭ್ಯವಿರುವ ತಾಂತ್ರಿಕ ಮತ್ತು ಹಣಕಾಸು ನೆರವನ್ನು ಬಳಸಿಕೊಳ್ಳಲು ಉದ್ದೇಶಿಸಲಾಗಿದೆ.

5.1.2.2 ಇದಲ್ಲದೇ, ರಾಜ್ಯವು ಹಿಂದುಳಿದ ಪ್ರದೇಶಗಳಿಗೆ ಪ್ರಯೋಜನ ತಂದು ರಾಜ್ಯದ ಉದ್ದಗಲಕ್ಕೆ ಸತತ ಕೈಗಾರಿಕಾ ಬೆಳವಣಿಗೆಯನ್ನು ಕಲ್ಪಿಸಲು , ಕೆಳಗಿನ ರಾಜ್ಯ ಕೈಗಾರಿಕಾ ಕಾರಿಡಾರ್(ಎಸ್‌ಐಸಿ)ಗಳನ್ನು ಸ್ಥಾಪಿಸುವ ಅವಕಾಶಗಳನ್ನು ಸಹ ಪರಿಶೀಲಿಸುತ್ತದೆ.

(i) ಬೆಂಗಳೂರು-ಮಂಡ್ಯ -ಮೈಸೂರು-ಚಾಮರಾಜನಗರ
(ii) ಚಿತ್ರದುರ್ಗ-ಬಳ್ಳಾರಿ-ಗುಲ್ಬರ್ಗ-ಬೀದರ
(iii) ಧಾರವಾಡ- ಕೊಪ್ಪಳ-ರಾಯಚೂರು
(iv) ಬೆಂಗಳೂರು-ಹಾಸನ-ಮಂಗಳೂರು
(v) ಚಿತ್ರದುರ್ಗ-ಹಾವೇರಿ-ಕಾರವಾರ
(vi) ತುಮಕೂರು-ಶಿವಮೊಗ್ಗ-ಹೊನ್ನಾವರ
(vii) ರಾಯಚೂರ್-ಬಾಗಲ್‌ಕೋಟೆ-ಬೆಳಗಾವಿ

5.1.2.3 ಬೆಂಗಳೂರು-ಮಂಡ್ಯ-ಮೈಸೂರು-ಚಾಮರಾಜನಗರ ಕಾರಿಡಾರ್ ಜ್ಞಾನ ಆಧಾರಿತ ಕೈಗಾರಿಕಾ ಕಾರಿಡಾರ್ ಆಗಿ ಸ್ಥಾಪಿತವಾಗಲು ಸೂಕ್ತವಾಗಿದೆ.

5.1.2.4 ಭಾರತ ಸರ್ಕಾರವು ತುಮಕೂರು, ಕೋಲಾರ, ಗುಲ್ಬರ್ಗ, ಬೀದರ ಜಿಲ್ಲೆಗಳಲ್ಲಿ ನಾಲ್ಕು ರಾಷ್ಟ್ರೀಯ ಬಂಡವಾಳ ಮತ್ತು ಉತ್ಪಾದನಾ ವಲಯಗಳ( ಎನ್‌ಐಎಮ್‌ಜೆಡ್) ಸ್ಥಾಪನೆಗೆ ತತ್ವಶಃ ಅನುಮತಿ ನೀಡಿದೆ. ಸಿಬಿಸಿಐಸಿ/ಎಸ್‌ಐಸಿಯ ಉದ್ದಕ್ಕೆ ಈ ಸ್ಥಳಗಳಲ್ಲಿನ ಎನ್‌ಐಎಮ್‌ಜೆಡ್‌ಗಳು ಅಥವಾ ಕೈಗಾರಿಕಾ ಕೇಂದ್ರ ತಾಣಗಳು, ಎಲ್ಲೆಡೆ ಉತ್ಪಾದನಾ ವಲಯದ ಬೆಳವಣಿಗೆಗೆ ಚಾಲನೆ ನೀಡುತ್ತವೆ.

5.1.2.5 ಎನ್‌ಐಎಮ್‌ಜೆಡ್‌ಗಳನ್ನು, ಭಾರತ ಸರ್ಕಾರದ ರಾಷ್ಟ್ರೀಯ ಉತ್ಪಾದನಾ ನೀತಿಯ ಮಾರ್ಗದರ್ಶನಗಳಡಿ ವಿಶೇಷ ಉದ್ದೇಶದ ಸಂಸ್ಥೆಗಳ (ಎಸ್‌ಪಿವಿಗಳು) ಮುಖೇನ ಅಭಿವೃದ್ಧಿಪಡಿಸಲಾಗುವುದು. ರಾಜ್ಯಸರ್ಕಾರವು ಈ ಎಸ್‌ಪಿವಿಗಳನ್ನು ಈಕ್ವಿಟಿ ಭಾಗವಹಿಸುವಿಕೆಯ ಮೂಲಕ (ಪ್ರತಿ ಎನ್‌ಐಎಮ್‌ಜೆಡ್‌ಗಾಗಿ ರೂ. 500 ಕೋಟಿ ಮೀರದಂತೆ) ಬೆಂಬಲಿಸುತ್ತದೆ. ಎಸ್‌ಪಿವಿಗಳು ತಮ್ಮ ಕರ್ತವ್ಯಗಳನ್ನು ಸಮರ್ಥವಾಗಿ ನಿಭಾಯಿಸುವುದನ್ನು ಸಾಧ್ಯವಾಗಿಸಲು ರಾಜ್ಯವು ಅಗತ್ಯ ಕಾನೂನುಗಳನ್ನು ಜಾರಿಗೊಳಿಸುತ್ತದೆ.

5.1.2.6 ರಸ್ತೆಗಳು, ನೀರು ಪೂರೈಕೆ, ವಿದ್ಯುತ್ ಮತ್ತು ಬಂದರುಗಳು ಒಳಪಟ್ಟಂತೆ ಕೈಗಾರಿಕಾ ಮೂಲವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವತ್ತ ಹೆಚ್ಚುವರಿ ಖಾಸಗಿ ಬಂಡವಾಳವನ್ನು ಆಕರ್ಷಿಸಲು ಪಿಪಿಪಿ ವಿಧಾನವನ್ನು ಪ್ರೋತ್ಸಾಹಿಸಲಾಗುವುದು.

5.1.2.7 ರಾಜ್ಯ ಸರ್ಕಾರವು ಮಂಗಳೂರು ಬಂದರು ಸಾಮರ್ಥ್ಯವನ್ನು ಗರಿಷ್ಠವಾಗಿ ಬಳಸಿಕೊಂಡು, ತದಡಿ ಬಂದರನ್ನು ಸಕಲ ಋತುಗಳ ಬಂದರಾಗಿ ಅಭಿವೃದ್ಧಿಪಡಿಸುತ್ತದೆ. ನವ ಮಂಗಳೂರಿನ ಬಂದರನ್ನು ಆಧುನೀಕರಿಸಿ, ಎನ್‌ಐಎಮ್‌ಜೆಡ್ ತುಮಕೂರು ಮತ್ತು ಬೆಂಗಳೂರಿನೊಂದಿಗೆ ಸಂಪರ್ಕ ಕಲ್ಪಿಸುವುದನ್ನು ಸಿಬಿಸಿಐಸಿ ಯೋಜನೆಯ ಒಂದು ಮುಖ್ಯ ಅಂಗವನ್ನಾಗಿ ಮಾಡಲಾಗುವುದು.

### 5.1.3 ವಿಶೇಷ ಬಂಡವಾಳ ವಲಯ (ಎಸ್‌ಐಆರ್)

ಬೆಂಗಳೂರಿನಲ್ಲಿ ದಟ್ಟತೆಯನ್ನು ಕಡಿಮೆ ಮಾಡಿ ಕೈಗಾರಿಕಾಭಿವೃದ್ಧಿಯ ಮೂಲಕ ಇತರ ಪ್ರದೇಶಗಳನ್ನು ಬೆಳೆಸಲು ಅವಕಾಶವುಳ್ಳ ಪ್ರದೇಶಗಳನ್ನು ವಿಶೇಷ ಬಂಡವಾಳ ವಲಯಗಳೆಂದು (ಎಸ್‌ಐಆರ್‌ಗಳು) ಪ್ರಕಟಿಸಿ ಗಣನೀಯವಾಗಿ ಮೂಲ ವ್ಯವಸ್ಥೆ ಬೆಂಬಲವನ್ನು ಒದಗಿಸಲು ರಾಜ್ಯ ಸರ್ಕಾರ ಉದ್ದೇಶಿಸಿದೆ. ಧಾರವಾಡ, ಬೆಳಗಾವಿ, ಹಾವೇರಿ, ಗದಗ ಜಿಲ್ಲೆಗಳಿಗೆ ಅನ್ವಯಿಸುವಂತೆ ಈ ರೀತಿಯ ಒಂದು ಎಸ್‌ಐಆರ್ ವಲಯವನ್ನು ಪ್ರಕಟಿಸಲು ಉದ್ದೇಶಿಸಲಾಗಿದೆ.

ಮೈಸೂರು, ಮಂಗಳೂರು, ಹಾಸನ, ಬಾಗಲಕೋಟೆ, ಬಿಜಾಪುರ, ರಾಯಚೂರು, ಕೊಪ್ಪಳ, ಬಳ್ಳಾರಿಯನ್ನು ಕೈಗಾರಿಕಾ ಕೇಂದ್ರ ಬಿಂದುಗಳಾಗಿ ಅಭಿವೃದ್ಧಿಪಡಿಸಲಾಗುವುದು.

### 5.1.4 ಖಾಸಗಿ ಬಂಡವಾಳ ಹೂಡಿಕೆದಾರರು ಅಥವಾ ಪಿಪಿಪಿ ಅಥವಾ ಇತರ ಸರ್ಕಾರಿ ಸಂಸ್ಥೆಗಳ ಸಹಯೋಗದೊಂದಿಗೆ ಕೈಗಾರಿಕಾ ಪ್ರದೇಶಗಳು ಮತ್ತು ನಿವೇಶನಗಳ ಸ್ಥಾಪನೆ

ಹೊಸ ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸುವಲ್ಲಿ ಕೆಐಎಡಿಬಿ ಮತ್ತು ಕೆಎಸ್‌ಎಸ್‌ಐಡಿಸಿ ಎದುರಿಸುವ ಇತಿ–ಮಿತಿಗಳನ್ನು (ನಿಧಿಗಳನ್ನು ಕ್ರೋಢೀಕರಣ ಮತ್ತು ಮಾನವಬಲ ಕೊರತೆ) ಗಮನಕ್ಕೆ ತೆಗೆದುಕೊಂಡು ಖಾಸಗಿ ಬಂಡವಾಳ ಹೂಡಿಕೆದಾರರು ಅಥವಾ ಮತ್ತೊಂದು ಸರ್ಕಾರದ ಸಹಯೋಗದೊಂದಿಗೆ ಅಥವಾ ಪಿಪಿಪಿ ನಮೂನೆಯ ಮೂಲಕ ರಾಜ್ಯದಲ್ಲಿ ಕೈಗಾರಿಕಾ ಪ್ರದೇಶಗಳು ಮತ್ತು ನಿವೇಶನಗಳ ಸ್ಥಾಪನೆಗೆ ಉತ್ತೇಜನ ನೀಡಲು ಉದ್ದೇಶಿಸಲಾಗಿದೆ.

ಎ) **ಅರ್ಹತೆ :** ಭಾರತ ಸರ್ಕಾರ ಅನುಮೋದಿಸಿದ ಅಥವಾ ರಾಜ್ಯ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಎಸಿಎಸ್/ಪ್ರಧಾನ ಕಾರ್ಯದರ್ಶಿಯ ಅಧ್ಯಕ್ಷತೆಯ ಸಮಿತಿ ಶಿಫಾರಸು ಮಾಡಿ, ಎಸ್‌ಹೆಚ್‌ಎಲ್‌ಸಿಸಿ ಅನುಮೋದಿಸಿದ ಕನಿಷ್ಠ 100 ಎಕರೆಗಳ ವಿಸ್ತೀರ್ಣವಿರುವ ಯೋಜನೆಗಳು.

ಬಿ) **ಭೂಮಿ :** ಕೆಳಗಿನ ಯಾವುದಾದರೂ ಒಂದು ಕಾರ್ಯವಿಧಾನದ ಮೂಲಕ ಖಾಸಗಿ ಕೈಗಾರಿಕಾ ಪ್ರದೇಶಗಳು/ನಿವೇಶನಗಳು/ಲೇಔಟ್‌ಗಳು/ಪಾರ್ಕ್‌ಗಳ ಅಭಿವೃದ್ಧಿಗಾಗಿ ಯೋಜನಾ ಪ್ರತಿಪಾದಕರಿಗೆ ಭೂಮಿಯನ್ನು ಒದಗಿಸಲಾಗುವುದು:

1. ಖಾಸಗಿ ಕೈಗಾರಿಕಾ ಪ್ರದೇಶಗಳು/ನಿವೇಶನಗಳು/ಲೇಔಟ್‌ಗಳು/ಪಾರ್ಕ್‌ಗಳ ಅಭಿವೃದ್ಧಿಗಾಗಿ ಕೆಎಲ್‌ಆರ್ ಕಾಯ್ದೆಯ ಸೆಕ್ಷನ್ 109 ರೀತ್ಯಾ ವಿನಾಯಿತಿ ಪಡೆದ ಭೂಮಿಯನ್ನು ಭೂಮಾಲೀಕರಿಂದ ಖರೀದಿಸಲು ಅನುಮತಿ ನೀಡಲಾಗುವುದು. ಆದರೆ ಇದು ಸ್ಥಳೀಯ ಯೋಜನಾ ಪ್ರಾಧಿಕಾರ ಅನುಮೋದಿಸಿದ ಮಾಸ್ಟರ್ ಪ್ಲಾನ್ ಮೇರೆಗೆ ಭೂಬಳಕೆಗೆ ಅನುಗುಣವಾಗಿರಬೇಕು.

2. ಖಾಸಗಿ ಕೈಗಾರಿಕಾ ಪ್ರದೇಶಗಳು/ನಿವೇಶನಗಳು/ಲೇಔಟ್‌ಗಳು/ಪಾರ್ಕ್‌ಗಳ ಅಭಿವೃದ್ಧಿಗಾಗಿ ಯೋಜನಾ ಪ್ರತಿಪಾದಕರ ಸ್ವಂತ ಭೂಮಿಯನ್ನು ಉಪಯೋಗಿಸಿಕೊಳ್ಳಲಾಗುವುದು. ಆದರೆ ಇದು ಸ್ಥಳೀಯ ಆಯೋಜನಾ ಪ್ರಾಧಿಕಾರ ಅನುಮೋದಿಸಿದ ಮಾಸ್ಟರ್ ಪ್ಲಾನ್ ಮೇರೆಗೆ ಭೂಬಳಕೆಗೆ ಅನುಗುಣವಾಗಿರಬೇಕು.

3. ಖಾಸಗಿ ಕೈಗಾರಿಕಾ ಪ್ರದೇಶಗಳು / ಕೈಗಾರಿಕಾ ಪ್ರದೇಶಗಳ ಡೆವಲಪರ್‌ಗಳು / ನಿವೇಶನಗಳು / ಲೇಔಟ್‌ಗಳು/ ಪಾರ್ಕ್‌ಗಳ ಅಭಿವೃದ್ಧಿಗಾಗಿ ಪಾರದರ್ಶಕ ವಿಧಾನದ ಮೂಲಕ ಕೆಐಎಡಿಬಿ ಸ್ವಾಧೀನಪಡಿಸಿಕೊಳ್ಳುವ ಪ್ರದೇಶದಲ್ಲಿ ಬೃಹತ್ ವಿಸ್ತೀರ್ಣವನ್ನು ನಿಗದಿಪಡಿಸುವಿಕೆ.

**ಸಿ) ಅಭಿವೃದ್ಧಿ**

ಇಂತಹ ಯೋಜನೆಗಳನ್ನು ಅಭಿವೃದ್ಧಿಪಡಿಸುವವರು ಅಥವಾ ಸಹ ಅಭಿವೃದ್ಧಿಗಾರರು ರಸ್ತೆ, ಸೇತುವೆ, ವಿದ್ಯುತ್ ಉತ್ಪಾದನೆ, ಪ್ರಸರಣ ಮತ್ತು ವಿತರಣೆ, ನೀರು ಪೂರೈಕೆ, ಒಳಚರಂಡಿ ವ್ಯವಸ್ಥೆ (ಯುಜಿಡಿ) ಮುಂತಾದ ಎಲ್ಲಾ ಮೂಲ ಬೆಂಬಲಾತ್ಮಕ ವ್ಯವಸ್ಥೆಯನ್ನು ಕೈಗಾರಿಕಾ ಪ್ರದೇಶದಲ್ಲಿ/ನಿವೇಶನದಲ್ಲಿ/ ಲೇಔಟ್‌ನಲ್ಲಿ/ಪಾರ್ಕ್‌ನಲ್ಲಿ ಅಭಿವೃದ್ಧಿಪಡಿಸಿ, ನಿರ್ಮಿಸಿ ಸ್ಥಾಪಿಸಬೇಕು. ಖಾಸಗಿ ಬಂಡವಾಳ ಹೂಡಿಕೆದಾರರು ಗ್ಯಾಸ್ ವಿತರಣಾ ಕಾರ್ಯಜಾಲ, ಸಂಪರ್ಕ ಮತ್ತು ಡೇಟಾ ನೆಟ್‌ವರ್ಕ್ ಪ್ರಸರಣ, ತ್ಯಾಜ್ಯ ಜಲ ಸಂಸ್ಕರಣೆ ಮತ್ತು ಘನ ತ್ಯಾಜ್ಯ ನಿರ್ವಹಣೆ, ಮಳಿಗೆ ಇತ್ಯಾದಿ ಬೆಂಬಲಾತ್ಮಕ ಸೇವೆಯನ್ನು ಕೈಗಾರಿಕಾ ಪ್ರದೇಶಗಳು/ಪಾರ್ಕ್‌ಗಳಲ್ಲಿ ಕಲ್ಪಿಸಬೇಕಾದ ಅಗತ್ಯವಿದೆ.

ಖಾಸಗಿ ಬಂಡವಾಳ ಹೂಡಿಕೆದಾರರು ಮೇಲೆ ಸೂಚಿತ ಎಲ್ಲಾ ಷರತ್ತುಗಳನ್ನು ಪರಿಪಾಲಿಸಲು ಸ್ಥಳೀಯ ಅಧಿಕಾರಿಯಿಂದ ಆಯೋಜನಾ ಪರವಾನಗಿಯನ್ನು ಕಡ್ಡಾಯವಾಗಿ ಪಡೆಯಬೇಕು.

ಅಗತ್ಯವಾದೆಡೆ, ಖಾಸಗಿ ಬಂಡವಾಳ ಹೂಡಿಕೆದಾರರು ಕಾನೂನು ರೀತ್ಯಾ ಹಾಗೂ ಅನುಮೋದನೆಯ ಷರತ್ತುಗಳಿಗೆ ಒಳಪಟ್ಟಂತೆ ಇಡೀ ಕೈಗಾರಿಕಾ ಪ್ರದೇಶ/ನಿವೇಶನ/ ಲೇಔಟ್/ ಪಾರ್ಕ್‌ಗಾಗಿ ಪರಿಸರ ಪರವಾನಗಿಗಳನ್ನು ಪಡೆಯಬೇಕು.

ಖಾಸಗಿ ಬಂಡವಾಳ ಹೂಡಿಕೆದಾರರು ಕೈಗಾರಿಕಾ ಪ್ರದೇಶ/ನಿವೇಶನದ ಎಲ್ಲಾ ಮೂಲವ್ಯವಸ್ಥೆ ಸೌಲಭ್ಯಗಳು, ಅನುಕೂಲಗಳು ಮತ್ತು ಬೆಂಬಲಾತ್ಮಕ ಸೇವೆಗಳನ್ನು ''ಪಾವತಿಸಿರಿ–ಬಳಸಿರಿ'' ಆಧಾರದ ಮೇಲೆ ನಿರ್ವಹಿಸಲು ಮತ್ತು ನಿಭಾಯಿಸಲು ಜವಾಬ್ದಾರರಾಗಿರುತ್ತಾರೆ.

**ಡಿ) ಉಪಗುತ್ತಿಗೆಗೆ ಅನುಮತಿ:**

ಉಪ ಗುತ್ತಿಗೆಗಾಗಿ ಕೆಐಎಡಿಬಿ ಕೈಗಾರಿಕಾ ಪ್ರದೇಶದಲ್ಲಿ ನಿಗದಿಮಾಡಲಾಗುವ ಬೃಹತ್ ಭೂ ವಿಸ್ತೀರ್ಣಕ್ಕೆ ಸಂಬಂಧಪಟ್ಟಂತೆ, ಪ್ರಮೋಟರ್‌ಗಳು ಯೋಜನಾ ವರದಿ ಸಲ್ಲಿಸಿದ ಸಮಯದಲ್ಲಿ ಸೂಕ್ತ ಪ್ರಾಧಿಕಾರದಿಂದ ಪಡೆದ ಅನುಮತಿಗೆ ಅನುಸಾರವಾಗಿ ಕೈಗಾರಿಕಾ ಪ್ರದೇಶ/ನಿವೇಶನ/ಲೇಔಟ್/ಪಾರ್ಕ್ ಅನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿದ ನಂತರವೇ ಪ್ಲಾಟ್‌ಗಳು/ಶೆಡ್‌ಗಳನ್ನು ಉಪ ಗುತ್ತಿಗೆಗೆ ಕೊಡಬಹುದಾಗಿದೆ.

ಈ ರೀತಿ ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಕೈಗಾರಿಕಾಯೇತರ ಬಳಕೆಗೆ ಪರಿವರ್ತಿಸಲು ಅನುಮತಿ ನೀಡಲಾಗುವುದಿಲ್ಲ.

**ಇ) ಕಾರ್ಯಾಚರಣೆ ಕುರಿತ ಮಾರ್ಗಸೂಚಿಯನ್ನು ಪ್ರತ್ಯೇಕವಾಗಿ ನೀಡಲಾಗುವುದು**

5.1.5 ಭೂಮಿಯ ಗರಿಷ್ಠ ಬಳಕೆ

5.1.5.1 ಕೆಐಎಡಿಬಿ, ಪ್ರಸಕ್ತ ಕೈಗಾರಿಕಾ ಪ್ರದೇಶಗಳಲ್ಲಿ ಲಭ್ಯವಿರುವ ಭೂಮಿಯನ್ನು ಬಿಡುಗಡೆ ಮಾಡಿ, ಕೈಗಾರಿಕೆಗಾಗಿ ಅತಿ ಹೆಚ್ಚು ಭೂಮಿಯನ್ನು ನೀಡಬೇಕಾದ ಅಗತ್ಯವನ್ನು ಸರಿದೂಗಲು ಫ್ಲೋರ್ ಏರಿಯಾ ರೇಷಿಯೋ (ಎಫ್ ಎಆರ್) ಅನ್ನು ಪ್ರಸಕ್ತ ಸರಾಸರಿ ಮಟ್ಟಗಳಾದ 1.0-3.0ಗೆ ಹೆಚ್ಚಿಸಲು ಹಾಗೂ ಸರಾಸರಿ ಭೂವ್ಯಾಪ್ತಿಯನ್ನು 45-50% ರಿಂದ 70% ಗೆ ಹೆಚ್ಚಿಸಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತದೆ.

5.1.5.2 ಕೈಗಾರಿಕಾ ಉದ್ದೇಶಗಳಿಗಾಗಿ ಕೆಐಎಡಿಬಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಯೋಜನಾ ಪ್ರತಿಪಾದಕರಿಗೆ ಲೀಸ್ ಪತ್ರ / ಮಾರಾಟ ಪತ್ರ ನೀಡಿದ ನಂತರವೂ ಕೈಗಾರಿಕಾ ಉದ್ದೇಶಗಳಿಗಾಗಿ ಹೊರತು ಇತರ ಯಾವುದೇ ಉದ್ದೇಶಕ್ಕಾಗಿ ಬಳಸಲು/ಪರಿವರ್ತಿಸಲು ಅನುಮತಿಸಲಾಗುವುದಿಲ್ಲ. ಇದೇ ರೀತಿ, ಯಾವುದೇ ಪರಿಸ್ಥಿತಿಯಲ್ಲಿ ಭೂ ಬಳಕೆಯ ಪರಿವರ್ತನೆಯನ್ನು ಅನುಮತಿಸಲಾಗುವುದಿಲ್ಲ ಅಥವಾ ಯಾವುದೇ ಸ್ಥಳೀಯ ಆಯೋಜನಾ ಪ್ರಾಧಿಕಾರಕ್ಕೆ ಶಿಫಾರಸು ಮಾಡಲಾಗುವುದಿಲ್ಲ. ಇದನ್ನು ಕುರಿತಂತೆ ಸೂಕ್ತ ನಿಯಮಗಳನ್ನು ರೂಪಿಸಲಾಗುವುದು ಮತ್ತು ಕೆಐಎಡಿಬಿ ಸ್ವಾಧೀನದ ಪ್ರದೇಶಗಳನ್ನು ತಮ್ಮ ಮಾಸ್ಟರ್ ಪ್ಲಾನ್‌ಗಳಲ್ಲಿ ಕಾಲಕಾಲಕ್ಕೆ ಕೈಗಾರಿಕಾ ವಲಯಗಳಾಗಿ ನಿರ್ವಹಿಸುವಂತೆ ಸ್ಥಳೀಯ ಆಯೋಜನಾ ಅಧಿಕಾರಿಗಳಿಗೆ ಸಲಹೆ ಮಾಡಲಾಗುವುದು.

5.1.6 ಪ್ರಸಕ್ತ ಕಾರ್ಯನಿರತ ಕೈಗಾರಿಕಾ ಪ್ರದೇಶಗಳಲ್ಲಿ ಮತ್ತು ವಸಾಹತುಗಳಲ್ಲಿ ಮೂಲಭೂತ ವ್ಯವಸ್ಥೆಯ ಮೇಲ್ದರ್ಜೆಗೆ ಏರಿಸುವಿಕೆ:

5.1.6.1 10 ವರ್ಷಗಳಿಗಿಂತ ಹಳೆಯದಾದ ಪ್ರಸಕ್ತ ಕೈಗಾರಿಕಾ ಪ್ರದೇಶಗಳು ಮತ್ತು ನಿವೇಶನಗಳಿಗೆ, ಅವುಗಳ ಅತಿ ಮುಖ್ಯ ಮೂಲಭೂತ ವ್ಯವಸ್ಥೆಗಳನ್ನು "ಸಂಸ್ಥೆಗಳಿಗೆ ಮೂಲಭೂತ ವ್ಯವಸ್ಥೆಗಾಗಿ ಬೆಂಬಲ" ಎನ್ನುವ ಚಾಲ್ತಿಯಲ್ಲಿನ ಯೋಜನೆ ಯಡಿ, ಬಂಡವಾಳ ಬೆಂಬಲವನ್ನು ಒದಗಿಸಲಾಗುವುದು ಹಾಗೂ ನೀತಿಯ ಅವಧಿಯಲ್ಲಿ ಅಧಿಕ ಹಣವನ್ನು ಒದಗಿಸಲಾಗುವುದು. ಆದರೆ ಇದು ಸಂಬಂಧಪಟ್ಟ ಕೈಗಾರಿಕಾ ಪ್ರದೇಶ / ನಿವೇಶನ / ಸಂಘ / ಕೆಐಎಡಿಬಿ / ಕೆಎಸ್ಎಸ್ಐಡಿಸಿಯ ಸಮಂಜಸ ಆರ್ಥಿಕ ವಂತಿಗೆಗೆ ಒಳಪಟ್ಟಿರುತ್ತದೆ.

5.1.6.2 ಭಾರತ ಸರ್ಕಾರದ ಪರಿಷ್ಕೃತ ಕೈಗಾರಿಕಾ ಮೂಲವ್ಯವಸ್ಥೆ ನವೀಕರಣ ನೀತಿ ಮತ್ತು ಇತರ ಇದೇ ರೀತಿಯ ನೀತಿಗಳಡಿ ಲಭ್ಯವಿರುವ ನೆರವನ್ನು ಪರಿಶೀಲಿಸಿ ಇಂತಹ ಮೂಲವ್ಯವಸ್ಥೆಗಳನ್ನು ನವೀಕರಿಸುವಲ್ಲಿ ಬಳಸಲು ಪ್ರಯತ್ನಿಸಲಾಗುವುದು.

5.1.7 ಕೈಗಾರಿಕಾ ಪ್ರದೇಶಗಳ ನಿರ್ವಹಣೆ

5.1.7.1 ಪೀಣ್ಯ, ಮೈಸೂರು, ಬೊಮ್ಮಸಂದ್ರ, ಬೆಳಗಾವಿ ಮತ್ತು ಹುಬ್ಬಳ್ಳಿ ಮುಂತಾದ ರಾಜ್ಯದ ದೊಡ್ಡ ಕೈಗಾರಿಕಾ ಪ್ರದೇಶಗಳನ್ನು ಕರ್ನಾಟಕ ಮುನಿಸಿಪಾಲಿಟೀಸ್ ಕಾಯ್ದೆ 1964ನ ಸೆಕ್ಷನ್ 364ಎ ರೀತ್ಯಾ ಕೈಗಾರಿಕಾ ಟೌನ್‌ಷಿಪ್ ಪ್ರದೇಶಗಳೆಂದು ಘೋಷಿಸಿ, ಕರ್ನಾಟಕ ಮುನಿಸಿಪಾಲಿಟೀಸ್ ಕಾಯ್ದೆ 1964ನ ಸೆಕ್ಷನ್ 364-(ಬಿ)(2) ರೀತ್ಯಾ ಕೈಗಾರಿಕೋದ್ಯಮಿಗಳು ಆಯಾ ಟೌನ್‌ಷಿಪ್ ಪ್ರದೇಶಗಳನ್ನು ನಿರ್ವಹಿಸುವಂತೆ ಪ್ರಾಧಿಕಾರವನ್ನು ಸ್ಥಾಪಿಸಲು ಉದ್ದೇಶಿಸಿದೆ.

5.1.7.2 ಅನುಸೂಚಿತ ಕೈಗಾರಿಕಾ ಪ್ರದೇಶಗಳು/ನಿವೇಶನಗಳು/ಟೌನ್‌ಷಿಪ್‌ಗಳಲ್ಲಿ ಕೈಗಾರಿಕಾ ಘಟಕಗಳ ಕಟ್ಟಡ ನಿರ್ಮಾಣ ನಕ್ಷೆಗಳನ್ನು ಅನುಮೋದಿಸುವ ಸಲುವಾಗಿ ಕೆಐಎಡಿಬಿ/ಕೆಎಸ್ಎಸ್ಐಡಿಸಿಗೆ ಸೂಕ್ತ ಅಧಿಕಾರವನ್ನು ನಿಯೋಜಿಸಲು, ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆ, 1993 ಮತ್ತು ಕರ್ನಾಟಕ ಮುನಿಸಿಪಾಲಿಟೀಸ್ ಕಾಯ್ದೆ 1964ಗಳಿಗೆ ತಿದ್ದುಪಡಿಗಳನ್ನು ತರಲು ಉದ್ದೇಶಿಸಲಾಗಿದೆ.

5.1.7.3 ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಭಾಗವು ಕೈಗಾರಿಕಾ ಪ್ರದೇಶಗಳು/ ನಿವೇಶನಗಳಲ್ಲಿ ಕೈಗಾರಿಕಾ ಘಟಕಗಳಿಗಾಗಿ ಆಸ್ತಿ ತೆರಿಗೆ, ಅಭಿವೃದ್ಧಿ ಶುಲ್ಕ ಇತ್ಯಾದಿಗಳನ್ನು ನಿಗದಿ ಮಾಡಲು ಏಕರೂಪದ ಮಾರ್ಗದರ್ಶನಗಳನ್ನು ರೂಪಿಸುತ್ತದೆ

5.1.7.4 ಟೌನ್ ಶಿಪ್‌ಗಳು ಜಾರಿಯಾಗುವವರೆಗೆ ಕೆಐಎಡಿಬಿ/ಕೆಎಸ್‌ಎಸ್‌ಐಡಿಸಿ ಎಲ್ಲಾ ಕೈಗಾರಿಕೆಗಳಿಂದ ಆಸ್ತಿ ತೆರಿಗೆಗಳು, ಅಭಿವೃದ್ಧಿ ಶುಲ್ಕಗಳನ್ನು ಸಂಗ್ರಹಿಸಿ, ಸಮಂಜಸ ಸೇವಾ ಶುಲ್ಕಗಳನ್ನು ಕಳೆದ ನಂತರ ಸಂಬಂಧಪಟ್ಟ ಸ್ಥಳೀಯ ಅಧಿಕಾರಿಗಳಿಗೆ ಪಾವತಿ ಮಾಡುತ್ತವೆ. ಆಯಾ ವಿಭಾಗಗಳು ಇದನ್ನು ಕುರಿತಂತೆ ಅಗತ್ಯ ಆದೇಶಗಳನ್ನು ನೀಡುತ್ತವೆ.

## 5.2 ಸಾಮರ್ಥ್ಯ ಸಂವರ್ಧನೆ ಮತ್ತು ಕುಶಲತೆ ಆಧುನೀಕರಣದ ಮೂಲಕ ಮಾನವಸಂಪನ್ಮೂಲ ಅಭಿವೃದ್ಧಿ

5.2.1 ಕುಶಲತೆಗಳು ಮತ್ತು ಪರಿಜ್ಞಾನ ಯಾವುದೇ ದೇಶದ ಆರ್ಥಿಕ ಬೆಳವಣಿಗೆ ಮತ್ತು ಸಾಮಾಜಿಕ ಅಭಿವೃದ್ಧಿಗೆ ಚಾಲಕ ಶಕ್ತಿಗಳಾಗಿವೆ. ತ್ವರಿತ ಆರ್ಥಿಕ ಬೆಳವಣಗೆಯು ಕುಶಲತೆಯುಳ್ಳ ಮಾನವ ಬಲಕ್ಕಾಗಿ ಬೇಡಿಕೆಯನ್ನು ಹೆಚ್ಚಿಸಿದೆ. ಕುಶಲತೆಯುಳ್ಳ ಕಾರ್ಯಪಡೆಯ ಅಭಾವವು ಕೈಗಾರಿಕಾ ಬೆಳವಣಿಗೆಗೆ ಒಂದು ಪ್ರಮುಖ ಅಡಚಣೆಯಾಗಿದೆ.

5.2.2. ಈ ಕೊರತೆಯನ್ನು ತುಂಬಲು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯು ಉದ್ಯೋಗ ಮತ್ತು ತರಬೇತಿ ಇಲಾಖೆಯೊಂದಿಗೆ ನಿಕಟವಾಗಿ ಕೆಲಸ ಮಾಡಲಿದೆ. ಇದು ಗುಣಮಟ್ಟದ ತರಬೇತಿ, ಅಕ್ರೆಡಿಟೇಶನ್ ಮತ್ತು ಪ್ರಮಾಣೀಕರಣದ ವಿಷಯಗಳ ಮೇಲೆ ಗಮನವನ್ನು ಕೇಂದ್ರೀಕರಿಸುತ್ತದೆ.

5.2.3 ತರಬೇತಿಯನ್ನು ಕೈಗೆತ್ತಿಕೊಂಡು ಕೈಗಾರಿಕೆಗೆ ಕುಶಲ ಮಾನವ ಬಲವನ್ನು ಒದಗಿಸುವ ಸಂಸ್ಥೆಯಾದ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ)ವನ್ನು ಬಲಪಡಿಸಲಾಗುವುದು. ಸಾಮರ್ಥ್ಯ ಸಾಧ್ಯತೆಯಿರುವ ಕೈಗಾರಿಕಾ ಪ್ರದೇಶದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ನಿಧಿಗಳನ್ನು ಸೂಕ್ತವಾಗಿ ಬಳಸಿಕೊಳ್ಳುವುದರ ಜೊತೆಗೆ ಕೈಗಾರಿಕಾ ಕ್ಷೇತ್ರದ ಸಕ್ರಿಯ ಭಾಗವಹಿಸುವಿಕೆಯನ್ನು ಪಡೆದು ರಾಜ್ಯದ ಎಲ್ಲೆಡೆ ಜಿಟಿಟಿಸಿ ಟೂಲ್ ರೂಂಗಳನ್ನು ಸ್ಥಾಪಿಸಲಾಗುವುದು. ವೃತ್ತಿಪರವಾಗಿ ಈ ಸಂಸ್ಥೆಗಳನ್ನು ನಿರ್ವಹಿಸಲು ಸೂಕ್ತ ವ್ಯವಸ್ಥೆಯನ್ನು ರೂಪಿಸಲಾಗುವುದು.

5.2.4 ಕುಶಲತೆಯನ್ನು ಅಭಿವೃದ್ಧಿಪಡಿಸಿಕೊಳ್ಳುವತ್ತ ತರಬೇತಿಯನ್ನು ಒದಗಿಸಲು ಸಂಭಾವ್ಯ ಸ್ಥಳಗಳಲ್ಲಿ ಹೊಸ ಕೇಂದ್ರವನ್ನು ಸ್ಥಾಪಿಸುವಂತೆ ಖ್ಯಾತ ಸಂಸ್ಥೆಗಳನ್ನು ಉತ್ತೇಜಿಸಲಾಗುವುದು. ಪ್ರಸಕ್ತ ಅಗತ್ಯದ ಆಧಾರದ ಮೇಲೆ ಸುವರ್ಣ ಕಾಯಕ ಕೌಶಲ್ಯಾಭಿವೃದ್ಧಿ ಯೋಜನೆ (ಎಸ್‌ಕೆಕೆವೈ) ನಿಯಮಾವಳಿಗಳನ್ನು ಪರಿಷ್ಕರಿಸಲಾಗುವುದು.

5.2.5 ಉದ್ಯೋಗ ಮತ್ತು ತರಬೇತಿ ಇಲಾಖೆಯು ನಡೆಸುತ್ತಿರುವ ಸುವರ್ಣ ಕಾಯಕ ಕೌಶಲ್ಯಾಭಿವೃದ್ಧಿ ಯೋಜನೆಯಡಿ ಹೊಸ ಅಭ್ಯರ್ಥಿಗಳಿಗೆ ಕಾರ್ಯ ತರಬೇತಿ ಒದಗಿಸುವಂತೆ ಕೈಗಾರಿಕೆಗಳನ್ನು ಸಹ ಉತ್ತೇಜಿಸಲಾಗುವುದು.

5.2.6 ಭಾರತ ಸರ್ಕಾರದ ಡೈರೆಕ್ಟರ್ ಜನರಲ್ ಆಫ್ ಒಕೇಷನಲ್ ಟ್ರೈನಿಂಗ್‌ನ ಮಾಡ್ಯುಲರ್ ಟ್ರೈನಿಂಗ್ ಕಾರ್ಯಕ್ರಮವನ್ನು ರಾಜ್ಯದಲ್ಲಿ ಅಗತ್ಯ ಕುಶಲ ಮಾನವಬಲವನ್ನು ರಚಿಸಲು ಗರಿಷ್ಠವಾಗಿ ಸಮನ್ವಯ ಗೊಳಿಸಲಾಗುವುದು.

5.2.7 ಕ್ಲಸ್ಟರ್‌ಗಳಲ್ಲಿ ಕುಶಲತೆಗಳ ಅಗತ್ಯಗಳನ್ನು ಪೂರೈಸಲು ಪ್ರತಿ ಕೈಗಾರಿಕಾ ಪ್ರದೇಶದಲ್ಲಿ ಐಟಿಐಗಳನ್ನು ಉತ್ತೇಜಿಸಲಾಗುವುದು. ಈ ಉಪಕ್ರಮದಲ್ಲಿ ಒರಿಜಿನಲ್ ಎಕ್ವಿಪ್‌ಮೆಂಟ್ ಮ್ಯಾನುಫ್ಯಾಕ್ಚರರ್ಸ್ (ಒಇಎಂ) ಮತ್ತು ದೊಡ್ಡ ಕಂಪನಿಗಳನ್ನು ಒಳಪಡಿಸಲಾಗುವುದು.

5.2.8 ಯುವಕರು ಸ್ವ–ಉದ್ಯೋಗ ಪ್ರಯತ್ನಗಳನ್ನು ಕೈಗೆತ್ತಿಕೊಳ್ಳುವಂತೆ ಪ್ರೋತ್ಸಾಹಿಸಲು ನೀತಿಯಡಿ ಉದ್ಯಮಶೀಲ ಅಭಿವೃದ್ಧಿಗೆ ಅತ್ಯಂತ ಆದ್ಯತೆಯನ್ನು ನೀಡಲಾಗುವುದು. ಪ್ರಾದೇಶಿಕ ಅವಕಾಶಗಳ ಬಗ್ಗೆ ಉದ್ಯಮಶೀಲರಿಗೆ ಮಾಹಿತಿ ನೀಡಲು ರಾಜ್ಯಾದ್ಯಂತ ಇನ್ನೂ ಹೆಚ್ಚು ಇಡಿಪಿ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು ಸಿಡಾಕ್ ಸಂಸ್ಥೆಯನ್ನು ಬಲಪಡಿಸಲಾಗುವುದು. ತಂತ್ರಜ್ಞಾನ ನವೀಕರಣ, ಉತ್ಪನ್ನ ವೈವಿಧ್ಯೀಕರಣ, ಗುಣಮಟ್ಟದ ಪ್ರಮಾಣೀಕರಣ ಮತ್ತು ರಫ್ತುಗಳಿಗಾಗಿ ಅವಕಾಶಗಳು ಇತ್ಯಾದಿಗಳ ಬಗ್ಗೆ ಜಾಗೃತಿಯನ್ನು ಮೂಡಿಸಿ,

ಜಾಗತಿಕವಾಗಿ ಸ್ಪರ್ಧಾತ್ಮಕವಾಗಿಸಲು ಪ್ರಸಕ್ತ ಕೈಗಾರಿಕೆಗಳಿಗಾಗಿ ಸಹ ಇಡಿಪಿಯನ್ನು ಸಿಡಾಕ್ ಆರಂಭಿಸಲಿದೆ

5.2.9 ಸೂಕ್ಷ್ಮ ಮತ್ತು ಸಣ್ಣ ಉತ್ಪಾದನಾ /ಸೇವಾ ಉದ್ಯಮವನ್ನು ಯಶಸ್ವಿಯಾಗಿ ಪರಿಕಲ್ಪಿಸಿ, ಆಯೋಜಿಸಿ, ಆರಂಭಿಸುವ ಅತ್ಯವಶ್ಯಕ ಅಂಶಗಳ ಬಗ್ಗೆ ಮೊದಲ ಪೀಳಿಗೆಯ ಉದ್ಯಮಶೀಲರಿಗೆ ತರಬೇತಿ ನೀಡಲು ಒಂದು ಹೊಸ ಯೋಜನೆಯನ್ನು ರಚಿಸಲಾಗುವುದು. ಅವರುಗಳು ತಮ್ಮ ವ್ಯಾಪಾರ ವರದಿಗಳನ್ನು ಸಿದ್ಧಪಡಿಸಿ, ತರಬೇತಿ ಕಾರ್ಯಕ್ರಮ ಮುಗಿದ ನಂತರ ಹಣಕಾಸು ಸಂಸ್ಥೆಗಳು/ಬ್ಯಾಂಕ್‌ಗಳೊಂದಿಗೆ ಆರ್ಥಿಕ ಸಾಲ ಏರ್ಪಾಡುಗಳನ್ನು ಮಾಡಿಕೊಳ್ಳುವಲ್ಲಿ ನೆರವು ನೀಡಲಾಗುವುದು. ಈ ದಿಸೆಯಲ್ಲಿ ಖ್ಯಾತ ಕೈಗಾರಿಕಾ ಸಂಸ್ಥೆಗಳ ಬೆಂಬಲವನ್ನು ಪಡೆಯಲಾಗುವುದು.

5.2.10 ತರಬೇತಿ ಕಾರ್ಯಕ್ರಮಗಳನ್ನು ನಡೆಸಲು ಜಿಟಿಟಿಸಿ, ಸಿಡಾಕ್ ಮತ್ತು ಇತರ ಅಧಿಕೃತ ಸಂಸ್ಥೆಗಳಿಗೆ ರಾಜ್ಯ ಬಜೆಟ್‌ನಿಂದ ಹಣವನ್ನು ಒದಗಿಸಲಾಗುವುದು. ಉದ್ಯಮಶೀಲತೆಯನ್ನು ಉತ್ತೇಜಿಸಲು ರಾಜ್ಯ ಮತ್ತು ಜಿಲ್ಲಾ ಮಟ್ಟಗಳಲ್ಲಿ ಉದ್ಯಮಶೀಲ ಪ್ರಶಸ್ತಿಗಳನ್ನು ಆರಂಭಿಸಲಾಗುವುದು.

5.2.11 ಕೈಗಾರಿಕೆಯ ಅಗತ್ಯಗಳನ್ನು ಸಂಘಟಿಸಲು ಕೈಗಾರಿಕೆ, ತಜ್ಞರು ಮತ್ತು ಸರ್ಕಾರದ ಸದಸ್ಯರು ಒಳಪಟ್ಟ ಒಂದು ರಾಜ್ಯಮಟ್ಟದ ವ್ಯವಸ್ಥೆಯನ್ನು ರಚಿಸಲಾಗುವುದು. ಇದು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಹಾಗೂ ಇತರ ವೃತ್ತಿಪರ ತರಬೇತಿ ಸಂಸ್ಥೆಗಳ ವಿವಿಧ ತರಬೇತಿ ಕೇಂದ್ರಗಳಲ್ಲಿ ಗುಣಮಟ್ಟದ ತರಬೇತಿ ನೀಡುವುದನ್ನು ಖಚಿತಪಡಿಸಿಕೊಳ್ಳುತ್ತದೆ. ಈ ವ್ಯವಸ್ಥೆಯು ಕೆಳಗಿನ ವಿಚಾರಗಳಿಗೆ ಗಮನ ನೀಡಲಿದೆ:

**ಗುಣಮಟ್ಟ :** ಕೈಗಾರಿಕೆಗಳ ಅಗತ್ಯಗಳಿಗೆ ಸರಿಯೊಪ್ಪುವಂತೆ ಪಠ್ಯಕ್ರಮದ ಮಾನಕಗಳನ್ನು ಸ್ಥಾಪಿಸುವುದು. ಈ ಕ್ರಮವನ್ನು ಕೈಗೊಳ್ಳುವಾಗ ರಾಷ್ಟ್ರೀಯ ಮತ್ತು ಜಾಗತಿಕ ವೃತ್ತಿಪರ ತರಬೇತಿ ಮಾನಕಗಳನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು. ಪ್ರಸಕ್ತ ಮತ್ತು ಭವಿಷ್ಯತ್ತಿನ ಅಗತ್ಯದ ಆಧಾರದ ಮೇಲೆ ಹೊಸ ಪಠ್ಯಕ್ರಮದ ನಮೂನೆಗಳನ್ನು ಅಭಿವೃದ್ಧಿಪಡಿಸಲಾಗುವುದು. ಪಠ್ಯಕ್ರಮವನ್ನು ಅರ್ಥ ಮಾಡಿಕೊಳ್ಳುವಲ್ಲಿ ವಿದ್ಯಾರ್ಥಿಯ ಸಾಮರ್ಥ್ಯವನ್ನು ಹೆಚ್ಚಿಸುವ ಸಲುವಾಗಿ ಸಂಬಂಧಪಟ್ಟ ಭಾಷಾ ಕುಶಲತೆಯನ್ನು ಒದಗಿಸುವತ್ತಲೂ ಗಮನವನ್ನು ಕೇಂದ್ರೀಕರಿಸಲಾಗುವುದು.

**ಪ್ರಮಾಣೀಕರಣ :** ಯಾವುದೇ ಕೈಗಾರಿಕೆಯು ತನಗೆ ಅಗತ್ಯವಾದ ಮೂಲ ಕುಶಲತೆಗಳುಳ್ಳ ಅಭ್ಯರ್ಥಿಗಳನ್ನು ಪಡೆಯುತ್ತದೆ ಎನ್ನುವುದನ್ನು ಖಚಿತಪಡಿಸಿಕೊಳ್ಳಲು ವ್ಯಾಪಕ ಮಾನ್ಯತೆಯುಳ್ಳ ಪ್ರಮಾಣೀಕರಣ ವ್ಯವಸ್ಥೆಯನ್ನು ರೂಪಿಸಲಾಗುವುದು.

**ಅಕ್ರೆಡಿಟೇಶನ್ :** ಪಠ್ಯಕ್ರಮ, ಸೌಲಭ್ಯಗಳು, ಶಿಕ್ಷಣವರ್ಗ, ಕೈಗಾರಿಕಾ ಪರಿಚಯ ಇತ್ಯಾದಿಗಳ ಆಧಾರದ ಮೇಲೆ ಸಂಸ್ಥೆಗಳಿಗೆ ಮಾನ್ಯತೆ ನೀಡುವ ಒಂದು ಕಾರ್ಯ ವಿಧಾನವನ್ನು ಇದು ಅಭಿವೃದ್ಧಿಪಡಿಸುತ್ತದೆ.

ಇದರಿಂದ ಸ್ಥಳೀಯವಾಗಿ ಇನ್ನೂ ಹೆಚ್ಚು ಉದ್ಯೋಗಗಳು ಕಲ್ಪಿತವಾಗಬಹುದಾಗಿದೆ.

5.2.12 **ವಲಯರೀತ್ಯ ತರಬೇತಿ ಸಂಸ್ಥೆಗಳು :** ಕೈಗಾರಿಕೆಗಳ ಸಾಂದ್ರೀಕರಣ ಮತ್ತು ಅವುಗಳ ಬೆಳವಣಿಗೆಯ ಸಾಧ್ಯತೆಯ ಆಧಾರದ ಮೇಲೆ ವಲಯರೀತ್ಯ ತರಬೇತಿ ಸಂಸ್ಥೆಗಳನ್ನು (ಐಟಿಐಗಳು/ವೃತ್ತಿಪರ ತರಬೇತಿ ಸಂಸ್ಥೆಗಳು ಇತ್ಯಾದಿ) ಕೆಳಕಂಡಂತೆ ಸ್ಥಾಪಿಸಲು ಉದ್ದೇಶಿಸಲಾಗಿದೆ.

| ವಲಯ | ಸ್ಥಳ |
|---|---|
| **ಆಟೋ** | ಬಿಡದಿ/ನರಸಾಪುರ |
| **ಮೆಷಿನ್ ಟೂಲ್ಸ್** | ಪೀಣ್ಯ/ತುಮಕೂರು |
| **ಏರೋಸ್ಪೇಸ್** | ಹೆಚ್ಎಎಲ್/ದೇವನಹಳ್ಳಿ |
| **ಫೌಂಡ್ರಿ/ಕಾಸ್ಟಿಂಗ್** | ಬೆಳಗಾವಿ |
| **ಕೃಷಿ/ಆಹಾರ** | ಗುಲ್ಬರ್ಗಾ/ಬಿಜಾಪುರ |
| **ಎಲೆಕ್ಟ್ರಾನಿಕ್ಸ್** | ಎಲೆಕ್ಟ್ರಾನಿಕ್ಸ್ ಸಿಟಿ/ಹೊಸೂರು ರಸ್ತೆ/ವೈಟ್‌ಫೀಲ್ಡ್ |
| **ರಾಸಾಯನಿಕಗಳು ಮತ್ತು ರಸಗೊಬ್ಬರಗಳು** | ಚಿಗಣಿ/ಹಾವೇರಿ/ಮಂಗಳೂರು |
| **ಫಾರ್ಮಾಸ್ಯೂಟಿಕಲ್ ಮತ್ತು ಎಫ್ಎಂಸಿಜಿ** | ಕೆ.ಆರ್.ಪುರಂ/ಹೊಸಕೋಟೆ |
| **ಗ್ರಾಹಕ ಬಳಕೆ ವಸ್ತುಗಳು** | ವೈಟ್‌ಫೀಲ್ಡ್/ಹೊಸೂರು ರಸ್ತೆ |
| **ಪ್ಲಾಸ್ಟಿಕ್ಸ್ ಮತ್ತು ರಬ್ಬರ್** | ಮೈಸೂರು |
| **ಜವಳಿ** | ಪೀಣ್ಯ/ಮೈಸೂರು ರಸ್ತೆ |

5.2.13 **ವೃತ್ತಿ ಸ್ಥಳದಲ್ಲಿಯೇ ತರಬೇತಿ :** 2000 ಐಟಿಐ ಮತ್ತು ಡಿಪ್ಲೋಮಾ ಉತ್ತೀರ್ಣರಾಗುವ ಅಭ್ಯರ್ಥಿಗಳಿಗೆ ಪ್ರತಿ ವರ್ಷ ಸ್ಥಳದಲ್ಲಿಯೇ ತರಬೇತಿ ನೀಡಿ ಅವರುಗಳ ಉದ್ಯೋಗ ಸಾಮರ್ಥ್ಯವನ್ನು ಹೆಚ್ಚಿಸುವ ಯೋಜನೆಯನ್ನು ರಚಿಸಲಾಗುವುದು. ಐಟಿಐ ಅಭ್ಯರ್ಥಿಗಳಿಗಾಗಿ ಮಾಸಿಕ ರೂ.3000/-ದ ಪರಿಮಿತಿಗೆ ಒಳಪಟ್ಟಂತೆ ಹಾಗೂ ಡಿಪ್ಲೋಮಾ ಅಭ್ಯರ್ಥಿಗಳಿಗೆ ಮಾಸಿಕ ರೂ.5,000/-ಒಳಪಟ್ಟಂತೆ (ಕೈಗಾರಿಕೆ ಮತ್ತು ಎಂಎಸ್ಎಂಇಗಳು ಕೊಡುವ 50%ರಷ್ಟು ಸಂಬಳವನ್ನು) ಸ್ಟೈಪೆಂಡ್ ಆಗಿ ನೀಡಲು ಉದ್ದೇಶಿಸಲಾಗಿದೆ. ಈ ಪ್ರೋತ್ಸಾಹವನ್ನು ಸ್ಥಳದಲ್ಲಿಯೇ ತರಬೇತಿಯ 6 ತಿಂಗಳವರೆಗೆ ವಿಸ್ತರಿಸಲಾಗುವುದು.

5.2.14 ಫಿನಿಶಿಂಗ್ ಸ್ಕೂಲ್‌ಗಳನ್ನು ಕೈಗಾರಿಕೆಗಳು ಮತ್ತು ವ್ಯಾಪಾರ ಸಂಸ್ಥೆಗಳ ಸಹಯೋಗದೊಂದಿಗೆ ಸ್ಥಾಪಿಸಲಾಗುವುದು.

5.2.15 ರಾಜ್ಯದ ಎಲ್ಲೆಡೆ ಎಲ್ಲಾ ಕುಶಲತೆ ಅಭಿವೃದ್ಧಿ ಕೇಂದ್ರಗಳಲ್ಲಿ ಹೈಸ್ಪೀಡ್ ಇಂಟರ್ನೆಟ್ ಕನೆಕ್ಟಿವಿಟಿ, ಕಂಪ್ಯೂಟರ್‌ಗಳು, ಪ್ರಿಂಟರ್‌ಗಳು ಮತ್ತು ಇತರ ಐಸಿಟಿ ಮೂಲವ್ಯವಸ್ಥೆಯ ಬಳಕೆಯನ್ನು ಉತ್ತೇಜಿಸಲಾಗುವುದು. ಇಂತಹ ವ್ಯವಸ್ಥೆಗಳು ಮತ್ತು ಸಲಕರಣೆಗಳನ್ನು ಪ್ರಸಕ್ತ ಲಭ್ಯವಿರದಂತಹ ಕುಶಲತಾ ಕೇಂದ್ರಗಳಿಗೆ ಒದಗಿಸಲಾಗುವುದು ಹಾಗೂ ತರಬೇತಿಯಲ್ಲಿ ಗುಣಮಟ್ಟವನ್ನು ತರಲು ವರ್ಚುಯಲ್ ಲರ್ನಿಂಗ್ ಎನ್ವಿರೋನ್‌ಮೆಂಟ್ (ವಿಎಲ್ಇ)ಗೆ ಆಧುನೀಕರಿಸಲಾಗುವುದು.

5.2.16 **ಕಾರ್ಮಿಕ ಮಾರುಕಟ್ಟೆ ಮಾಹಿತಿ ವ್ಯವಸ್ಥೆ (ಎಲ್ಎಂಐಎಸ್) :**

ಆರ್ಥಿಕ ಪ್ರವೃತ್ತಿಗಳು ಮತ್ತು ಕಾರ್ಮಿಕ ಮಾರುಕಟ್ಟೆ ಅಗತ್ಯಗಳ ವಾಸ್ತವಿಕ ಅಂದಾಜನ್ನು ಮಾಡಲು ಒಂದು ಸಂಪೂರ್ಣವಾಗಿ ಸಮರ್ಪಿತವಾದ ಎಲ್ಎಂಐಎಸ್ ರಚಿಸುವುದು ನೀತಿಯ ಅವಧಿಯಲ್ಲಿ ಇಲಾಖೆಯ ಆದ್ಯತೆಯಾಗಿರುತ್ತದೆ. ಈ ಮಾಹಿತಿ ವ್ಯವಸ್ಥೆಯನ್ನು ಕುಶಲತೆಯ ಬೇಡಿಕೆ, ಪೂರೈಕೆ ಮತ್ತು ವೇತನಗಳು ಹಾಗೂ ಇತರ ಅಗತ್ಯಗಳನ್ನು ಆಯೋಜಿಸುವಲ್ಲಿ ನೆರವಾಗಲು ರಾಜ್ಯ ಮತ್ತು ಜಿಲ್ಲಾ ಮಟ್ಟಗಳೆರಡರಲ್ಲೂ ಸ್ಥಾಪಿಸಲಾಗುವುದು. ಲಭ್ಯವಿರುವ ಹಾಗೂ ಮುಂಬರುವ ಕುಶಲಕಾರ್ಮಿಕ ಬಲದ ಬೇಡಿಕೆ ಮತ್ತು ಪೂರೈಕೆಗಳನ್ನು ಪ್ರದೇಶಗಳ ರೀತ್ಯ ಗುರುತಿಸಲು ಒಂದು ಮುಖ್ಯ ಸಂಸ್ಥೆಯನ್ನು ನೇಮಿಸಲಾಗುವುದು. ಈ ಮುಖ್ಯ ಸಂಸ್ಥೆಯು ಯಾವುದೇ ಕೈಗಾರಿಕೆಗೆ ಮತ್ತು ಸೇವೆಗಳ ಸಮೂಹಕ್ಕೆ ನಿರ್ದಿಷ್ಟವಾದಂತೆ ಕುಶಲತೆಯ ಅಗತ್ಯಗಳನ್ನು ಪಡೆಯುವಲ್ಲಿ ತರಬೇತಿ ಸಂಸ್ಥೆಗಳಿಂದ ಕುಶಲ ಅಭ್ಯರ್ಥಿಗಳನ್ನು ಗುರುತಿಸುವ ಜವಾಬ್ದಾರಿಯನ್ನೂ ಹೊತ್ತಿರುತ್ತದೆ.

ಕುಶಲ ಅಭಿವೃದ್ಧಿ ಕೇಂದ್ರಗಳು, ಪ್ರದೇಶಗಳ ರೀತ್ಯ ಅಗತ್ಯಗಳನ್ನು ಪೂರೈಸುವಲ್ಲಿ ಕೇಂದ್ರ ಸಂಸ್ಥೆಗೆ ಬೆಂಬಲಾತ್ಮಕವಾಗಿರುತ್ತವೆ. ರಾಜ್ಯದ ನೀತಿಗಳಡಿ ಏಕಗವಾಕ್ಷಿ ಅನುಮೋದನೆ ಮತ್ತು/ಅಥವಾ ಪ್ರೋತ್ಸಾಹಗಳಿಗಾಗಿ ಅರ್ಜಿ ಸಲ್ಲಿಸುವ ಸಮಯದಲ್ಲಿ ಕೈಗಾರಿಕೆಗಳು ಒಂದು ಪೂರ್ವ ನಿರ್ಧಾರಿತ ಸ್ವರೂಪದಲ್ಲಿ ಮಾನವಬಲ ಅಗತ್ಯಗಳ ಏರ್ಪಾಡುಗಳ ಬಗ್ಗೆ ತಿಳಿಸುವುದು ಸಹ ಕಡ್ಡಾಯವಾಗಿರುತ್ತದೆ.

**5.2.17 ತರಬೇತಿ ಕಾರ್ಯಕ್ರಮಗಳನ್ನು ನಡೆಸಲು ಖಾಸಗಿ ಮೂಲಸೌಲಭ್ಯಗಳ ಬಳಕೆ:**

ಮಾರುಕಟ್ಟೆಯ ಹೊಸ ತಂತ್ರಜ್ಞಾನಗಳ ಬಗ್ಗೆ ಕಾಲ ಕಾಲಕ್ಕೆ ತಮ್ಮ ವ್ಯವಸ್ಥೆಗಳು ಮತ್ತು ಸೌಲಭ್ಯಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳಿಗೆ ಹಾಗೂ ತರಬೇತಿದಾರರಿಗೆ ತರಬೇತಿ ಕಾರ್ಯಕ್ರಮಗಳನ್ನು ನಡೆಸುವುದಕ್ಕಾಗಿ ಖಾಸಗಿ ಕೈಗಾರಿಕೆಗಳಿಗೆ ಜಿಟಿಟಿಸಿ ಮತ್ತು ಇತರ ಸಂಬಂಧಿತ ಸಂಸ್ಥೆಗಳೊಂದಿಗೆ ಸಹಯೋಗ ಪಡೆಯಲು ಅನುಕೂಲವನ್ನು ಮಾಡಿಕೊಡಲಾಗುವುದು. ತತ್ಪರಿಣಾಮವಾಗಿ ಇಂತಹ ಕಾರ್ಯಕ್ರಮಗಳನ್ನು ನಡೆಸುವ ಕೈಗಾರಿಕೆಗಳು ತಾಂತ್ರಿಕ ಶಿಕ್ಷಣ ಇಲಾಖೆ ಹಾಗೂ ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆಯ ಪೂರ್ವ ಅನುಮತಿಯೊಂದಿಗೆ ಹಾಗೂ ಪೂರ್ವ ನಿರ್ಧಾರಿತ ಮಾರ್ಗದರ್ಶನಗಳಡಿ ಕುಶಲತಾ ಅಭಿವೃದ್ಧಿ ಕೇಂದ್ರಗಳು ನೀಡುವ ಪ್ರಮಾಣಪತ್ರಗಳಿಗೆ ಸರಿಸಮವಾಗಿ ತಮ್ಮದೇ ಆದ ಪ್ರಮಾಣ ಪತ್ರಗಳನ್ನು ನೀಡಲು ಸಹ ಅನುಮತಿಸಬಹುದಾಗಿದೆ. ತರಬೇತಿ ಪಡೆದ ಶೇಕಡಾ 85ರಷ್ಟು ವಿದ್ಯಾರ್ಥಿಗಳನ್ನು ಉದ್ಯೋಗದಲ್ಲಿ ನೇಮಿಸಲಾಗುವುದು ಎಂಬ ಷರತ್ತಿಗೆ ಒಳಪಟ್ಟಂತೆ ಇಂತಹ ಕೈಗಾರಿಕೆಗಳಿಗೆ ತರಬೇತಿ, ಪ್ರಮಾಣೀಕರಣ ಮತ್ತು ಅವರ ಸೌಲಭ್ಯಗಳ ಬಳಕೆಗಾಗಿ ವೆಚ್ಚವನ್ನು ಸಹಾಯಧನವಾಗಿಸಬಹುದಾಗಿದೆ.

5.3 ಅನುಕೂಲ ಕಲ್ಪಿಸುವ ಸೌಕರ್ಯದ ವ್ಯವಸ್ಥೆ ಮತ್ತು ಕಾರ್ಯ ವಿಧಾನದಲ್ಲಿ ಸುಧಾರಣೆಗಳು

5.3.1 ರಾಜ್ಯದಲ್ಲಿ ಸುಲಭವಾಗಿ ಉದ್ಯಮ–ವ್ಯವಹಾರ ಕೈಗೊಳ್ಳುವುದನ್ನು ವೃದ್ಧಿಸುವಂತಹ ವಾತಾವರಣವನ್ನು ನಿರ್ಮಿಸಲು ಏಕಗವಾಕ್ಷಿ ಮಂಜೂರಾತಿ ವ್ಯವಸ್ಥೆಯನ್ನು ಇನ್ನೂ ಪರಿಣಾಮಕಾರಿಯನ್ನಾಗಿ ಮಾಡಲಾಗುವುದು ರಾಜ್ಯದಲ್ಲಿ ಬಂಡವಾಳ ಹೂಡುವ ಉದ್ದೇಶಗಳನ್ನು ಸಾಕಾರಗೊಳಿಸಲು ಅಗತ್ಯವಾಗುವ ಅನುಕೂಲಗಳು ಮತ್ತು ಸೂಕ್ತ ಬೆಂಬಲಾತ್ಮಕ ಸೇವೆಗಳನ್ನು ನೀಡಲು ವಿಶೇಷ ಒತ್ತುಕೊಡಲಾಗುವುದು.

ವ್ಯವಹಾರ ವೆಚ್ಚಗಳನ್ನು ಕಡಿಮೆ ಮಾಡಲು ಕರ್ನಾಟಕ ಕೈಗಾರಿಕೆಗಳ (ಫೆಸಿಲಿಟೇಶನ್) ಕಾಯ್ದೆ 2002 ಕಲಮುಗಳನ್ನು ಅಕ್ಷರಶಃ ಅನುಷ್ಠಾನಕ್ಕೆ ತರಲಾಗುವುದು.

**5.3.2 ಏಕಗವಾಕ್ಷಿ ವ್ಯವಸ್ಥೆಯನ್ನು ಸುಸೂತ್ರಗೊಳಿಸುವುದು:**

5.3.2.1 ಆಯಾ ವಿಭಾಗದ ಅಭಿಪ್ರಾಯ ಮತ್ತು ಭೂಮಿಯ ಲಭ್ಯತೆ ಖಾತರಿಯಾದ ವರದಿಯ ನಂತರವೇ ಕರ್ನಾಟಕ ಉದ್ಯೋಗ ಮಿತ್ರ (ಕೆಯುಎಂ) ಅರ್ಜಿಗಳನ್ನು ಪರಿಶೀಲಿಸುತ್ತದೆ.

5.3.2.2 ಆಯಾ ವಿಭಾಗಗಳ ಅಭಿಪ್ರಾಯಗಳನ್ನು ಒದಗಿಸಲು ಕಾಲ ಮಿತಿಯನ್ನು ನಿಗದಿ ಮಾಡಲಾಗುವುದು ಹಾಗೂ ಆಯಾ ವಿಭಾಗದ ಅಭಿಪ್ರಾಯದೊಂದಿಗೆ ಇರುವ ಪರಿಶೀಲಿತ ಸೂಚನೆಗಳನ್ನು ಚರ್ಚೆ ಮತ್ತು ನಿರ್ಧಾರಕ್ಕಾಗಿ ಎಸ್‌ಎಲ್‌ಎಸ್‌ಡಬ್ಲ್ಯೂಸಿಸಿ/ಎಸ್‌ಹೆಚ್‌ಎಲ್‌ಸಿಸಿಯ ಮುಂದಿಡಲಾಗುವುದು. ಸಂಬಂಧಪಟ್ಟ ವಿಭಾಗಗಳ ಅಭಿಪ್ರಾಯಗಳು ಸಮಯಕ್ಕೆ ಸರಿಯಾಗಿ ದೊರಕದಿದ್ದಲ್ಲಿ ಅನುಮತಿ ದೊರೆತಿದೆಯೆಂದು ಪರಿಗಣಿಸಲು ಉದ್ದೇಶಿಸಲಾಗಿದೆ.

5.3.2.3 ಎಸ್‌ಹೆಚ್‌ಎಲ್‌ಸಿಸಿ ಮತ್ತು ಎಸ್‌ಎಲ್‌ಎಸ್‌ಡಬ್ಲ್ಯೂಸಿಸಿ ಅನುಮೋದಿಸಿದ ಯೋಜನೆಗಳಿಗಾಗಿ ಅಗತ್ಯವಾಗುವ ಎಲ್ಲಾ ಶಾಸನಬದ್ಧ ಅನುಮೋದನೆಗಳನ್ನು ದೇಶದಲ್ಲಿ ಜಾರಿಯಲ್ಲಿರುವ ಅತ್ಯುತ್ತಮ ವಿಧಾನಗಳಿಗೆ ಅನುಸಾರವಾಗಿ ಒಂದು ನಿಗದಿತ ಕಾಲಮಿತಿಯೊಳಗೆ ಒದಗಿಸಲಾಗುವುದು. ವಿವಿಧ ಮಂಜೂರಾತಿಗಳಿಗಾಗಿ ನಿಗದಿತ ಕಾಲಮಿತಿಯುಳ್ಳ ಸುತ್ತೋಲೆಗಳನ್ನು ಪ್ರತ್ಯೇಕವಾಗಿ ನೀಡಲಾಗುವುದು.

5.3.2.4 ಸಂಬಂಧಪಟ್ಟ ಇಲಾಖೆಗಳು ನಿಗದಿಮಾಡಿರುವ ಅರ್ಜಿಗಳು ಮತ್ತು ಶುಲ್ಕವನ್ನು ಕರ್ನಾಟಕ ಉದ್ಯೋಗ ಮಿತ್ರ ಅಂಗೀಕರಿಸಿ, ಆಯಾ ಇಲಾಖೆ ನೇಮಿಸಿರುವ ಮುಖ್ಯ ಅಧಿಕಾರಿಯ ಮೂಲಕ ಕಳುಹಿಸುತ್ತದೆ. ಇವರು ಎಲ್ಲಾ ಮಂಜೂರಾತಿಗಳನ್ನು ನೀಡುವವರಗೆ ಸೂಚನೆಗಳ ಮೇಲೆ ನಿಗಾ ಇಡುತ್ತಾರೆ.

5.3.2.5 ಕೆಯುಎಂನ ಇ-ಉದ್ಯಮಿ ಪೋರ್ಟಲ್‌ನ್ನು ಎಲ್ಲಾ ಅರ್ಜಿಗಳು, ನಿಗದಿತ ಶುಲ್ಕ ಇತ್ಯಾದಿ ಸಂದ ಬಗ್ಗೆ ಆನ್‌ಲೈನ್ ರಸೀತಿಯಾಗಿ ಬಳಸಲಾಗುವುದು. ಇದರಿಂದ ಪ್ರಮೋಟರ್‌ಗಳು ತಮ್ಮ ಅರ್ಜಿಗಳ ಸ್ಥಿತಿಯ ಬಗ್ಗೆ ತಿಳಿದುಕೊಳ್ಳಲು ಅನುವಾಗುತ್ತದೆ.

5.3.2.6 ಆನ್‌ಲೈನ್ ಯೋಜನಾ ಮೇಲ್ವಿಚಾರಣಾ ವ್ಯವಸ್ಥೆಯನ್ನು ರೂಪಿಸಲಾಗುವುದು.

5.3.2.7 ಕರ್ನಾಟಕದಲ್ಲಿ ಉದ್ಯಮ-ವ್ಯವಹಾರ ಆರಂಭಿಸಿ ಮುಂದುವರೆಸುವ ಎಲ್ಲಾ ಅಂಶಗಳ ಬಗ್ಗೆ ಬಂಡವಾಳ ಹೂಡಿಕೆದಾರರಿಗೆ ಬಗ್ಗೆ ಮಾರ್ಗದರ್ಶನ ನೀಡುವ ಒಂದು ಕಿರುಪುಸ್ತಕವನ್ನು ನೀಡಲಾಗುವುದು.

**5.3.3 ನಿಯಂತ್ರಣಾ ಕಾರ್ಯ ವಿಧಾನಗಳ ಸರಳೀಕರಣ:**

5.3.3.1 ಕೈಗಾರಿಕಾ ಹೂಡಿಕೆಗಳಿಗಾಗಿ ಸರ್ಕಾರದ ಕಾರ್ಯ ವಿಧಾನಗಳನ್ನು ಪರಿಪಾಲಿಸುವತ್ತ ಸಮಯ ಮತ್ತು ವೆಚ್ಚವನ್ನು ತಗ್ಗಿಸಲು ಸರ್ಕಾರವು ನಿಯಂತ್ರಣಾ ಕಾರ್ಯ ವಿಧಾನಗಳ ಸರಳೀಕರಣದ ಬಗ್ಗೆ ಒಂದು ಸಮಗ್ರ ಅಧ್ಯಯನವನ್ನು ಕೈಗೆತ್ತಿಕೊಳ್ಳಲಿದೆ. ಯೋಜನಾ ಅನುಮತಿಗಳಿಗಾಗಿ ಅಗತ್ಯವಾಗುವ ಎಲ್ಲಾ ನಿಯಂತ್ರಣಗಳು ಮತ್ತು ಶಾಸನಬದ್ಧ ಅನುಮೋದನೆಗಳನ್ನು ಈ ಅಧ್ಯಯನದಲ್ಲಿ ಒಳಪಡಿಸಿ ಎಲ್ಲಾ ಇಲಾಖೆಗಳಲ್ಲೂ ನಿಯಂತ್ರಣಾ ಕ್ರಮ ವಿಧಾನಗಳನ್ನು ಸರಳೀಕರಿಸುವತ್ತ ಮಾಡಲಾಗುವ ಶಿಫಾರಸುಗಳ ಮೇಲೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು.

5.3.3.2 ಎಲ್ಲಾ ಕೈಗಾರಿಕೆಗಳಿಗಾಗಿ ವ್ಯಾಪಾರ ಪರವಾನಗಿಗಳನ್ನು (ಟ್ರೇಡ್ ಲೈಸನ್ಸ್) ರದ್ದು ಮಾಡಲು ಉದ್ದೇಶಿಸಲಾಗಿದೆ.

5.3.3.3 ಭೂಸ್ವಾಧೀನವನ್ನು ಸರಳಗೊಳಿಸಿ ಕೈಗಾರಿಕಾ ಉದ್ದೇಶಗಳಿಗಾಗಿ ಕೃಷಿ ಭೂಮಿಯನ್ನು ತ್ವರಿತವಾಗಿ ಹಾಗೂ ನಿಗದಿತ ಸಮಯದೊಳಗೆ ಪರಿವರ್ತಿಸಲು ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961ರಲ್ಲಿ ಅಗತ್ಯ ತಿದ್ದುಪಡಿಗಳನ್ನು ತರಲು ಉದ್ದೇಶಿಸಲಾಗಿದೆ.

5.3.3.4 ಕೈಗಾರಿಕೆಗಳ ಪ್ರತಿಪಾದಕರು ಕ್ಲಿಷ್ಟವಾದ ನಿಯಂತ್ರಣ ಕ್ರಮ ವಿಧಾನಗಳಿಲ್ಲದೇ 30 ಎಕರೆಗಳಷ್ಟು ಭೂಮಿಯನ್ನು ಖರೀದಿಸಲು ಸಾಧ್ಯವಾಗುವಂತೆ ಹಾಗೂ ನಿರ್ದಿಷ್ಟ ಕಾಲಮಿತಿಯೊಳಗೆ ಇಂತಹ ಭೂಮಿಯ ಪರಿವರ್ತನೆಯನ್ನು ಅನುಮತಿಸುವಂತೆ ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961 ರಲ್ಲಿ ಅಗತ್ಯ ತಿದ್ದುಪಡಿಗಳನ್ನು ತರಲು ಉದ್ದೇಶಿಸಲಾಗಿದೆ.

## 5.4 ತಾಲ್ಲೂಕುಗಳನ್ನು ವಲಯಗಳಾಗಿ ವರ್ಗೀಕರಿಸುವಿಕೆ:

ಈ ನೀತಿಯ ಧ್ಯೇಯವೆಂದರೆ ಸರ್ವರನ್ನೂ ಒಳಗೊಂಡ, ಸುಸ್ಥಿರ ಮತ್ತು ಸಮತೋಲನವುಳ್ಳ ಕೈಗಾರಿಕಾ ಬೆಳವಣಿಗೆಯ ಮೂಲಕ ಸಮೃದ್ಧ ಕರ್ನಾಟಕವನ್ನು ನಿರ್ಮಿಸುವುದು. ರಾಜ್ಯದ ಅನೇಕ ತಾಲ್ಲೂಕುಗಳು ಕೈಗಾರಿಕಾ ದೃಷ್ಟಿಯಿಂದ ಹಿಂದುಳಿದಿವೆ ಎನ್ನುವ ಅಂಶವು ಕೈಗಾರಿಕೆಗಳು ಮಾಡಿದ ಬಂಡವಾಳ ಹೂಡಿಕೆಗಳ ಬಗ್ಗೆ ಮಾಡಲಾದ ಒಂದು ವಿಶ್ಲೇಷಣೆಯಿಂದ ತಿಳಿದುಬಂದಿದೆ.

ಈ ಧ್ಯೇಯವನ್ನು ಸಾಕಾರಗೊಳಿಸಲು ಕೈಗಾರಿಕವಾಗಿ ಹಿಂದುಳಿದ ತಾಲ್ಲೂಕುಗಳಲ್ಲಿ ಕೈಗಾರಿಕೆಗಳ ಪ್ರಸರಣೆಗಾಗಿ ತೀವ್ರ ಗಮನದ ಅಗತ್ಯವಿದೆ. ತಾಲ್ಲೂಕುಗಳಲ್ಲಿ ಸರಾಸರಿ ತಲಾವಾರು ಕೈಗಾರಿಕಾ ಬಂಡವಾಳ ಮತ್ತು ತಲಾವಾರು ಉದ್ಯೋಗವನ್ನು ಗಮನಿಸಿ, ತಾಲ್ಲೂಕುಗಳನ್ನು ವಿವಿಧ ವಲಯಗಳಾಗಿ ವರ್ಗೀಕರಿಸಲಾಗಿದೆ.

ಸಂವಿಧಾನದ ಅನುಚ್ಛೇದ 371(ಜೆ)ನ ಕಲಮುಗಳ ರೀತ್ಯ ಪ್ರತ್ಯೇಕವಾದ ಹೈದರಾಬಾದ್ ಕರ್ನಾಟಕ ವಲಯವನ್ನು ರೂಪಿಸಿರುವ ದೃಷ್ಟಿಯಿಂದ ರಾಜ್ಯವನ್ನು ಎರಡು ಪ್ರದೇಶಗಳು ಅಂದರೆ ಹೈದರಾಬಾದ್ ಕರ್ನಾಟಕ ಪ್ರದೇಶ ಮತ್ತು ಹೈದರಾಬಾದ್-ಕರ್ನಾಟಕಯೇತರ ಪ್ರದೇಶ ಎಂದು ವರ್ಗೀಕರಿಸಲಾಗಿದೆ.

ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ಸರಿಸಮಾನ ಹಣ ಸಂಪನ್ಮೂಲಗಳೊಂದಿಗೆ ಒಂದು ಬಲಿಷ್ಠ ಕೈಗಾರಿಕಾ ನೆಲೆಯನ್ನು ರಚಿಸುವ ಉದ್ದೇಶದಿಂದ, ತಾಲ್ಲೂಕುಗಳನ್ನು ಕೆಳಕಂಡಂತೆ ವಿಂಗಡಿಸಿದ್ದು, ವಿವಿಧ ವಲಯಗಳಲ್ಲಿ ಪ್ರತ್ಯೇಕ ಪ್ರೋತ್ಸಾಹಗಳು ಮತ್ತು ವಿನಾಯಿತಿಗಳನ್ನು ಪ್ರಸ್ತಾಪಿಸಲಾಗಿದೆ:

i) ಹೈದರಾಬಾದ್ ಕರ್ನಾಟಕ ಪ್ರದೇಶವನ್ನು 2 ವಲಯಗಳಾಗಿ ಅಂದರೆ ಹೆಚ್ ಕೆ ವಲಯ-1 ಮತ್ತು ಹೆಚ್ ಕೆ ವಲಯ-2 ಎಂದು ವರ್ಗೀಕರಿಸಲಾಗಿದೆ.

ii) ಇದೇ ರೀತಿ ಹೈದರಾಬಾದ್ ಕರ್ನಾಟಕಯೇತರ ಪ್ರದೇಶದಲ್ಲಿನ ತಾಲ್ಲೂಕುಗಳನ್ನು 4 ವಲಯಗಳಾಗಿ ಅಂದರೆ ವಲಯ-1, 2, 3 ಮತ್ತು 4 ಎಂದು ವರ್ಗೀಕರಿಸಲಾಗಿದೆ.

iii) ಅತ್ಯಂತ ಹಿಂದುಳಿದ ತಾಲ್ಲೂಕುಗಳು ವಲಯ-1 ರಲ್ಲಿವೆ, ಸ್ವಲ್ಪ ಹಿಂದುಳಿದ ತಾಲ್ಲೂಕುಗಳು ವಲಯ-2 ರಲ್ಲಿವೆ, ಹಿಂದುಳಿದ ತಾಲ್ಲೂಕುಗಳು ವಲಯ-3 ರಲ್ಲಿವೆ ಮತ್ತು ಕೈಗಾರಿಕವಾಗಿ ಹಿಂದುಳಿದ ತಾಲ್ಲೂಕುಗಳು ವಲಯ-4 ರಲ್ಲಿವೆ. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅತ್ಯಂತವಾಗಿ ಹಿಂದುಳಿದ ತಾಲ್ಲೂಕುಗಳು ಹೆಚ್ ಕೆ ವಲಯ-1 ರಲ್ಲಿವೆ ಮತ್ತು ಸ್ವಲ್ಪ ಹಿಂದುಳಿದ ತಾಲ್ಲೂಕುಗಳು ಹೆಚ್ ಕೆ ವಲಯ-2 ರಲ್ಲಿವೆ.

iv) ತ್ವರಿತ ನಗರೀಕರಣ, ಕೈಗಾರಿಕಾಭಿವೃದ್ಧಿಗಾಗಿ ಸಾಧ್ಯತೆಗಳು ಹಾಗೂ ಹಂತ-2 ರಲ್ಲಿನ ನಗರಗಳಿಗೆ ವಿಸ್ತರಣೆಯನ್ನು ಗಮನದಲ್ಲಿಟ್ಟುಕೊಂಡು, ಮೈಸೂರು, ಮಂಗಳೂರು, ತುಮಕೂರು, ನಂಜನಗೂಡು, ಹುಬ್ಬಳ್ಳಿ-ಧಾರವಾಡ ಮತ್ತು ಬೆಳಗಾವಿ ಮುಂತಾದ ತಾಲ್ಲೂಕುಗಳನ್ನು ವಲಯ-3 ಕ್ಕೆ ಒಳಪಡಿಸಲಾಗಿದೆ.

v) ತಾಲ್ಲೂಕುಗಳ ವರ್ಗೀಕರಣ ಈ ಕೆಳಗಿನಂತೆ ಇದೆ:

| ಕ್ರಮ ಸಂಖ್ಯೆ | ಜಿಲ್ಲೆಗಳು | ತಾಲ್ಲೂಕುಗಳ ಒಟ್ಟಾರೆ ಸಂಖ್ಯೆ | ಹೈದರಾಬಾದ್ ಕರ್ನಾಟಕ ಪ್ರದೇಶದ ತಾಲ್ಲೂಕುಗಳು | | ಹೈದರಾಬಾದ್ ಕರ್ನಾಟಕಯೇತರ ಪ್ರದೇಶಗಳಲ್ಲಿನ ತಾಲ್ಲೂಕುಗಳು | | | |
|---|---|---|---|---|---|---|---|---|
| | | | ಹೆಚ್‌ಕೆ ವ-1 | ಹೆಚ್‌ಕೆ ವ-2 | ವ-1 | ವ-2 | ವ-3 | ವ-4 |
| 1 | 2 | 3 | 4 | 5 | 6 | 7 | 8 | 9 |
| 1. | ಬೆಂಗಳೂರು ನಗರ | 4 | - | - | - | - | - | ಆನೇಕಲ್ |
| | | | - | - | - | - | - | ಬೆಂ-ಉತ್ತರ, |
| | | | - | - | - | - | - | ಬೆಂ -ದಕ್ಷಿಣ |
| | | | - | - | - | - | - | ಬೆಂ-ಪೂರ್ವ |
| 2. | ಬೆಂಗಳೂರು ಗ್ರಾಮಾಂತರ | 4 | - | - | - | - | - | ದೇವನಹಳ್ಳಿ |
| | | | - | - | - | - | - | ದೊಡ್ಡಬಳ್ಳಾಪುರ |
| | | | - | - | - | - | - | ಹೊಸಕೋಟೆ, |
| | | | - | - | - | - | - | ನೆಲಮಂಗಲ |
| 3. | ರಾಮನಗರ | 4 | - | - | - | - | ಮಾಗಡಿ | ರಾಮನಗರ, |
| | | | - | - | - | - | ಚೆನ್ನಪಟ್ಟಣ | - |
| | | | - | - | - | - | ಕನಕಪುರ | - |
| 4. | ಚಿತ್ರದುರ್ಗ | 6 | - | - | - | ಹಿರಿಯೂರು | - | - |
| | | | - | - | - | ಮೊಳಕಾಲ್ಮುರು | - | - |
| | | | - | - | ಹೊಳಲಕೆರೆ | ಚಿತ್ರದುರ್ಗ | - | - |
| | | | - | - | - | ಹೊಸದುರ್ಗ | ಚಳ್ಳಕೆರೆ | - |
| 5. | ದಾವಣಗೆರೆ | 6 | - | - | ಚೆನ್ನಗಿರಿ | ಹೊನ್ನಾಳಿ | ದಾವಣಗೆರೆ | - |
| | | | - | - | ಜಗಳೂರು | - | ಹರಿಹರ | - |
| | | | - | - | ಹರಪ್ಪನಹಳ್ಳಿ | - | - | - |
| 6. | ಚಿಕ್ಕಬಳ್ಳಾಪುರ | 6 | - | - | ಗುಡಿಬಂಡೆ | ಚಿಕ್ಕಬಳ್ಳಾಪುರ | ಗೌರಿಬಿದನೂರು | - |
| | | | - | - | ಬಾಗೇಪಲ್ಲಿ | ಚಿಂತಾಮಣಿ | ಶಿಡ್ಲಘಟ್ಟ | - |
| 7. | ಕೋಲಾರ | 5 | - | - | ಮುಳಬಾಗಿಲು | - | ಕೋಲಾರ | - |
| | | | - | - | ಶ್ರೀನಿವಾಸಪುರ | - | ಬಂಗಾರಪೇಟೆ | - |
| | | | - | - | - | - | ಮಾಲೂರು | - |
| 8. | ಶಿವಮೊಗ್ಗ | 7 | - | - | ಸೊರಬ | ಹೊಸನಗರ | ಶಿವಮೊಗ್ಗ | - |
| | | | - | - | - | - | ಭದ್ರಾವತಿ | - |
| | | | - | - | - | - | ಸಾಗರ | - |
| | | | - | - | - | - | ಶಿಕಾರಿಪುರ | - |
| | | | - | - | - | - | ತೀರ್ಥಹಳ್ಳಿ | - |

| ಕ್ರಮ ಸಂಖ್ಯೆ | ಜಿಲ್ಲೆಗಳು | ತಾಲ್ಲೂಕುಗಳ ಒಟ್ಟಾರೆ ಸಂಖ್ಯೆ | ಹೈದರಾಬಾದ್ ಕರ್ನಾಟಕ ಪ್ರದೇಶದ ತಾಲ್ಲೂಕುಗಳು | | ಹೈದರಾಬಾದ್ ಕರ್ನಾಟಕಯೇತರ ಪ್ರದೇಶಗಳಲ್ಲಿನ ತಾಲ್ಲೂಕುಗಳು | | | |
|---|---|---|---|---|---|---|---|---|
| | | | ಹೆಚ್‌ಕೆ ವ-1 | ಹೆಚ್‌ಕೆ ವ-2 | ವ-1 | ವ-2 | ವ-3 | ವ-4 |
| 1 | 2 | 3 | 4 | 5 | 6 | 7 | 8 | 9 |
| 9 | ತುಮಕೂರು | 10 | - | - | - | ಮಧುಗಿರಿ | ತುಮಕೂರು | - |
| | | | - | - | - | ಕೊರಟಗೆರೆ | ತುರುವೇಕೆರೆ | - |
| | | | - | - | - | ಗುಬ್ಬಿ | ತಿಪಟೂರು | - |
| | | | - | - | - | ಸಿರ | ಚಿಕ್ಕನಾಯಕನಹಳ್ಳಿ | - |
| | | | - | - | - | ಪಾವಗಡ | ಕುಣಿಗಲ್ಲು | - |
| 10. | ಚಾಮರಾಜ ನಗರ | 4 | - | - | ಯಳಂದೂರು | ಚಾಮರಾಜನಗರ | - | - |
| | | | - | - | ಗುಂಡ್ಲುಪೇಟೆ. | ಕೊಳ್ಳೆಗಾಲ | - | - |
| 11. | ಚಿಕ್ಕಮಗಳೂರು | 7 | - | - | - | ಕಡೂರು | ಚಿಕ್ಕಮಗಳೂರು | - |
| | | | - | - | - | ಮೂಡಿಗೆರೆ. | ಶೃಂಗೇರಿ. | - |
| | | | - | - | - | ತರಿಕೆರೆ | ಕೊಪ್ಪ | - |
| | | | - | - | - | - | ಎನ್.ಆರ್.ಪುರ | - |
| 12. | ದಕ್ಷಿಣ ಕನ್ನಡ | 5 | - | - | - | - | ಮಂಗಳೂರು | - |
| | | | - | - | - | ಬಂಟ್ವಾಳ | ಪುತ್ತೂರು | - |
| | | | - | - | - | - | ಸುಳ್ಯ | - |
| | | | | | | | ಬೆಳ್ತಂಗಡಿ | - |
| 13. | ಹಾಸನ | 8 | - | - | ಅರಕಲಗೂಡು | ಅರಸಿಕೆರೆ | ಹಾಸನ | - |
| | | | - | - | ಬೇಲೂರು | ಚೆನ್ನರಾಯಪಟ್ಟಣ | ಸಕಲೇಶಪುರ | - |
| | | | - | - | - | ಹೊಳೆ ನರಸೀಪುರ | - | - |
| | | | - | - | - | ಆಲೂರು | - | - |
| 14. | ಕೊಡಗು | 3 | - | - | ವಿರಾಜಪೇಟೆ | ಮಡಿಕೇರಿ | - | - |
| | | | - | - | - | ಸೋಮವಾರಪೇಟೆ | - | - |
| 15. | ಮಂಡ್ಯ | 7 | - | - | ಮಳವಳ್ಳಿ | ಶ್ರೀರಂಗಪಟ್ಟಣ | ಮಂಡ್ಯ | - |
| | | | - | - | - | ನಾಗಮಂಗಲ | ಮದ್ದೂರು | - |
| | | | - | - | - | ಕೆ.ಆರ್. ಪೇಟೆ | - | - |
| | | | - | - | - | ಪಾಂಡವಪುರ | - | - |
| 16. | ಮೈಸೂರು | 7 | - | - | ಪಿರಿಯಾಪಟ್ಟಣ | ಹುಣಸೂರು. | ಮೈಸೂರು | - |
| | | | - | - | ಹೆಗ್ಗಡ ದೇವನಕೋಟೆ | ಟಿ. ನರಸೀಪುರ | ನಂಜನಗೂಡು | - |
| | | | - | - | - | ಕೃಷ್ಣರಾಜನಗರ | - | - |

| ಕ್ರಮ ಸಂಖ್ಯೆ | ಜಿಲ್ಲೆಗಳು | ತಾಲ್ಲೂಕುಗಳ ಒಟ್ಟಾರೆ ಸಂಖ್ಯೆ | ಹೈದರಾಬಾದ್ ಕರ್ನಾಟಕ ಪ್ರದೇಶದ ತಾಲ್ಲೂಕುಗಳು | | ಹೈದರಾಬಾದ್ ಕರ್ನಾಟಕಯೇತರ ಪ್ರದೇಶಗಳಲ್ಲಿನ ತಾಲ್ಲೂಕುಗಳು | | | |
|---|---|---|---|---|---|---|---|---|
| | | | ಹೆಚ್‌ಕೆ ವ-1 | ಹೆಚ್‌ಕೆ ವ-2 | ವ-1 | ವ-2 | ವ-3 | ವ-4 |
| 1 | 2 | 3 | 4 | 5 | 6 | 7 | 8 | 9 |
| 17. | ಉಡುಪಿ | 3 | - | - | - | - | ಉಡುಪಿ, | - |
| | | | - | - | - | - | ಕುಂದಾಪುರ | - |
| | | | - | - | - | - | ಕಾರ್ಕಳ | - |
| 18. | ಬಾಗಲಕೋಟೆ | 6 | - | - | - | ಬೀಳಗಿ | ಬಾಗಲಕೋಟೆ | - |
| | | | - | - | - | ಬಾದಾಮಿ | ಮುಧೋಳ | - |
| | | | - | - | - | - | ಜಮಖಂಡಿ | - |
| | | | - | - | - | - | ಹುನಗುಂದ್ | - |
| 19. | ಬೆಳಗಾವಿ | 10 | - | - | - | - | ಬೆಳಗಾವಿ | - |
| | | | - | - | - | ಬೈಲಹೊಂಗಲ | ಅಥಣಿ | - |
| | | | - | - | - | ಸವದತ್ತಿ | ಹುಕ್ಕೇರಿ | - |
| | | | - | - | - | ಚಿಕ್ಕೋಡಿ | ಗೋಕಾಕ | - |
| | | | - | - | - | ರಾಯಬಾಗ್ | ಖಾನಾಪುರ | - |
| | | | - | - | - | - | ರಾಮದುರ್ಗ | - |
| 20. | ಬಿಜಾಪುರ | 5 | - | - | ಮುದ್ದೆಬಿಹಾಳ, | ಸಿಂದಗಿ | - | - |
| | | | - | - | ಬಸವನಬಾಗೇವಾಡಿ | ಇಂಡಿ | - | - |
| | | | - | - | - | ಬಿಜಾಪುರ | - | - |
| 21. | ಧಾರವಾಡ | 5 | - | - | - | | ಧಾರವಾಡ | - |
| | | | - | - | - | - | ಹುಬ್ಬಳ್ಳಿ | - |
| | | | - | - | - | ನವಲಗುಂದ | ಕಲಘಟಗಿ | - |
| | | | - | - | - | | ಕುಂದಗೋಳ | - |
| 22. | ಗದಗ | 5 | - | - | ನರಗುಂದ | ಮುಂಡರಗಿ | ಗದಗ | - |
| | | | - | - | ರೋಣ | - | ಶಿರಹಟ್ಟಿ | - |
| 23. | ಹಾವೇರಿ | 7 | - | - | ಹಿರೇಕೆರೂರು | ಸವಣೂರು | ರಾಣೆಬೆನ್ನೂರು | - |
| | | | - | - | ಹಾನಗಲ್ | ಶಿಗ್ಗಾವಿ | ಬ್ಯಾಡಗಿ, | - |
| | | | - | - | - | ಹಾವೇರಿ | - | - |
| 24. | ಉತ್ತರಕನ್ನಡ | 11 | - | - | - | ಹೊನ್ನಾವರ | ಕಾರವಾರ | - |
| | | | - | - | - | ಶಿರಸಿ | ಹಳಿಯಾಳ | - |
| | | | - | - | - | ಮುಂಡಗೋಡು | ಸೂಪಾ | - |
| | | | - | - | - | ಯಲ್ಲಾಪುರ | ಭಟ್ಕಳ | - |
| | | | - | - | - | ಸಿದ್ಧಾಪುರ | ಅಂಕೋಲ | - |
| | | | - | - | - | - | ಕುಮಟಾ | - |

| ಕ್ರಮ ಸಂಖ್ಯೆ | ಜಿಲ್ಲೆಗಳು | ತಾಲ್ಲೂಕುಗಳ ಒಟ್ಟಾರೆ ಸಂಖ್ಯೆ | ಹೈದರಾಬಾದ್ ಕರ್ನಾಟಕ ಪ್ರದೇಶದ ತಾಲ್ಲೂಕುಗಳು | | ಹೈದರಾಬಾದ್ ಕರ್ನಾಟಕಯೇತರ ಪ್ರದೇಶಗಳಲ್ಲಿನ ತಾಲ್ಲೂಕುಗಳು | | | |
|---|---|---|---|---|---|---|---|---|
| | | | ಹೆಚ್‌ಕೆ ವ-1 | ಹೆಚ್‌ಕೆ ವ-2 | ವ-1 | ವ-2 | ವ-3 | ವ-4 |
| 1 | 2 | 3 | 4 | 5 | 6 | 7 | 8 | 9 |
| 25. | ಬಳ್ಳಾರಿ | 7 | ಹ.ಬೊ.ಹಳ್ಳಿ | ಬಳ್ಳಾರಿ | - | - | - | - |
| | | | ಹಡಗಲಿ | ಹೊಸಪೇಟೆ | - | - | - | - |
| | | | ಕೂಡ್ಲಿಗಿ | ಸಂಡೂರು | - | - | - | - |
| | | | - | ಸಿರಗುಪ್ಪ | - | - | - | - |
| 26. | ಬೀದರ್ | 5 | ಭಾಲ್ಕಿ | ಬೀದರ್ | - | - | - | - |
| | | | ಹುಮ್ನಾಬಾದ್ | - | - | - | - | - |
| | | | ಬಸವಕಲ್ಯಾಣ | - | - | - | - | - |
| | | | ಔರಾದ್ | - | - | - | - | - |
| 27. | ಗುಲ್ಬರ್ಗ | 7 | ಗುಲ್ಬರ್ಗ | ಸೇಡಂ, | - | - | - | - |
| | | | ಅಫ್ಜಲ್‌ಪುರ್ | ಚಿತ್ತಾಪುರ್ | - | - | - | - |
| | | | ಆಳಂದ | ಚಿಂಚೋಳಿ | - | - | - | - |
| | | | ಜೇವರ್ಗಿ | - | - | - | - | - |
| 28. | ಯಾದ್ಗಿರ್ | 3 | ಯಾದ್ಗಿರ್ | - | - | - | - | - |
| | | | ಶಾಹಪುರ | - | - | - | - | - |
| | | | ಶೋರಾಪುರ | - | - | - | - | - |
| 29. | ಕೊಪ್ಪಳ | 4 | ಕುಷ್ಟಗಿ | ಕೊಪ್ಪಳ | - | - | - | - |
| | | | ಯಲಬುರ್ಗ | ಗಂಗಾವತಿ | - | - | - | - |
| 30. | ರಾಯಚೂರು | 5 | ಸಿಂಧನೂರು | ರಾಯಚೂರು | - | - | - | - |
| | | | ಮಾನ್ವಿ | - | - | - | - | - |
| | | | ಲಿಂಗಸುಗೂರು | - | - | - | - | - |
| | | | ದೇವದುರ್ಗ | - | - | - | - | - |
| | ಒಟ್ಟು | 176 | 20 | 11 | 23 | 51 | 62 | 9 |

## 5.5 ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ ಕೈಗಾರಿಕಾಭಿವೃದ್ಧಿಗಾಗಿ ಉತ್ತೇಜನ :

ಹೈದರಾಬಾದ್-ಕರ್ನಾಟಕ ಪ್ರದೇಶಕ್ಕಾಗಿ ನೀಡಲಾಗಿರುವ ಕಲಮು 371(ಜೆ) ಸ್ಥಾನಮಾನವನ್ನು ಸದುಪಯೋಗ ಪಡಿಸಿಕೊಂಡು, ಒಂದು ಬಲಿಷ್ಠ ಕೈಗಾರಿಕಾ ನೆಲೆಯನ್ನು ಕಲ್ಪಿಸಲು, ಸಮಗ್ರ ಅಭಿವೃದ್ಧಿಗಾಗಿ ನಿಧಿಗಳನ್ನು ಸರಿಸಮಾನವಾಗಿ ನಿಗದಿಪಡಿಸಿ, ವಲಯದ ಜನರಿಗೆ ಸಮಾನ ಅವಕಾಶಗಳು ಮತ್ತು ಸೌಕರ್ಯಗಳನ್ನು ಒದಗಿಸುವ ಉದ್ದೇಶದಿಂದ, ವಿಶೇಷ ಪ್ರೋತ್ಸಾಹಗಳನ್ನು ಕೆಳಕಂಡಂತೆ ನೀಡಲಾಗುವುದು:

*I) ಸರಾಸರಿ ತಲಾವಾರು ಕೈಗಾರಿಕಾ ಬಂಡವಾಳ ಮತ್ತು ಕೈಗಾರಿಕೆಗಳಲ್ಲಿ ತಲಾವಾರು ಉದ್ಯೋಗದ ಆಧಾರದ ಮೇಲೆ, ಹೈದರಾಬಾದ್-ಕರ್ನಾಟಕ ಪ್ರದೇಶದ ತಾಲ್ಲೂಕುಗಳನ್ನು ಎರಡು ವಲಯಗಳಾಗಿ, ಅಂದರೆ, ಹೆಚ್‌ಕೆ ವಲಯ-1 ಮತ್ತು ಹೆಚ್‌ಕೆ ವಲಯ-2 ಎಂದು ವರ್ಗೀಕರಿಸಲಾಗಿದೆ.*

*ii) ಹೈದರಾಬಾದ್ ಕರ್ನಾಟಕ ಪ್ರದೇಶವು, ಸಾಮಾನ್ಯ ರಿಯಾಯಿತಿ ಮತ್ತು ಪ್ರೋತ್ಸಾಹಗಳ ಹೊರತಾಗಿ ಹೆಚ್ಚುವರಿ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಪಡೆಯುತ್ತದೆ.*

*iii) ಹೈದರಾಬಾದ್ ಕರ್ನಾಟಕ ಪ್ರದೇಶವನ್ನು ಹಿಂದುಳಿದ ಪ್ರದೇಶವೆಂದು ಘೋಷಿಸಲಾಗಿರುವುದರಿಂದ ಹಾಗೂ ವಲಯದ ಅಭಿವೃದ್ಧಿಗಾಗಿ ಅಗತ್ಯವಾಗುವ ನಿಧಿಗಳ ಬಗ್ಗೆ ವಿಶೇಷ ಗಮನ ಹರಿಸಬೇಕಾಗಿರುವುದರಿಂದ, ಸೀಮಾಂಧ್ರಗೆ ನೀಡಿರುವ ರೀತಿಯಲ್ಲೇ ಎಕ್ಸೈಸ್ ಶುಲ್ಕ ವಿನಾಯಿತಿ, ಆದಾಯ ತೆರಿಗೆ ವಿನಾಯಿತಿ ಇತ್ಯಾದಿ ಪ್ರೋತ್ಸಾಹಗಳನ್ನು ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೂ ಕೊಡಬೇಕೆಂದು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರವನ್ನು ಆಗ್ರಹಪಡಿಸಲಿದೆ.*

## 5.6 ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು (ಎಂಎಸ್‌ಎಂಇಗಳು) ಅಭಿವೃದ್ಧಿಗೆ ಕ್ರಮ:

ಎಂಎಸ್‌ಎಂಇಗಳು ರಾಜ್ಯದ ಹಾಗೂ ದೇಶದ ಸಾಮಾಜಿಕ-ಆರ್ಥಿಕ ಅಭಿವೃದ್ಧಿಯಲ್ಲಿ ಒಂದು ಮಹತ್ತರ ಪಾತ್ರವನ್ನು ವಹಿಸಿವೆ. ಈ ವಲಯವು ವೈಯಕ್ತಿಕ ಸೃಜನಶೀಲತೆ ಮತ್ತು ನೂತನತೆಯಿಂದ ಪ್ರೇರೇಪಿತವಾಗಿ ಉದ್ಯಮಶೀಲತೆಯ ಹುಟ್ಟುತಾಣವಾಗಿರುತ್ತದೆ. ಇದು ರಾಷ್ಟ್ರದ ಜಿಡಿಪಿಗೆ 8%, ಉತ್ಪಾದನಾ ವಲಯಕ್ಕೆ 45% ಹಾಗೂ ರಫ್ತಿಗೆ ಗೆ 40%ಗಳನ್ನು ಕೊಡುಗೆ ನೀಡಿ, ದೇಶದಲ್ಲಿ 40 ದಶಲಕ್ಷ ನೋಂದಾಯಿತ ಎಂಎಸ್‌ಎಂಇಗಳು 80 ದಶಲಕ್ಷಕ್ಕೂ ಅಧಿಕ ಯುವಜನರಿಗೆ ಉದ್ಯೋಗವನ್ನು ಒದಗಿಸುತ್ತಿದೆ.

ಎಂಎಸ್‌ಎಂಇಗಳು ರಾಜ್ಯದಲ್ಲಿ ವ್ಯಾಪಕವಾಗಿ ಚದುರಿವೆ ಹಾಗೂ ಸ್ಥಳೀಯ ಮಾರುಕಟ್ಟೆಗಳು, ಜಾಗತಿಕ ಮಾರುಕಟ್ಟೆ ಮತ್ತು ರಾಷ್ಟ್ರೀಯ/ಅಂತರರಾಷ್ಟ್ರೀಯ ಮಾರಾಟ ಸರಣಿಗಳ ಅಗತ್ಯಗಳನ್ನು ಪೂರೈಸುವಂತಹ ವೈವಿಧ್ಯಮಯ ಶ್ರೇಣಿಯ ಉತ್ಪನ್ನಗಳು ಹಾಗೂ ಸೇವೆಗಳನ್ನು ಪೂರೈಸುತ್ತವೆ.

ಆದ್ದರಿಂದಲೇ ಕರ್ನಾಟಕದಲ್ಲಿ ಹೊಸ ಕೈಗಾರಿಕಾ ನೀತಿಯನ್ನು ರೂಪಿಸುವಾಗ ಎಂಎಸ್‌ಎಂಇಗಳಿಗಾಗಿ ವಿಶೇಷ ಗಮನವನ್ನು ನೀಡಲಾಗಿದೆ.

### 5.6.1 ಮೂಲ ವ್ಯವಸ್ಥೆಯ ಬೆಂಬಲ:

5.6.1.1 ಕೆಐಎಡಿಬಿ ಎಂಎಸ್‌ಎಂಇಗಳಿಗಾಗಿ ತನ್ನ ಕೈಗಾರಿಕಾ ಪ್ರದೇಶದಲ್ಲಿ ಹಂಚಿಕೆಯೋಗ್ಯ ಭೂಮಿಯ ಕನಿಷ್ಠ 20%ನ್ನು ನಿಗದಿ ಮಾಡಲಿದೆ.

5.6.1.2 ಎಂಎಸ್‌ಎಂಇ ವಲಯಕ್ಕಾಗಿ ಕಿರಿಯ ಗಾತ್ರದ ಕೈಗಾರಿಕಾ ನಿವೇಶನಗಳು ಮತ್ತು ಶೆಡ್‌ಗಳನ್ನು ರಚಿಸುವುದಕ್ಕಾಗಿ ಕೆಎಸ್‌ಎಸ್‌ಐಡಿಸಿಗೆ ಕೆಐಎಡಿಬಿ ಕೈಗಾರಿಕಾ ಪ್ರದೇಶದಲ್ಲಿ ಅದು ಕೋರುವ ಭೂಮಿಯನ್ನು ನಿಗದಿ ಮಾಡಲಾಗುವುದು.

5.6.1.3 ಎಂ.ಎಸ್.ಎಂ.ಇ.ಗಳಿಗೆ ಕೆಐಎಡಿಬಿ/ಕೆಎಸ್‌ಎಸ್‌ಐಡಿಸಿ, ಸೂಕ್ಷ್ಮ ಮತ್ತು ಸಣ್ಣ ಸಂಸ್ಥೆಗಳಿಗೆ ಹಂಚಿಕೆಯೋಗ್ಯ ಭೂಮಿಯ ಕನಿಷ್ಠ 75% ವಿಸ್ತೀರ್ಣವನ್ನೂ, ಮಧ್ಯಮ ವಲಯದ ಸಂಸ್ಥೆಗಳಿಗೆ ಭೂಮಿಯ 25% ನ್ನೂ ಮೀಸಲಾಗಿಡಲಿವೆ.

5.6.1.4 ಕರ್ನಾಟಕ ಕೈಗಾರಿಕೆಗಳ ಫೆಸಿಲಿಟೇಶನ್ ಕಾಯ್ದೆ 2002ರಡಿ ರಚಿಸಲಾಗಿರುವ ಜಿಲ್ಲಾ ಮಟ್ಟದ ಏಕಗವಾಕ್ಷ ಮಂಜೂರಾತಿ ಸಮಿತಿಯು (ಡಿಎಲ್ ಎಸ್ ಡಬ್ಲ್ಯೂಸಿಸಿ), ಎಂಎಸ್ಎಂಇಗಳಿಗಾಗಿ ಭೂಮಿಯನ್ನು ನಿಗದಿ ಮಾಡುತ್ತದೆ.

5.6.1.5 ಕೆಎಸ್ಎಸ್ಐಡಿಸಿ ಸಹ ಸ್ವಂತವಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡು, ಇದನ್ನು ಸೂಕ್ಷ್ಮ ಮತ್ತು ಸಣ್ಣ ಸಂಸ್ಥೆಗಳಿಗಾಗಿ ವಿಶೇಷವಾಗಿ ಕೈಗಾರಿಕಾ ನಿವೇಶನಗಳನ್ನು ಅಭಿವೃದ್ಧಿಪಡಿಸಲು ಉಪಯೋಗಿಸಿಕೊಳ್ಳುತ್ತದೆ. ಈ ರೀತಿ ಸ್ವಾಧೀನಪಡಿಸಿಕೊಂಡ ಪ್ರದೇಶವು 50 ಎಕರೆಗಳಿಗಿಂತ ಕಡಿಮೆ ಇರುವುದಿಲ್ಲ. ವಿತರಣಾ ಪ್ರದೇಶದ 20%ನ್ನು ಶೆಡ್‌ಗಳಿಗಾಗಿ ಮೀಸಲಾಗಿಡಲಾಗುವುದು ಮತ್ತು ಇದರ ಪೈಕಿ 10% ಪ್ರದೇಶವನ್ನು ಬೆಂಗಳೂರು, ಮೈಸೂರು, ಹುಬ್ಬಳ್ಳಿ-ಧಾರವಾಡ, ಮಂಗಳೂರು, ಬೆಳಗಾವಿ ಮತ್ತು ಗುಲ್ಬರ್ಗಾ ಸಮೀಪ ಬಹು ಅಂತಸ್ತಿನ ಶೆಡ್‌ಗಳಿಗಾಗಿ (ಸಾಧ್ಯವಾದೆಡೆ) ನಿಗದಿಪಡಿಸಲಾಗುವುದು ಮತ್ತು ಭೂಸ್ವಾಧೀನದಲ್ಲಿ ಇರುವ ಅಡಚಣೆಗಳನ್ನು ಪರಿಗಣಿಸಿ ಅತಿಸಣ್ಣ ಸಂಸ್ಥೆಗಳಿಗೆ ಗುತ್ತಿಗೆ/ಬಾಡಿಗೆ ಆಧಾರದ ಮೇಲೆ ಫ್ಲಾಟ್‌ಗಳನ್ನು ಒದಗಿಸಲಾಗುವುದು. ಕೈಗಾರಿಕಾ ಶೆಡ್‌ಗಳಿಗಾಗಿ 1.5ರಿಂದ 1.75ರವರೆಗೆ ಮತ್ತು ಬಹು ಕಟ್ಟಡದ ಕೈಗಾರಿಕಾ ಘಟಕಗಳಿಗೆ 2.5ರವರೆಗೆ ಫ್ಲಾಟೆಡ್ ಅಭಿವೃದ್ಧಿಗಾಗಿ ಧಾರಾಳೀಕೃತ ಎಫ್ಎಆರ್ ಅನ್ನು ಪರಿಗಣಿಸಲಾಗುವುದು.

5.6.1.6 ಕೈಗಾರಿಕಾ ಕಾರಿಡಾರ್‌ಗಳಲ್ಲಿನ ಮುಖ್ಯಪ್ರದೇಶದಲ್ಲಿ ಎಂಎಸ್ಎಂಇಗಳಿಗಾಗಿ ವಿಶೇಷ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯನ್ನು, ಕೆಐಎಡಿಬಿ/ಕೆಎಸ್ಎಸ್ಐಡಿಸಿ ಕೈಗೊಳ್ಳುವ ರಸ್ತೆ ಸಂಪರ್ಕ, ಒಳಚರಂಡಿ ವ್ಯವಸ್ಥೆ, ರಸ್ತೆ, ದೀಪ ಮತ್ತು ನೀರು ಪೂರೈಕೆ ಮುಂತಾದ ಮೂಲವ್ಯವಸ್ಥೆಗಳೊಂದಿಗೆ ಜೊತೆಗೂಡಿಸಲಾಗುವುದು. ಗ್ರಾಮೀಣ ಕೈಗಾರಿಕಾ ಪ್ರದೇಶಗಳು ಮತ್ತು ನಿವೇಶನಗಳು, 2,000 ಚ.ಅಡಿಗಳಿಂದ 10,000 ಚ.ಅಡಿ ವಿಸ್ತೀರ್ಣವಿರುವ ಕನಿಷ್ಠ 100ರಿಂದ 150 ಸೈಟ್‌ಗಳನ್ನು ಹೊಂದಿರುತ್ತವೆ ಮತ್ತು ಇವನ್ನು ಪ್ರತಿ ಜಿಲ್ಲೆಯ ಸಾಮರ್ಥ್ಯ ಸಾಧ್ಯ ಪ್ರದೇಶಗಳಲ್ಲಿ ಅಭಿವೃದ್ಧಿಪಡಿಸಲಾಗುವುದು.

5.6.1.7 ಕೆಎಸ್ಎಸ್ಐಡಿಸಿ ಮೂಲಕ ಕೈಗಾರಿಕಾ ಸೈಟ್‌ಗಳು/ಶೆಡ್‌ಗಳನ್ನು ಇನ್ನು ಮುಂದೆ 99 ವರ್ಷಗಳ ಗುತ್ತಿಗೆ ಆಧಾರದ ಮೇಲೆ ಮಾತ್ರ ಯೋಜನಾ ಪ್ರತಿಪಾದಕರಿಗೆ ನಿಗದಿ ಮಾಡಲಾಗುವುದು.

5.6.1.8 ಕೆಎಸ್ಎಸ್ಐಡಿಸಿ ಕೈಗಾರಿಕಾ ಬಳಕೆಗಾಗಿ ಕೈಗಾರಿಕಾ ನಿವೇಶನಗಳಿಗೆ ಸಂಸ್ಕರಿತ ನೀರನ್ನು ಒದಗಿಸುತ್ತದೆ. ಕುಡಿಯುವ ನೀರಿನ ಪೂರೈಕೆಗಾಗಿ ಸೂಕ್ತ ಏರ್ಪಾಡುಗಳನ್ನು ಸಹ ಮಾಡಲಾಗುವುದು.

5.6.1.9 ಕೆಎಸ್ಎಸ್ಐಡಿಸಿ ತನ್ನ ವೆಬ್‌ಸೈಟ್ ಮೂಲಕ ಸೈಟ್‌ಗಳು/ಶೆಡ್‌ಗಳ ಲಭ್ಯತೆಯ ಬಗ್ಗೆ ಸಾರ್ವಜನಿಕರಿಗೆ ತಾಜಾ ಮಾಹಿತಿಯನ್ನು ಒದಗಿಸುತ್ತದೆ.

5.6.1.10 ಎಂಎಸ್ಎಂಇಗಳಿಗೆ ಅಗತ್ಯವಾಗುವ ವಿವಿಧ ಕೈಗಾರಿಕಾ ಕಚ್ಚಾ ಸಾಮಗ್ರಿಗಳ ಸಂಗ್ರಹಣೆ ಮತ್ತು ವಿತರಣೆಯ ಕಾರ್ಯವನ್ನು ಕೆಎಸ್ಎಸ್ಐಡಿಸಿ ಮುಂದುವರೆಸುತ್ತದೆ. ಪ್ರಸ್ತುತ ಕೆಎಸ್ಎಸ್ಐಡಿಸಿ ಕಬ್ಬಿಣ ಮತ್ತು ಉಕ್ಕು, ಕಲ್ಲಿದ್ದಲು, ಪ್ಯಾರಫಿನ್ ವ್ಯಾಕ್ಸ್ ಮತ್ತು ಸಿಮೆಂಟ್ ಸಂಗ್ರಹಿಸಿ ವಿತರಿಸುತ್ತಿದೆ. ಸ್ಪರ್ಧಾತ್ಮಕ ಬೆಲೆಗಳಲ್ಲಿ ಎಂಎಸ್ಎಂಇಗಳಿಗೆ ಹೆಚ್ಚುವರಿ ಕೈಗಾರಿಕಾ ಕಚ್ಚಾ ಸಾಮಗ್ರಿಗಳನ್ನು ಸಂಗ್ರಹಿಸಿ ವಿತರಿಸುವ ವ್ಯವಸ್ಥೆಯನ್ನು ಕೆಎಸ್ಎಸ್ಐಡಿಸಿ ಪರಿಶೀಲಿಸಲಿದೆ.

5.6.1.11 ಸಂಸ್ಥೆಗಳು, ವಿಶೇಷ ಅಭಿವೃದ್ಧಿ ಕಾರ್ಯಕ್ರಮ ಮತ್ತು ಕೈಗಾರಿಕಾ ವಿಕಾಸಕ್ಕಾಗಿ ಮೂಲವ್ಯವಸ್ಥೆಯ ಬೆಂಬಲವನ್ನು ಒದಗಿಸಲು ಲಭ್ಯವಿರುವ ನಿಧಿಗಳನ್ನು, 10 ವರ್ಷಗಳಿಗಿಂತ ಹಳೆಯದಾದ ಪ್ರಸಕ್ತ ಕೈಗಾರಿಕಾ ನಿವೇಶನಗಳ ಆಧುನೀಕರಣ ಹಾಗೂ ಕೆಎಸ್ಎಸ್ಐಡಿಸಿ ಹೊಸದಾಗಿ ಕೈಗಾರಿಕಾ ನಿವೇಶನಗಳನ್ನು ಸ್ವಾಧೀನಪಡಿಸಿಕೊಳ್ಳುವಿಕೆಗಾಗಿ ಬಳಸಿಕೊಳ್ಳಲಾಗುವುದು.

5.6.1.12 ಮೂಲವ್ಯವಸ್ಥೆಯಲ್ಲಿನ ಕೊರತೆಗಳನ್ನು ತುಂಬಲು ಸೂಕ್ಷ್ಮ ಮತ್ತು ಸಣ್ಣ ಸಂಸ್ಥೆಗಳ-ಸಮೂಹ ಅಭಿವೃದ್ಧಿ ಕಾರ್ಯಕ್ರಮ (ಎಂಎಸ್ಇ-ಸಿಡಿಪಿ), ಭಾರತ ಸರ್ಕಾರದ ಪರಿಷ್ಕೃತ ಕೈಗಾರಿಕಾ ಮೂಲವ್ಯವಸ್ಥೆ ನವೀಕರಣ ಯೋಜನೆ (ಎಂಐಐಯುಎಸ್) ಮುಂತಾದ ಸ್ಕೀಂಗಳನ್ನು ಸಹ ಕೆಐಎಡಿಬಿ / ಕೆಎಸ್ಎಸ್ಐಡಿಸಿ ಬಳಸಿ ಭೂಮಿಯನ್ನು ಅಭಿವೃದ್ಧಿಪಡಿಸುತ್ತವೆ.

### 5.6.2 ಹಣಕಾಸು

5.6.2.1 ಸೂಕ್ಷ್ಮ ಮತ್ತು ಸಣ್ಣ ಸಂಸ್ಥೆಗಳಿಗಾಗಿ ಸಾಲ ಗ್ಯಾರಂಟಿ ಟ್ರಸ್ಟ್ (ಸಿಜಿಟಿಎಂಎಸ್ಇ), ಕ್ರೆಡಿಟ್ ಲಿಂಕಡ್ ಕ್ಯಾಪಿಟಲ್ ಸಬ್ಸಿಡಿ (ಸಿಎಲ್‌ಸಿಎಸ್‌ಎಸ್) ಮುಂತಾದ ಯೋಜನೆಗಳಲ್ಲಿ ವಾಣಿಜ್ಯ ಸಾಲ ಸಂಸ್ಥೆಗಳು ನಿಗದಿಪಡಿಸಿರುವ ಗುರಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದನ್ನು ಸರ್ಕಾರ ಖಚಿತಪಡಿಸಿಕೊಳ್ಳುತ್ತದೆ.

5.6.2.2 ಹೊಸ ಸಂಸ್ಥೆಗಳ ಮತ್ತು ವಿಶೇಷವಾಗಿ ಅತಿ ಸಣ್ಣ ಮತ್ತು ಸಣ್ಣ ವಲಯದಲ್ಲಿನ ಸಂಸ್ಥೆಗಳನ್ನು ಬೆಂಬಲಿಸಲು ವೆಂಚರ್ ಕ್ಯಾಪಿಟಲ್ ಫಂಡ್ ಅನ್ನು ರಚಿಸಲಾಗುವುದು.

5.6.2.3 ವಿನೂತನ ಪರಿಕಲ್ಪನೆಗಳಿರುವ ಮೊದಲ ಪೀಳಿಗೆಯ ಉದ್ಯಮಶೀಲರು ರಾಜ್ಯದಲ್ಲಿ ಅತಿಸಣ್ಣ ಮತ್ತು ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವತ್ತ ಉತ್ತೇಜನ ನೀಡುವುದಕ್ಕಾಗಿ ಏಂಜೆಲ್ ಫಂಡಿಂಗ್ ಸ್ಕೀಂಗಳನ್ನು ಹೂಡಲು ಉದ್ದೇಶಿಸಲಾಗಿದೆ.

5.6.2.4 ಪ್ರಧಾನಮಂತ್ರಿಯವರ ಉದ್ಯೋಗ ಖಾತರಿ ಕಾರ್ಯಕ್ರಮ (ಪಿಎಂಇಜಿಪಿ) ಇತ್ಯಾದಿ ಸ್ಕೀಂಗಳ ಮೂಲಕ ಗ್ರಾಮೀಣ ಮತ್ತು ಅರೆ ಪಟ್ಟಣ ಪ್ರದೇಶಗಳಲ್ಲಿ ವಿಶೇಷವಾಗಿ ಹೊಸ ಸಂಸ್ಥೆಗಳನ್ನು ಸ್ಥಾಪಿಸುವ ಒಂದು ಗುರಿಯುಕ್ತ ಧೋರಣೆಯನ್ನು ಹಮ್ಮಿಕೊಳ್ಳಲಾಗುವುದು.

5.6.2.5 ಗ್ರಾಮೀಣ ಉದ್ಯಮಶೀಲರಿಗೆ ಮತ್ತು ಕುಶಲಕರ್ಮಿಗಳಿಗೆ ಸಾಲ ಪೂರೈಕೆಯನ್ನು ಸುಧಾರಿಸಲು, ಸಮೂಹ ಆಧಾರಿತ ನಿಲುಪಿನಡಿ ಸಾಲಗಳನ್ನು ನೀಡಬೇಕೆಂದು ವಾಣಿಜ್ಯ ಮತ್ತು ಗ್ರಾಮೀಣ ಪ್ರಾದೇಶಿಕ ಬ್ಯಾಂಕುಗಳನ್ನು ಕೋರಲಾಗುವುದು.

5.6.2.6 ವಿಶೇಷವಾಗಿ ಅತಿಸಣ್ಣ ಮತ್ತು ಸಣ್ಣ ವಲಯಗಳಿಗಾಗಿ ಹಣಕಾಸು ಸಂಸ್ಥೆಗಳು ಒದಗಿಸುವ ಸಾಲ ಸ್ಕೀಂಗಳನ್ನು ಕುರಿತಂತೆ ಪ್ರಚಾರವನ್ನು ಸಂಸ್ಥೆಗಳು ಮತ್ತು ಎಂಎಸ್‌ಎಂಇ ಸಂಘಗಳ ಮೂಲಕ ಕೈಗೊಳ್ಳಲಾಗುವುದು.

### 5.6.3 ತಂತ್ರಜ್ಞಾನ ನವೀಕರಣ ಮತ್ತು ತಾಂತ್ರಿಕ ಬೆಂಬಲ

5.6.3.1 ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆಯು ಹೊಸ ತಂತ್ರಜ್ಞಾನಗಳ ಅಂಗೀಕಾರ, ವಾಣಿಜ್ಯೀಕರಣ, ವರ್ಗಾವಣೆ ಮತ್ತು ಆಧುನೀಕರಣ ಹಾಗೂ ಕೈಗಾರಿಕೆಗಳ ನೋಂದಣಿ ಮತ್ತು ಪೇಟೆಂಟ್‌ಗಳ ಹಂಚಿಕೊಳ್ಳುವಿಕೆಯನ್ನು ಉತ್ತೇಜಿಸಲು ಒಂದು ವಿಶಿಷ್ಟ ಸ್ಕೀಂ ಅನ್ನು ಪರಿಚಯಿಸಲಿದೆ.

5.6.3.2 ಈ ಸ್ಕೀಂ, ಬಂಡವಾಳ ವೆಚ್ಚ, ಕಾರ್ಯ ವಿಧಾನದ ನವೀಕರಣ, ಪರಿಸರ ಮಾಲಿನ್ಯದ ಇಳಿತ, ಕಡಿಮೆ ಜಲಬಳಕೆ, ಕಡಿಮೆ ವಿದ್ಯುತ್ ಬಳಕೆ, ಹೊಸ ತಂತ್ರಜ್ಞಾನದ ಅಂಗೀಕರಣ ಮುಂತಾದವುಗಳಿಗಾಗಿ ಭಾರತ ಸರ್ಕಾರ ನೀಡುವ ಪ್ರೋತ್ಸಾಹಗಳಿಗೆ ಹೊರತಾಗಿ ಸ್ಥಳೀಯ ಕೈಗಾರಿಕೆಗಳಿಗೆ ಪ್ರೋತ್ಸಾಹಗಳನ್ನು ಒದಗಿಸುವುದರಿಂದ ಗುಣಮಟ್ಟ ಪರಿಪಾಲನೆ ಮತ್ತು ಮಾನಕಗಳು, ಪೇಟೆಂಟ್ ನೋಂದಣಿ ಮುಂತಾದವು ಸುಧಾರಿಸುತ್ತವೆ.

5.6.3.3 ದೇಶೀಯ/ಅಂತರರಾಷ್ಟ್ರೀಯ ಸಂಶೋಧನಾ ಸಂಸ್ಥೆಗಳು/ಏಜೆನ್ಸಿಗಳೊಂದಿಗೆ ಸಹಯೋಗದತ್ತ ಮತ್ತು ರಫ್ತು ಉದ್ದೇಶಿತ ಘಟಕಗಳತ್ತ ವಿಶೇಷ ಆದ್ಯತೆಯನ್ನು ನೀಡಲಾಗುವುದು.

5.6.3.4 ರಾಜ್ಯವು ಹೊಸ ತಂತ್ರಜ್ಞಾನಗಳ ಅಂಗೀಕಾರಕ್ಕೆ ಅನುವು ಮಾಡಿಕೊಡಲು ಹಲವಾರು ಸವಿವರವಾದ ಯೋಜನಾ ಸಂಗ್ರಹವನ್ನು ಕಲ್ಪಿಸಲಿದೆ.

5.6.3.5 ವಿಶ್ವೇಶ್ವರಯ್ಯ ಟ್ರೇಡ್ ಪ್ರೊಮೋಷನ್ ಸೆಂಟರ್ (ವಿಟಿಪಿಸಿ) ಮತ್ತು ಕರ್ನಾಟಕ ಕೌನ್ಸಿಲ್ ಫಾರ್ ಟೆಕ್ನೋಲಾಜಿಕಲ್ ಅಪ್‌ಗ್ರೇಡೇಷನ್ (ಕೆಸಿಟಿಯು), ಹೊಸ ತಂತ್ರಜ್ಞಾನಗಳ ಅಂಗೀಕಾರದ ಬಗ್ಗೆ ಜಾಗೃತಿಯನ್ನು ಹೆಚ್ಚಿಸಲು ಎಸ್‌ಎಂಇ ಉದ್ಯಮಶೀಲರಿಗಾಗಿ ತ್ರೈಮಾಸಿಕ ವಿಚಾರ ಸಂಕಿರಣಗಳು ಮತ್ತು ವರ್ಕ್‌ಷಾಪ್‌ಗಳನ್ನು ನಡೆಸುತ್ತವೆ.

5.6.3.6 ಸರ್ಕಾರವು ತಂತ್ರಜ್ಞಾನ ಅಭಿವೃದ್ಧಿ, ವಿನೂತನತೆ, ಉತ್ಪಾದನೆ ಮತ್ತು ಲಾಭ ಮಟ್ಟಗಳಲ್ಲಿ ಅತ್ಯುತ್ಕೃಷ್ಟತೆ/ ಬೆಳವಣಿಗೆಯನ್ನು ಸಾಧಿಸುವುದರೊಂದಿಗೆ ಗುಣಮಟ್ಟ ಮತ್ತು ಪರಿಸರಪೂರಕ ಉಪಕ್ರಮಗಳನ್ನು ಮೈಗೂಡಿಸಿಕೊಳ್ಳುವ ಎಂಎಸ್‌ಎಂಇಗಳಿಗೆ ಪ್ರಶಸ್ತಿಗಳನ್ನು ನೀಡುತ್ತದೆ.

5.6.3.7 ಪ್ರಸಕ್ತ ತಂತ್ರಜ್ಞಾನಗಳನ್ನು ನವೀಕರಿಸಿ, ಗುಣಮಟ್ಟ ನಿಯಂತ್ರಣ, ಸ್ವಚ್ಛ ಪರಿಸರ ಪೂರಕ ಉತ್ಪಾದನೆ, ಗುಣಮಟ್ಟ ಪರೀಕ್ಷೆ ಮತ್ತು ಗುಣಮಟ್ಟ ಪ್ರಮಾಣೀಕರಣಕ್ಕಾಗಿ ಕೊಡಲಾದ ಶುಲ್ಕ ಮುಂತಾದ ಗುಣಮಟ್ಟ ಸುಧಾರಣಾ ಪ್ರಯತ್ನಗಳನ್ನು ಅಳವಡಿಸಿಕೊಳ್ಳುವ ರಾಜ್ಯ ಎಂಎಸ್‌ಎಂಇಗಳು ವಾಸ್ತವಿಕ ವೆಚ್ಚಗಳ ಪುನರ್‌ಪಾವತಿಯಾಗಿ ಏಕಕಾಲದ ಸಬ್ಸಿಡಿಗೆ ಅರ್ಹವಾಗುತ್ತವೆ. ಈ ಪ್ರಯೋಜನ ಈಗಾಗಲೇ ಕೇಂದ್ರ ಸರ್ಕಾರದ ಸ್ಕೀಂಗಳಡಿ ಪ್ರಯೋಜನಗಳನ್ನು ಪಡೆದಿದ್ದರೂ, ನವೀಕರಣ ಮಾಡಲು ಬಯಸುವ ಎಂಎಸ್‌ಎಂಇಗಳಿಗೆ ಸಹ ಲಭ್ಯವಿರುತ್ತವೆ.

5.6.3.8 ಕಾರ್ಮಿಕ ಉತ್ಪಾದಕತೆ ಎಂಎಸ್‌ಎಂಇ ಗಳಲ್ಲಿ ವಿಶೇಷವಾಗಿ ಸುಧಾರಿತ ಪ್ರತಿಫಲಗಳು ಮತ್ತು ಅಧಿಕ ಉತ್ಪಾದನೆಗೆ ಮೂಲ ಮಂತ್ರವಾಗಿರುವುದರಿಂದ, ಇದಕ್ಕೆ ಹೆಚ್ಚು ಒತ್ತು ಕೊಡಲಾಗುವುದು.

5.6.3.9 ಎಂಎಸ್‌ಎಂಇ ವಲಯಕ್ಕೆ ತಾಂತ್ರಿಕ ಬೆಂಬಲವನ್ನು ವಿಸ್ತರಿಸುವ ಸಲುವಾಗಿ ಭಾರತ ಸರ್ಕಾರದ ಎಂಎಸ್‌ಎಂಇ ಸಚಿವಾಲಯ ಹಾಗೂ ರಾಜ್ಯದ ಎಲ್ಲಾ ನಾಲ್ಕು ಉದ್ದೇಶಿತ ಎನ್‌ಐಎಂಜಡ್ ಸಹಯೋಗದೊಂದಿಗೆ ತಾಂತ್ರಿಕ ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

**5.6.4ಮಾರಾಟ ಬೆಂಬಲ**

5.6.4.1 ಕೈಗಾರಿಕೆಗಳು ಮತ್ತು ವಾಣಿಜ್ಯ ಇಲಾಖೆಯು, ಎಂಎಸ್‌ಎಂಇಗಳು ಮತ್ತು ದೊಡ್ಡ ತಯಾರಕರು/ ಸಾರ್ವಜನಿಕ ಉದ್ದಿಮೆಗಳನ್ನು ಒಗ್ಗೂಡಿಸಲು ರಾಜ್ಯ ಮಟ್ಟದಲ್ಲಿ ದ್ವೈವಾರ್ಷಿಕ ಮಾರಾಟ ಅಭಿವೃದ್ಧಿ ಕಾರ್ಯಕ್ರಮವನ್ನು ನಡೆಸುತ್ತದೆ. ಇದೇ ರೀತಿಯ ಕಾರ್ಯಕ್ರಮಗಳನ್ನು ಜಿಲ್ಲಾ ಮಟ್ಟದಲ್ಲಿಯೂ ನಡೆಸಲಾಗುವುದು. ಎಂಎಸ್‌ಎಂಇಗಳಿಗಾಗಿ ಸಹಯೋಗ/ಮಾರಾಟ ಅವಕಾಶಗಳನ್ನು ಸಮನ್ವಯಗೊಳಿಸಲು ಒಂದು ಆನ್‌ಲೈನ್ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲಾಗುವುದು.

5.6.4.2 ಪ್ರತಿ ಜಿಲ್ಲೆಯಲ್ಲಿ ಪ್ರಶಸ್ತಿಗಳಿಗಾಗಿ ಆಯ್ಕೆ ಮಾಡಲಾಗುವ ಅಭ್ಯರ್ಥಿಗಳು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವ್ಯಾಪಾರ ಮೇಳಗಳಲ್ಲಿ ಪ್ರಾಯೋಜಿತ ಭಾಗವಹಿಸುವಿಕೆಗಾಗಿ ಆದ್ಯತೆಯನ್ನು ಪಡೆಯುತ್ತಾರೆ.

5.6.4.3 ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾರಾಟಕ್ಕಾಗಿ ಎಂಎಸ್‌ಎಂಇಗಳ ಸ್ಪರ್ಧಾತ್ಮಕ ಮಟ್ಟವನ್ನು ಸುಧಾರಿಸಲು ರಾಜ್ಯ ಸರ್ಕಾರವು ಅಂತರರಾಷ್ಟ್ರೀಯ ವ್ಯಾಪಾರ ಮೇಳಗಳು/ಪ್ರದರ್ಶನಗಳಲ್ಲಿ ಭಾಗವಹಿಸುವಿಕೆಗಾಗಿ ನೆರವು ನೀಡುವುದನ್ನು ಮುಂದುವರೆಸುತ್ತದೆ.

5.6.4.4 ಜಾಗತಿಕವಾಗಿ ಹೊಸ ಮಾರುಕಟ್ಟೆಗಳ ಬಗ್ಗೆ ಅರಿತುಕೊಂಡು, ಪಾದಾರ್ಪಣೆ ಮಾಡಲು ಎಂಎಸ್‌ಎಂಇಗಳಿಗೆ ಮಾರಾಟ ಸಂಶೋಧನಾ ಅಧ್ಯಯನಗಳು, ಸ್ಪರ್ಧಾತ್ಮಕ ವಿಶ್ಲೇಷಣಾ ಅಧ್ಯಯನಗಳು ಮುಂತಾದವುಗಳ ಬೆಂಬಲವನ್ನು ಒದಗಿಸಲಾಗುವುದು.

5.6.4.5 ವರ್ಚುಯಲ್ ಮತ್ತು ವಾಸ್ತವಿಕ ಪ್ರದರ್ಶನಾ ಕೇಂದ್ರಗಳನ್ನು ಸ್ಥಾಪಿಸುವ ಮೂಲಕ ಎಂಎಸ್‌ಎಂಇಗಳಿಗೆ ಮಾರುಕಟ್ಟೆ ಅಭಿವೃದ್ಧಿಯ ಬಗ್ಗೆ ನೆರವು ನೀಡಲಾಗುವುದು. ಏಕರೂಪದ ಬ್ರಾಂಡಿಂಗ್ ಮತ್ತು ಪ್ರೋತ್ಸಾಹಕವನ್ನು ಸಹ ಉತ್ತೇಜಿಸಲಾಗುವುದು.

5.6.4.6 ಅತಿಸಣ್ಣ ಮತ್ತು ಸಣ್ಣ ಸಂಸ್ಥೆಗಳಿಗೆ ವಿಳಂಬವಾದ ಪಾವತಿಗಳನ್ನು ಕುರಿತ ವಿವಾದಗಳನ್ನು ಬಗೆಹರಿಸಲು ರಾಜ್ಯ ಸರ್ಕಾರವು ಕೈಗಾರಿಕಾಭಿವೃದ್ಧಿ ಆಯುಕ್ತರು ಮತ್ತು ಕೈಗಾರಿಕೆಗಳು ಹಾಗೂ ವಾಣಿಜ್ಯ ಇಲಾಖೆಯ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಎಂಎಸ್‌ಎಂಇ ಅಭಿವೃದ್ಧಿ ಕಾಯ್ದೆ 2006 ರೀತ್ಯ ಈಗಾಗಲೇ ಅತಿಸಣ್ಣ ಮತ್ತು ಸಣ್ಣ ಸಂಸ್ಥೆಗಳ ಫೆಸಿಲಿಟೇಶನ್ ಕೌನ್ಸಿಲ್ ಅನ್ನು ರಚಿಸಿದೆ.

5.6.4.7 ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆಯು ಸಂಬಂಧಪಟ್ಟ ಕಂದಾಯ ವಿಭಾಗದ ವ್ಯಾಪ್ತಿಯಡಿ ಆಯಾ ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗಾದಲ್ಲಿ ಪ್ರಾದೇಶಿಕ ಅತಿಸಣ್ಣ ಮತ್ತು ಸಣ್ಣ ಸಂಸ್ಥೆಗಳ ಫೆಸಿಲಿಟೇಶನ್ ಕೌನ್ಸಿಲ್‌ನ್ನು ರಚಿಸುತ್ತದೆ. ಆದರೆ ಬೆಂಗಳೂರು ವಲಯಕ್ಕಾಗಿ ಈ ಮಂಡಳಿಯು ಕೈಗಾರಿಕಾಭಿವೃದ್ಧಿ ಆಯುಕ್ತರು ಮತ್ತು ಕೈಗಾರಿಕೆಗಳು ಹಾಗೂ ವಾಣಿಜ್ಯ ಇಲಾಖೆಯ ನಿರ್ದೇಶಕರ ಅಧ್ಯಕ್ಷತೆಯಡಿ ತನ್ನ ಕಾರ್ಯವನ್ನು ಮುಂದುವರಸುತ್ತದೆ. ಅತಿ ಸಣ್ಣ ಮತ್ತು ಸಣ್ಣ ಸಂಸ್ಥೆಗಳಿಗೆ ವಿಳಂಬಗೊಂಡ ಪಾವತಿಗಳಿಗೆ ಸಂಬಂಧಪಟ್ಟ ಕುಂದುಕೊರತೆಗಳನ್ನು ಸ್ವೀಕರಿಸಲು ಮತ್ತು ಅವುಗಳ ಮೇಲೆ ನಿಗಾ ಇಡಲು ಒಂದು ಆನ್‌ಲೈನ್ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಗುವುದು.

5.6.4.8 ಸರ್ಕಾರಿ ಇಲಾಖೆಗಳು ಮತ್ತು ರಾಜ್ಯ ಸ್ವಾಧೀನದ ಪಿಎಸ್‌ಯುಗಳ ಖರೀದಿಯ ಅವಧಿಯಲ್ಲಿ ರಾಜ್ಯದ ದೊಡ್ಡ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಇತರ ರಾಜ್ಯಗಳ ಕೈಗಾರಿಕೆಗಳಿಗೆ ಪ್ರತಿಯಾಗಿ ರಾಜ್ಯದ ಅತಿಸಣ್ಣ ಮತ್ತು ಸಣ್ಣ ಉದ್ಯಮಗಳು ತಯಾರಿಸುವ ಸರಕುಗಳಿಗೆ 15% ರಷ್ಟು ಬೆಲೆ ಆದ್ಯತೆಯನ್ನು ಅನುಮತಿಸಲಾಗುವುದು.

5.6.4.9 ಭಾರತ ಸರ್ಕಾರದ ಎಂ.ಎಸ್.ಎಂ.ಇ ಸಚಿವಾಲಯದ ಆದೇಶ ಎಸ್.ಒ 581 (ಇ) ದಿ.23.3.2012ರ ಪ್ರಕಾರ ಸರ್ಕಾರಿ ಇಲಾಖೆಗಳು ಮತ್ತು ಸರ್ಕಾರೀ ಸ್ವಾಮ್ಯದ ಪಿ.ಎಸ್.ಯು.ಗಳು ಅತೀ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳಿಂದ ಮಾತ್ರ ಖರೀದಿ ಮಾಡ ಬೇಕೆಂದು ನಿಗದಿಪಡಿಸಿರುವ 358 ವಸ್ತುಗಳನ್ನು ಇಂತಹ ಸಂಸ್ಥೆಗಳು ಅತೀ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳಿಂದ ಖರೀದಿಸಿ ಕೈಗಾರಿಕೆಗಳ ವ್ಯಾಪಕ ಪ್ರಸರಣ, ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸಾಧ್ಯವಾಗುವಂತೆ ಮಾಡಲಿದೆ.

5.6.4.10 ಕರ್ನಾಟಕ ಕೈಗಾರಿಕೆಗಳಿಗೆ ಉತ್ತೇಜನ ನೀಡಲು ಬೆಲೆಯನ್ನು ಮೌಲ್ಯ ಮಾಪನ ಮಾಡುವ ವಿಚಾರದಲ್ಲಿ ಕೆ.ಟಿ.ಟಿ.ಪಿ. ನಿಯಮಗಳಲ್ಲಿ ಈ ಕೆಳಗಿನಂತೆ ತಿದ್ದುಪಡಿ ತರಲಾಗುವುದು:

> *ಟೆಂಡರ್ ಪ್ರಕ್ರಿಯೆಯಲ್ಲಿ ಕರ್ನಾಟಕ ರಾಜ್ಯದ ಹಾಗೂ ಹೊರ ರಾಜ್ಯಗಳ ಟೆಂಡರುಗಳು ಬಂದಾಗ, ಮಾರಾಟ ತೆರಿಗೆ / ವ್ಯಾಟ್‌ಗಳನ್ನು ಟೆಂಡರ್ ಬೆಲೆಯಲ್ಲಿ ಹೊರತು ಪಡಿಸಿ, ಮೌಲ್ಯ ಮಾಪನ ಮಾಡತಕ್ಕದ್ದು.*

5.6.4.11 ವ್ಯವಹಾರದ ಖರ್ಚು ವೆಚ್ಚಗಳನ್ನು ಕಡಿತಗೊಳಿಸುವ ಉದ್ದೇಶದಿಂದ ಎನ್.ಎಸ್.ಐ.ಸಿ.ಯ ಸಿಂಗಲ್ ಪ್ಲಾಂಟ್ ಟೆಂಡರ್ ರಿಜಿಸ್ಟ್ರೇಶನ್ ಯೋಜನೆಯಲ್ಲಿ ನೋಂದಾಯಿತ ಅತೀ ಸಣ್ಣ ಮತ್ತು ಸಣ್ಣ ಸಂಸ್ಥೆಗಳಿಗೆ ಸರ್ಕಾರಿ ಇಲಾಖೆ ಮತ್ತು ರಾಜ್ಯ ಸರ್ಕಾರದ ಸ್ವಾಮ್ಯದ ಪಿ.ಎಸ್.ಯುಗಳು ಖರೀದಿಸುವ ಸಂರ್ಭದಲ್ಲಿ ಟೆಂಡರ್ ದಾಖಲೆಗಳನ್ನು ಉಚಿತವಾಗಿ ನೀಡುವುದು ಹಾಗೂ ಇ.ಎಂ.ಡಿ. ಪಾವತಿಯಿಂದ ವಿನಾಯ್ತಿ ನೀಡಲಾಗುವುದು.

**5.6.5 ಎಂಎಸ್‌ಎಂಇಗಳಿಗಾಗಿ ಕಾರ್ಯವಿಧಾನ ಸುಧಾರಣೆಗಳು**

5.6.5.1 ರಾಜ್ಯವು ವಿವಿಧ ಸಂಬಂಧಪಟ್ಟ ಇಲಾಖೆಗಳು ಎಂಎಸ್‌ಎಂಇಗಳನ್ನು ತಪಾಸಣೆಗೆ ಒಳಪಡಿಸುವುದನ್ನು ಕಡಿಮೆಯಾಗಿಸಿ, ಸ್ವ-ಪ್ರಮಾಣೀಕರಣಕ್ಕೆ ಒತ್ತು ಕೊಡುವ ಒಂದು ವ್ಯವಸ್ಥೆಯನ್ನು ರೂಪಿಸಲಿದೆ.

5.6.5.2 ವಿವಿಧ ಕಾರ್ಮಿಕ ಕಾನೂನುಗಳಡಿ ಸಲ್ಲಿಸಬೇಕಾದ ರಿಟರ್ನ್‌ಗಳ ಕ್ರಮವಿಧಾನವನ್ನು ಕಾರ್ಮಿಕ ಇಲಾಖೆಯೊಂದಿಗೆ ಚರ್ಚಿಸಿ, ಸರಳ ಗೊಳಿಸಲಾಗುವುದು ಮತ್ತು ಎಂಎಸ್‌ಎಂಇಗಳು ನಿಗದಿತ ಸ್ವರೂಪದಲ್ಲಿ ಸಂಚಿತ ವಾರ್ಷಿಕ ವರದಿಯನ್ನು ಸಲ್ಲಿಸಬಹುದಾಗಿದೆ.

5.6.5.3 ಹಸಿರು ವರ್ಗಕ್ಕೆ ಒಳಪಟ್ಟು ಪ್ರದೂಷಣೆ ಉಂಟು ಮಾಡುವ ಕೈಗಾರಿಕೆಗಳ ಪಟ್ಟಿಗೆ ಒಳಪಡದಂತಹ ಎಲ್ಲಾ ಎಂಎಸ್‌ಎಂಇಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿ (ಕೆಎಸ್‌ಪಿಸಿಬಿ) ದಿಂದ ಸಿಎಫ್‌ಇ/ಸಿಎಫ್‌ಒ ಪಡೆಯುವುದನ್ನು ಮನ್ನಾ ಮಾಡುವ ಸಾಧ್ಯತೆ, ಸರ್ಕಾರದ ಪರಿಶೀಲನೆಯಲ್ಲಿದೆ.

5.6.5.4 ಡಿಎಲ್‌ಎಸ್‌ಡಬ್ಲ್ಯೂಸಿಸಿ ಯಿಂದ ಅನುಮೋದಿತವಾಗಿ ಎಂಎಸ್‌ಎಂಇ ಯೋಜನೆಗಳಿಗೆ ಅಗತ್ಯವಾಗುವ ಎಲ್ಲಾ ನಿಯಂತ್ರಣಾ ಅನುಮೋದನೆಗಳು-ಅನುಮತಿಗಳನ್ನು ಒಂದು ನಿಗದಿತ ಕಾಲಮಿತಿಯೊಳಗೆ ಒದಗಿಸಲಾಗುವುದು. ಜಿಲ್ಲಾ ಕೈಗಾರಿಕಾ ಕೇಂದ್ರವು ಇದಕ್ಕಾಗಿ ಸಂಬಂಧಪಟ್ಟ ಇಲಾಖೆಯೊಂದಿಗೆ ಸಹಕರಿಸಲಿದೆ.

**5.6.6 ವ್ಯಾಲ್ಯು ಚೈನ್ ಕ್ಲಸ್ಟರ್ ಡೆವೆಲಪ್‌ಮೆಂಟ್**

5.6.6.1 ಭಾರತ ಸರ್ಕಾರದ ಅತಿಸಣ್ಣ ಮತ್ತು ಸಣ್ಣ ಸಮೂಹ ಅಭಿವೃದ್ಧಿ ಕಾರ್ಯಕ್ರಮಗಳಡಿ ಸಿಗುವ ಪ್ರಯೋಜನಗಳನ್ನು ಎಂಎಸ್‌ಎಂಇ ಸಮೂಹ ಅಭಿವೃದ್ಧಿಗಾಗಿ ಒದಗಿಸಲಾಗುವುದು. ತಂತ್ರಜ್ಞಾನ ಸುಧಾರಣೆ, ಕುಶಲತೆ ಮತ್ತು ಗುಣಮಟ್ಟ, ಮಾರುಕಟ್ಟೆ ಪ್ರವೇಶಾತಿ, ಬಂಡವಾಳ ಲಭ್ಯತೆ ಮುಂತಾದ ಸಾಮಾನ್ಯ ವಿಷಯಗಳನ್ನು ಉದ್ದೇಶಿಸುವ ಮೂಲಕ ಎಂಎಸ್‌ಎಂಇಗಳ ಸತತ ಬೆಳವಣಿಗೆಯನ್ನು ಬೆಂಬಲಿಸುವುದು ಈ ಸ್ಕೀಂನ ಧ್ಯೇಯವಾಗಿದೆ. ಇದು ಎಂಎಸ್‌ಇಗಳಿಗಾಗಿ ಸಾಮರ್ಥ್ಯವನ್ನು ನಿರ್ಮಿಸುವುದು, ಎಂಎಸ್‌ಇಗಳ ಕೈಗಾರಿಕಾ ಪ್ರದೇಶಗಳು-ಸಮೂಹಗಳಲ್ಲಿ ಮೂಲಸೌಲಭ್ಯವನ್ನು ನವೀಕರಿಸುವುದು ಹಾಗೂ ಸಾಮಾನ್ಯ ಅನುಕೂಲ ಕೇಂದ್ರಗಳನ್ನು ಸ್ಥಾಪಿಸುವ ಗುರಿಯನ್ನು ಸಹ ಹೊಂದಿದೆ.

5.6.6.2 ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಸಂಸ್ಥೆಗಳ ಖಾತೆ ಹೂಡಿರುವ ಅತಿಸಣ್ಣ ಮತ್ತು ಸಣ್ಣ ಸಂಸ್ಥೆಗಳ ಸಮೂಹ ಅಭಿವೃದ್ಧಿ ಕಾರ್ಯಕ್ರಮಕ್ಕಾಗಿ , ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್ತು (ಕೆಸಿಟಿಯು) ರಾಜ್ಯ ಸರ್ಕಾರದ ಪರವಾಗಿ ಮೇಲ್ವಿಚಾರಣ/ಕೇಂದ್ರ ಏಜೆನ್ಸಿಯಾಗಿ ಕೆಲಸ ಮಾಡುವುದನ್ನು ಮುಂದುವರೆಸುತ್ತದೆ.

5.6.6.3 ಕೈಗಾರಿಕಾ ನೀತಿ ಅವಧಿಯಲ್ಲಿ ಪ್ರತಿ ವರ್ಷಕ್ಕೆ 20 ಸಮೂಹಗಳ ಪ್ರಕಾರ ವಿವಿಧ ವಲಯಗಳಲ್ಲಿ ಕನಿಷ್ಟ 100 ಸಮೂಹಗಳನ್ನು ಸ್ಥಾಪಿಸಲಾಗುವುದು.

5.6.6.4 ರಾಜ್ಯದಲ್ಲಿ ಸಮೂಹಗಳ ಸ್ಥಾಪನೆಯನ್ನು ಉತ್ತೇಜಿಸಿ ಬೆಂಬಲಿಸಲು, ಸಲಹೆ ನೀಡಲು, ಮಾರ್ಗದರ್ಶನ ನೀಡಲು ಮತ್ತು ಬೆಂಬಲಿಸಲು ಪ್ರೋಗ್ರಾಂ ಮ್ಯಾನೇಜರ್ (ಪಿಎಂ) ಮುಂತಾದ ನಿಪುಣ ಸಂಸ್ಥೆಗಳನ್ನು ಸಮೂಹ ಸಂಘಗಳಿಗೆ ಒದಗಿಸಿ ಅವುಗಳ ಸಾಮರ್ಥ್ಯವನ್ನು ಹೆಚ್ಚಿಸಲು ಉದ್ದೇಶಿಸಲಾಗಿದೆ.

5.6.6.5 ಪಿಎಂ, ಮೂಲವ್ಯವಸ್ಥೆ ಅಭಿವೃದ್ಧಿ, ಹಣಕಾಸು ಸೇವೆಗಳು, ಸಮೂಹ ಸಾಮರ್ಥ್ಯ ರಚನೆಯಲ್ಲಿ ಅಖಿಲ ಭಾರತ ಮಟ್ಟದ ಅನುಭವದ ಮೂಲಕ ಹಾಗೂ ಭಾರತ ಸರ್ಕಾರದ ಇದೇ ರೀತಿಯ ಸ್ಕೀಂಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಗಳಿಸಿರುವ ಅನುಭವದಿಂದಾಗಿ ವ್ಯಾಪಕವಾದ ಪರಿಣತಿ ಪಡೆದಿರುವ ಸಂಸ್ಥೆಯಾಗಿರುತ್ತದೆ.

5.6.6.6 ಪಿಎಂ ಜವಾಬ್ದಾರಿಯಲ್ಲಿ ಕೆಳಗಿನ ಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ನೀತಿ ರೂಪಿಸುವವರು ಮತ್ತು ಕೈಗಾರಿಕಾ ಸಹ ಭಾಗಿಗಳ ನಡುವೆ ಒಂದು ಉತ್ತೇಜಕವಾಗಿ ಕೆಲಸ ನಿರ್ವಹಿಸುವುದು ಮತ್ತು ಸ್ಕೀಂ ಅನ್ನು ಕಾರ್ಯಗತಗೊಳಿಸಲು ಕ್ರಮವಿಧಾನವನ್ನು ರೂಪಿಸುವತ್ತ ರಾಜ್ಯ ಸರ್ಕಾರಕ್ಕೆ ನೆರವಾಗುವುದು ಸೇರಿರುತ್ತದೆ.

- *ಯೋಜನೆಯನು ಗುರುತಿಸುವಿಕೆ*
- *ಪ್ರಯೋಜನಗಳನ್ನು ಗರಿಷ್ಠಗೊಳಿಸುವಂತಹ ಯೋಜನಾ ರಚನೆ*
- *ಹಣಕಾಸು ಮತ್ತು ಇತರ ಸಾಮಾಜಿಕ ಅಗತ್ಯಗಳಿಗಾಗಿ ಯೋಜನಾ ಪರಿಶೀಲನೆ*
- *ಸಂಬಂಧಪಟ್ಟ ವಿಭಿನ್ನ ಸಂಸ್ಥೆಗಳೊಂದಿಗೆ ಸಾಂಸ್ಥಿಕವಾಗಿ ಸಮನ್ವಯ*
- *ಯೋಜನಾ ಅನುಷ್ಠಾನ ಮತ್ತು ಮೇಲ್ವಿಚಾರಣೆ*
- *ಅಗತ್ಯಕ್ಕೆ ತಕ್ಕಂತೆ ಇತರ ಬೆಂಬಲ*

5.6.6.7 ಕೆಸಿಟಿಯು, ಪ್ರತಿ ಸಮೂಹ-ವಲಯದಲ್ಲಿ ಕಾರ್ಯಯೋಜನೆಗಳನ್ನು ಸಿದ್ಧಪಡಿಸಿ ಪ್ರೋಗ್ರಾಂ ಮ್ಯಾನೇಜರ್‌ಗಳ ಮೂಲಕ ವಲಯಕ್ಕೆ ಅಗತ್ಯವಾಗುವ ಪರಿಸರ ವ್ಯವಸ್ಥೆಗಳನ್ನು ಉತ್ತೇಜಿಸುವಲ್ಲಿ ಸಮೂಹಗಳೊಂದಿಗೆ ಕೆಲಸ ಮಾಡುತ್ತದೆ.

### 5.6.7 ಭಾರತ ಸರ್ಕಾರದ ಸ್ಕೀಂಗಳ ಸಮನ್ವಯ

ಎಂಎಸ್‌ಎಂಇಗಳ ಪ್ರಯೋಜನಕ್ಕಾಗಿ ಭಾರತ ಸರ್ಕಾರದ ಕ್ರೆಡಿಟ್ ಗ್ಯಾರಂಟಿ ಫಂಡ್ ಟ್ರಸ್ಟ್ ಸ್ಕೀಂ, ಕ್ರೆಡಿಟ್ ಲಿಂಕ್ಡ್ ಕ್ಯಾಪಿಟಲ್ ಸಬ್ಸಿಡಿ ಸ್ಕೀಂ ಫಾರ್ ಟೆಕ್ನಾಲಜಿ ಅಪ್‌ಗ್ರೇಡೇಷನ್, ನ್ಯಾಷನಲ್ ಮ್ಯಾನುಫ್ಯಾಕ್ಚರಿಂಗ್ ಕಾಂಪಿಟಿಟಿವ್‌ನೆಸ್ ಪ್ರೋಗ್ರಾಂ, ಮಾರ್ಕೆಟಿಂಗ್ ಅಸಿಸ್ಟೆನ್ಸ್ ಸ್ಕೀಂ, ಲೀನ್ ಮ್ಯಾನುಫ್ಯಾಕ್ಚರಿಂಗ್ ಸ್ಕೀಂ ಹಾಗೂ ಎಂಎಸ್‌ಎಂಇ ಖಾತೆಯ ಮತ್ತು ಇತರ ಖಾತೆಗಳ ವಿಭಿನ್ನ ಪ್ರೋತ್ಸಾಹ ಸ್ಕೀಂಗಳನ್ನು ಸೂಕ್ತವಾಗಿ ಸಮನ್ವಯಗೊಳಿಸಲಾಗುವುದು. ಇವುಗಳ ಬಗ್ಗೆ ಜಾಗೃತಿ ಒದಗಿಸಿ ಭಾರತ ಸರ್ಕಾರದ ಸ್ಕೀಂಗಳು/ಕಾರ್ಯಕ್ರಮಗಳ ಅನುಷ್ಠಾನವನ್ನು ಸಂಘಟಿಸಿ ನಿಗಾ ಇಡಲು ಕೈಗಾರಿಕೆಗಳು ಮತ್ತು ವಾಣಿಜ್ಯ ಇಲಾಖೆಯ ಹೆಚ್ಚುವರಿ ನಿರ್ದೇಶಕರ (ಎಂಎಸ್‌ಎಂಇ) ಅಧ್ಯಕ್ಷತೆಯಲ್ಲಿ ಒಂದು ಪ್ರತ್ಯೇಕ ಕೋಶವನ್ನು ರಚಿಸಲಾಗುವುದು.

### 5.6.8 ಎಂಎಸ್‌ಎಂಇಗಳ ಅಭಿವೃದ್ಧಿಗಾಗಿ ಚಾಲ್ತಿಯಲ್ಲಿರುವ ಬೆಂಬಲಾತ್ಮಕ ಸ್ಕೀಂಗಳು-ಕಾರ್ಯಕ್ರಮಗಳು

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು ಎಂಎಸ್‌ಎಂಇಗಳ ಬೆಳವಣಿಗೆಗಾಗಿ ಈ ಕೆಳಗಿನ ಮುಖ್ಯ ಯೋಜನೆಗಳನ್ನು ಜಾರಿಗೊಳಿಸುತ್ತಿದೆ ಮತ್ತು ಇವನ್ನು ನೀತಿಯ ಅವಧಿಯಲ್ಲಿ ಮುಂದುವರೆಸುತ್ತದೆ.

- ಸಣ್ಣ ಮತ್ತು ಮಧ್ಯಮ ಸಂಸ್ಥೆಗಳಿಗಾಗಿ ವೆಂಚರ್ ಕ್ಯಾಪಿಟಲ್ ಫಂಡ್
- ಕೈಗಾರಿಕಾ ವಿಕಾಸ ಯೋಜನೆ
- ಪರಿಷ್ಕೃತ ಮಾರ್ಗದರ್ಶನಗಳೊಂದಿಗೆ ಸುವರ್ಣ ಕಾಯಕ ಕೌಶಲ್ಯ ಅಭಿವೃದ್ಧಿ ಯೋಜನೆ
- ಎಸ್‌ಸಿ/ಎಸ್‌ಟಿ ಕುಶಲಕರ್ಮಿಗಳಿಗೆ ವಾಸ ಮತ್ತು ಕೆಲಸದ ಶೆಡ್‌ಗಳು ಹಾಗೂ ಸುಧಾರಿತ ಉಪಕರಣಗಳ ಕಿಟ್‌ಗಳು
- ಆಧುನೀಕರಣ/ತಂತ್ರಜ್ಞಾನ/ತರಬೇತಿ ಕಾರ್ಯಕ್ರಮಗಳು
- ಕರಕುಶಲ ಗುರುಕುಲ ತರಬೇತಿ ಸಂಸ್ಥೆ
- ವಿಶಿಷ್ಟ ಕುಶಲತೆ ಅಭಿವೃದ್ಧಿಯ ಸಂಸ್ಥೆಗಳು

### 5.6.9 ಖಾದಿ, ಕುಶಲ ಕಲೆ ಮತ್ತು ತೆಂಗಿನ ನಾರು ವಲಯಗಳನ್ನು ಉತ್ತೇಜಿಸಲು ಬೆಂಬಲ

5.6.9.1 ಖಾದಿ, ಕುಶಲ ಕಲೆ ಮತ್ತು ತೆಂಗಿನ ನಾರು ವಲಯಗಳನ್ನು ಈಗಾಗಲೇ ಜಾರಿಯಲ್ಲಿರುವ ಸ್ಕೀಂಗಳ ಮೂಲಕ ಬೆಂಬಲಿಸುವುದನ್ನು ಮುಂದುವರೆಸಲಾಗುತ್ತದೆ

5.6.9.2 ಭಾರತ ಸರ್ಕಾರದ ಸ್ಕೀಂಗಳಿಂದ (ಪ್ರಧಾನ ಮಂತ್ರಿಯವರ ಉದ್ಯೋಗ ಸೃಜನೆ ಕಾರ್ಯಕ್ರಮ, ಗ್ರಾಮೀಣ ಕೈಗಾರಿಕಾ ಸೇವಾ ಕೇಂದ್ರ, ರಫ್ತು ಪ್ರೋತ್ಸಾಹಕ ಸ್ಕೀಂ, ಬಡ್ಡಿ ಸಬ್ಸಿಡಿ ಸ್ಕೀಂ ಮುಂತಾದವು) ಲಭ್ಯವಿರುವ ನೆರವುಗಳನ್ನು ಸಹ ಬಳಸಲಾಗುವುದು.

5.6.9.3 ಕೆಳಗಿನ ಪ್ರಯೋಜನಗಳನ್ನು ಸಹ ವಿಸ್ತರಿಸಲಾಗುವುದು

5.6.9.3.1 ಮಾನ್ಯತೆ ಪಡೆದ ಸಾಮಾನ್ಯ ಅನುಕೂಲ ಕೇಂದ್ರಗಳಿಗಾಗಿ (ಸಿಎಫ್‌ಸಿಗಳು) ಪ್ರತಿ ಯೂನಿಟ್‌ಗೆ ರೂ.2/-ರಂತೆ ವಿದ್ಯುತ್ ಸಬ್ಸಿಡಿ.

5.6.9.3.2 ಖಾದಿ ಕೆಲಸಗಾರರಿಗಾಗಿ ವೇತನ ಬೆಂಬಲವು ಚಾಲ್ತಿ ಸ್ಕೀಂನ ಪ್ರಕಾರ ಮುಂದುವರೆಯುತ್ತದೆ.

5.6.9.3.3 ತೆಂಗಿನನಾರು ಉದ್ಯಮಕ್ಕಾಗಿ ಕೈಗಾರಿಕಾ ನೀತಿಯಲ್ಲಿ ಈಗಾಗಲೇ ನಿಗದಿಪಡಿಸಲಾಗಿರುವುದನ್ನು ಹೊರತಾಗಿ ಅವಧಿ ಸಾಲ ಮತ್ತು ಕಾರ್ಯೋಪಯೋಗಿ ಬಂಡವಾಳದ ಮೇಲೆ ಹೆಚ್ಚುವರಿಯಾಗಿ 3% ಬಡ್ಡಿ ಸಬ್ಸಿಡಿ : ಇದು ಖಾದಿ ಮತ್ತು ಕುಶಲಕರ್ಮ ವಲಯಗಳ ಇನ್ನುಳಿದ ಘಟಕಗಳಿಗೂ ಅನ್ವಯಿಸುತ್ತದೆ.

**5.6.10 ಸಾಮಾನ್ಯ ವರ್ಗದ ಉದ್ಯಮಶೀಲರು ಹಮ್ಮಿಕೊಳ್ಳುವ ಎಂಎಸ್‌ಎಂಇಗಳಿಗಾಗಿ ಪ್ರೋತ್ಸಾಹಕಗಳು ಮತ್ತು ವಿನಾಯಿತಿಗಳು**

ಎಂಎಸ್‌ಎಂಇಗಳಿಗಾಗಿ ನೀಡಲಾಗುವ ಪ್ರೋತ್ಸಾಹಗಳು ಮತ್ತು ರಿಯಾಯಿತಿ ವಿವರಗಳು ಕೆಳಕಂಡಂತಿವೆ:

ಎ) ಬಂಡವಾಳ ಉತ್ತೇಜನ ಸಬ್ಸಿಡಿ

ಅ) ಅತಿ ಸಣ್ಣ ಕೈಗಾರಿಕೆಗಳು

*1) ಹೈದರಾಬಾದ್-ಕರ್ನಾಟಕಯೇತರ ಪ್ರದೇಶ*

ವಲಯ-1 : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ 25% (ಗರಿಷ್ಠ ರೂ.15.00 ಲಕ್ಷ)
ವಲಯ-2 : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ 20% (ಗರಿಷ್ಠ ರೂ.12.00 ಲಕ್ಷ)
ವಲಯ-3 : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ 15% (ಗರಿಷ್ಠ ರೂ. 9.00 ಲಕ್ಷ)
ವಲಯ-4 : ಇಲ್ಲ

*2) ಹೈದರಾಬಾದ್ - ಕರ್ನಾಟಕ ಪ್ರದೇಶ*

ಹೆಚ್‌ಕೆ ವಲಯ-1 : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ 30% (ಗರಿಷ್ಠ ರೂ.18.00 ಲಕ್ಷ)
ಹೆಚ್‌ಕೆ ವಲಯ-2 : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ 25% (ಗರಿಷ್ಠ ರೂ.15.00 ಲಕ್ಷ)

ಆ) ಸಣ್ಣ ಉದ್ಯಮಗಳು

1) ಹೈದರಾಬಾದ್-ಕರ್ನಾಟಕಯೇತರ ಪ್ರದೇಶ

ವಲಯ-1 : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ 20% (ಗರಿಷ್ಠ ರೂ.40.00 ಲಕ್ಷ)
ವಲಯ-2 : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ 15% (ಗರಿಷ್ಠ ರೂ.30.00 ಲಕ್ಷ)
ವಲಯ-3 : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ 10% (ಗರಿಷ್ಠ ರೂ.20.00 ಲಕ್ಷ)
ವಲಯ-4 : ಇಲ್ಲ

2) ಹೈದರಾಬಾದ್ - ಕರ್ನಾಟಕ ಪ್ರದೇಶ

ಹೆಚ್‌ಕೆ ವಲಯ-1 : ಸ್ಥಿರಾಸ್ತಿಗಳ ಮೌಲ್ಯದ ಶೇ 25% (ವಿಎಫ್‌ಎ) (ಗರಿಷ್ಠ ರೂ.45.00 ಲಕ್ಷ)
ಹೆಚ್‌ಕೆ ವಲಯ-2 : ಸ್ಥಿರಾಸ್ತಿಗಳ ಮೌಲ್ಯದ ಶೇ 20% (ವಿಎಫ್‌ಎ) (ಗರಿಷ್ಠ ರೂ.40.00 ಲಕ್ಷ)

ಇ) ಮಧ್ಯಮ ವಲಯದ ಉತ್ಪಾದನಾ ಘಟಕಗಳು (ಎಮ್‌ಎಸ್‌ಎಮ್‌ಇ ಆಕ್ಟ್‌ನಲ್ಲಿ ದಲ್ಲಿ ವಿವರಿಸಿರುವಂತೆ ಹಾಗೂ ಕನಿಷ್ಠ 25 ನೇರ ಉದ್ಯೋಗಗಳನ್ನು ಒದಗಿಸುವ ಘಟಕಗಳು)

1) ಹೈದರಾಬಾದ್-ಕರ್ನಾಟಕ ಯೇತರ ಪ್ರದೇಶ

ವಲಯ-1 : ರೂ.50 ಲಕ್ಷ
ವಲಯ-2 : ರೂ.40 ಲಕ್ಷ
ವಲಯ-3 : ರೂ.30 ಲಕ್ಷ
ವಲಯ-4 : ಇಲ್ಲ

2) ಹೈದರಾಬಾದ್ -ಕರ್ನಾಟಕ ಪ್ರದೇಶ

ಹೆಚ್‌ಕೆ ವಲಯ-1 : ರೂ.55 ಲಕ್ಷ
ಹೆಚ್‌ಕೆ ವಲಯ-2 : ರೂ.50 ಲಕ್ಷ

ಬಿ) ಸ್ಟ್ಯಾಂಪ್ ಡ್ಯೂಟಿಯಿಂದ ವಿನಾಯಿತಿ

ಎಂಎಸ್‌ಎಂಇಗಳು:

ಆರಂಭಿಕ 5 ವರ್ಷಗಳಿಗಾಗಿ ಇಲಾಖೆಯಿಂದ ವ್ಯಾಟ್ ಲೋನ್ ಒಳಪಟ್ಟಂತೆ ಮತ್ತು/ಅಥವಾ ರಾಜ್ಯ ಹಣಕಾಸು ನಿಗಮ, ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮ, ರಾಷ್ಟ್ರೀಯ ಮಟ್ಟದ ಹಣಕಾಸು ಸಂಸ್ಥೆಗಳು, ವಾಣಿಜ್ಯ ಬ್ಯಾಂಕುಗಳು, ಆರ್‌ಆರ್‌ಬಿಗಳು, ಸಹಕಾರಿ ಬ್ಯಾಂಕುಗಳು, ಕೆವಿಐಬಿ/ಕೆವಿಐಸಿ, ಕರ್ನಾಟಕ ರಾಜ್ಯ ಎಸ್‌ಸಿ/ಎಸ್‌ಟಿ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ ಹಾಗೂ ಸರ್ಕಾರ ಸಮಯಾಸಮಯಕ್ಕೆ ಪ್ರಕಟಿಸುವ ಇತರ ಯಾವುದೇ ಸಂಸ್ಥೆಯಿಂದ ಸಾಲಗಳನ್ನು ಪಡೆಯಲು ಸಹಿ ಹಾಕಲಾದ ಸಾಲ ಒಪ್ಪಂದಗಳು, ಕ್ರೆಡಿಟ್ ಡೀಡ್‌ಗಳು, ಭೋಗ್ಯ ಮತ್ತು ಒತ್ತೆ ಕಾಗದ ಪತ್ರಗಳಿಗೆ ಸಂಬಂಧಪಟ್ಟಂತೆ ಹಾಗೂ (II) ಕೆಐಎಡಿಬಿ, ಕೆಎಸ್‌ಎಸ್‌ಐಡಿಸಿ, ಕಿಯೋನಿಕ್ಸ್, ಕೆಎಸ್‌ಐಐಡಿಸಿ, ಕೈಗಾರಿಕಾ ಸಹಕಾರಿಗಳು ಮತ್ತು ಅನುಮೋದಿತ ಖಾಸಗಿ ಕೈಗಾರಿಕಾ ನಿವೇಶನಗಳಿಂದ ಕೈಗಾರಿಕಾ ನಿವೇಶನಗಳು, ಶೆಡ್‌ಗಳು, ಕೈಗಾರಿಕಾ ವಸಾಹತುಗಳಿಗೆ ಸಂಬಂಧಪಟ್ಟಂತೆ ಕೈಗಾರಿಕಾ ಸಂಸ್ಥೆಗಳು ಸಹಿ ಹಾಕಿರುವ ಲೀಸ್ ಡೀಡ್‌ಗಳು, ಲೀಸ್ ಮತ್ತು ಮಾರಾಟ ಹಾಗೂ ಸಂಪೂರ್ಣ ಮಾರಾಟದ ಕಾಗದ ಪತ್ರಗಳಿಗೆ ಸಂಬಂಧಪಟ್ಟಂತೆ ಸ್ಟ್ಯಾಂಪ್ ಶುಲ್ಕವನ್ನು ಕೆಳಕಂಡಂತೆ ಮನ್ನಾ ಮಾಡಲಾಗಿದೆ.

**1) ಹೈದರಾಬಾದ್-ಕರ್ನಾಟಕ ಯೇತರ ಪ್ರದೇಶ**

ವಲಯ-1 : 100%
ವಲಯ-2 : 100%
ವಲಯ-3 : 75%
ವಲಯ-4 : ಇಲ್ಲ

**2) ಹೈದರಾಬಾದ್ -ಕರ್ನಾಟಕ ಪ್ರದೇಶ**

ಹೆಚ್‌ಕೆ ವಲಯ-1 : 100%
ಹೆಚ್‌ಕೆ ವಲಯ-2 : 100%

**ಸಿ) ನೋಂದಣಿ ಶುಲ್ಕದಲ್ಲಿ ರಿಯಾಯಿತಿ:**

ಎಂಎಸ್ ಎಂಇಗಳು:

ಮೇಲೆ 'ಬಿ' ಯಲ್ಲಿ ನಿರ್ದಿಷ್ಟಪಡಿಸಿರುವ ಎಲ್ಲಾ ಸಾಲ ದಸ್ತಾವೇಜುಗಳು, ಗುತ್ತಿಗೆ ಕಾಗದ ಪತ್ರಗಳು ಮತ್ತು ಮಾರಾಟ ಕಾಗದ ಪತ್ರಗಳಿಗಾಗಿ ನೋಂದಣಿ ಶುಲ್ಕ ಪ್ರತಿ ರೂ.1000/-ಕ್ಕಾಗಿ ರೂ.1/-ರ ರಿಯಾಯಿತಿ ದರದಲ್ಲಿರುತ್ತವೆ.

ಟಿಪ್ಪಣಿ:

*(I) ಸ್ಟ್ಯಾಂಪ್ ಶುಲ್ಕದ ವಿನಾಯಿತಿ ಹಾಗೂ ರಿಯಾಯಿತಿಯಲ್ಲಿ ನೋಂದಣಿ ಶುಲ್ಕಗಳು, ಕೆಎಲ್‌ಆರ್ ಕಾಯ್ದೆಯ ಸೆಕ್ಷನ್ 109 ಅಡಿ ಖರೀದಿಸಲಾದ ಭೂಮಿ ಹಾಗೂ ಎಸ್‌ಎಲ್‌ಎಸ್‌ಡಬ್ಲ್ಯೂಸಿಸಿ / ಡಿಎಲ್‌ಎಸ್‌ಡಬ್ಲ್ಯೂಸಿಸಿ ಅನುಮೋದಿಸಿದ ಯೋಜನೆಗಳಿಗಾಗಿ ಕೈಗಾರಿಕವಾಗಿ ಪರಿವರ್ತಿತ ಭೂಮಿಯ ನೇರ ಖರೀದಿಗಾಗಿ ಸಹ ಅನ್ವಯಿಸುತ್ತವೆ. ಈ ಪ್ರೋತ್ಸಾಹಕವು, ಸ್ವಾಧೀನಪಡಿಸಿಕೊಂಡ ಭೂಮಿಯ ಪರಿಹಾರವಾಗಿ ಕೆಐಎಡಿಬಿಯು, ಭೂಮಾಲೀಕರಿಗೆ ವರ್ಗಾಯಿಸುವ ಭೂಮಿಗೂ ಅನ್ವಯಿಸುತ್ತದೆ.*

(II) ಸ್ಟ್ಯಾಂಪ್ ಶುಲ್ಕದ ವಿನಾಯಿತಿ ಹಾಗೂ ರಿಯಾಯಿತಿಗಳು, ನೋಂದಣಿ ಶುಲ್ಕಗಳು, ಗುತ್ತಿಗೆ ಅವಧಿ ತೀರಿದ ನಂತರ ಭೂಮಿ, ಶೆಡ್‌ಗಳು, ಸೈಟ್‌ಗಳು, ಕೈಗಾರಿಕಾ ವಸಾಹತುಗಳಿಗೆ ಸಂಬಂಧಪಟ್ಟಂತೆ ಅಂತಿಮ ಮಾರಾಟ ಪತ್ರದ ನೋಂದಣಿಗೆ ಸಹ ಅನ್ವಯಿಸುತ್ತವೆ ಮತ್ತು ಈ ದರವು ಗುತ್ತಿಗೆ ಹಾಗೂ ಮಾರಾಟ ಪತ್ರಕ್ಕೆ ಸಹಿ ಹಾಕುವ ಸಮಯದಲ್ಲಿ ಜಾರಿಯಲ್ಲಿದ್ದ ಕೈಗಾರಿಕಾ ನೀತಿ ನಿರ್ದಿಷ್ಟಪಡಿಸಿರುವ ಪ್ರಮಾಣದಲ್ಲಿರುತ್ತದೆ.

**ಡಿ) ಭೂಪರಿವರ್ತನೆ ಶುಲ್ಕದ ಮರುಪಾವತಿ**

**ಎಂಎಸ್ ಎಂಇಗಳು:**

ಭೂಮಿಯನ್ನು ಕೃಷಿ ಬಳಕೆಯಿಂದ ಕೈಗಾರಿಕಾ ಬಳಕೆಗೆ ಪರಿವರ್ತಿಸಲು ಸೂಚಿತವಾಗಿರುವ ಭೂಪರಿವರ್ತನಾ ಶುಲ್ಕವನ್ನು ಕೆಳಗೆ ವಿವರಿಸಿರುವಂತೆ ಮರುಪಾವತಿಮಾಡಲಾಗುವುದು.

**1) ಹೈದರಾಬಾದ್-ಕರ್ನಾಟಕ ಯೇತರ ಪ್ರದೇಶ**

ವಲಯ-1 : 100%
ವಲಯ-2 : 100%
ವಲಯ-3 : 75%
ವಲಯ-4 : ಇಲ್ಲ

**2) ಹೈದರಾಬಾದ್ -ಕರ್ನಾಟಕ ಪ್ರದೇಶ**

ಹೆಚ್‌ಕೆ ವಲಯ-1 : 100%
ಹೆಚ್‌ಕೆ ವಲಯ-2 : 100%

**ಇ) ಪ್ರವೇಶ ತೆರಿಗೆಯಿಂದ ವಿನಾಯಿತಿ**

**ಎಂಎಸ್ ಎಂಇಗಳು:**

ವಲಯ-1, 2, 3 ಮತ್ತು ಹೆಚ್‌ಕೆ ವಲಯ-1 ಮತ್ತು 2, ಯೋಜನಾ ಅನುಷ್ಠಾನದ ಆರಂಭ ದಿನಾಂಕದಿಂದ 3 ವರ್ಷಗಳ ಪ್ರಾರಂಭಿಕ ಅವಧಿಗಾಗಿ "**ಸ್ಥಾವರ ಮತ್ತು ಯಂತ್ರೋಪಕರಣ ಮತ್ತು ಕ್ಯಾಪಿಟಲ್ ಗೂಡ್**" ಮೇಲೆ ಪ್ರವೇಶ ತೆರಿಗೆಯನ್ನು ಕಟ್ಟುವಲ್ಲಿ 100% ವಿನಾಯಿತಿಗೆ ಅರ್ಹವಾಗುತ್ತವೆ. ಈ ಉದ್ದೇಶಕ್ಕಾಗಿ ಸ್ಥಾವರ ಮತ್ತು ಯಂತ್ರೋಪಕರಣ ಮತ್ತು ಕ್ಯಾಪಿಟಲ್ ಗೂಡ್ಸ್ ಸಾಮಗ್ರಿಗಳನ್ನು ಕುರಿತ ಅರ್ಥ ವಿವರಣೆಯಲ್ಲಿ ಕ್ಯಾಪ್ಟಿವ್ ವಿದ್ಯುತ್ ಉತ್ಪಾದನೆಗೆ ಅಗತ್ಯವಾಗುವ ಯಂತ್ರೋಪಕರಣಗಳು ಇತ್ಯಾದಿ ಸಹ ಸೇರಿರುತ್ತವೆ.

ಕಚ್ಚಾ ಸಾಮಗ್ರಿಗಳು, ಉಪಕರಣಗಳು, ಬಿಡಿ ಭಾಗಗಳು ಮತ್ತು ಇತರ ಸಾಮಗ್ರಿಗಳು (ಪೆಟ್ರೋಲಿಯಂ ಉತ್ಪನ್ನಗಳನ್ನು ಹೊರತುಪಡಿಸಿ) (ಅನ್ವಯಿತವಾದೆಡೆ) ವಾಣಿಜ್ಯ ಉತ್ಪಾದನೆಯ ಆರಂಭ ದಿನಾಂಕದಿಂದ 5 ವರ್ಷಗಳ ಅವಧಿಗಾಗಿ.

**ಎಫ್) ತ್ಯಾಜ್ಯ ನೀರಿನ ಸಂಸ್ಕರಣಾ ಘಟಕವನ್ನು ಸ್ಥಾಪಿಸಲು ಸಬ್ಸಿಡಿ (ಇಟಿಪಿ)**

**ಉತ್ಪಾದನಾ ಎಂಎಸ್ಎಂಇಗಳು:**

ಹೆಚ್‌ಕೆ ವಲಯ-1 ಮತ್ತು 2ರಲ್ಲಿ ಹಾಗೂ ಹೆಚ್‌ಕೆಯೇತರ ವಲಯ 1, 2 ಮತ್ತು 3ರಲ್ಲಿ ರೂ.50 ಲಕ್ಷಗಳ ಪರಿಮಿತಿಗೆ ಒಳಪಟ್ಟಂತೆ ಹಾಗೂ ಹೆಚ್.ಕೆ. ಯೇತರ ವಲಯ 4ರಲ್ಲಿ ರೂ.25 ಲಕ್ಷಗಳ ಪರಿಮಿತಿಗೆ ಒಳಪಟ್ಟಂತೆ ಇಟಿಪಿ ವೆಚ್ಚದ ಶೇ.50ರವರೆಗೆ ಏಕಕಾಲದ ಬಂಡವಾಳ ಸಬ್ಸಿಡಿ:

**ಜಿ) ಬಡ್ಡಿ ಸಹಾಯಧನ**

ಅತಿಸಣ್ಣ ಮತ್ತು ಸಣ್ಣ ಸಂಸ್ಥೆಗಳಿಗೆ ನೀಡಲಾಗುವ ಅವಧಿ ಸಾಲಗಳ ಮೇಲೆ 5% ಬಡ್ಡಿ ಸಬ್ಸಿಡಿ. ಈ ಬಡಿ ಸಬ್ಸಿಡಿಯನ್ನು ಉದ್ಯಮವು ಅಸಲು ಅಥವಾ ಬಡ್ಡಿ ಕಂತುಗಳ ಪಾವತಿಯನು ತಪ್ಪದೇ ಕಟ್ಟಿದ್ದಲ್ಲಿ ಮಾತ್ರ, ಉದ್ಯಮದ ಪರವಾಗಿ ಹಣಕಾಸು ಸಂಸ್ಥೆಗೆ ಪಾವತಿ ಮಾಡಲಾಗುತ್ತದೆ. ಬಡ್ಡಿ ಸಹಾಯಧನವು ಪರಿಣಾಮಕಾರಿ ಬಡ್ಡಿ ದರವಾಗಿರುತ್ತದೆ. (ಬಡ್ಡಿ ಸಹಾಯಧನವನ್ನು ಕಳೆದ ನಂತರ) (ಯಾವುದೇ ಸಂಸ್ಥೆಯಿಂದ ಬರತಕ್ಕ/ಭಾರತ ಸರಕಾರದ ಯಾವುದೇ ಯೋಜನೆಯನ್ವಯ ಲಭಿಸುವ ಅಥವಾ ವಾರ್ಷಿಕ 5% : ಇದರಲ್ಲಿ ಯಾವುದು ಕಡಿಮೆಯೋ ಆ ಮೊತ್ತಕ್ಕೆ ಸಮ). ಬಡ್ಡಿ ಸಹಾಯಧನದ ಅವಧಿಯು ಹೆಚ್‌ಕೆಯೇತರ ವಲಯ-1, ವಲಯ-2 ಮತ್ತು ವಲಯ-3ಕ್ಕಾಗಿ ಅನುಕ್ರಮವಾಗಿ 6 ವರ್ಷಗಳು, 5 ವರ್ಷಗಳು ಮತ್ತು 4 ವರ್ಷಗಳಾಗಿರುತ್ತವೆ ಹಾಗೂ ಹೆಚ್‌ಕೆ ವಲಯ-1 ಮತ್ತು ವಲಯ-2ಕ್ಕಾಗಿ ಅನುಕ್ರಮವಾಗಿ 7 ವರ್ಷಗಳು ಮತ್ತು 6 ವರ್ಷಗಳಾಗಿರುತ್ತವೆ.

**ಹೆಚ್) ವಿದ್ಯುಚ್ಛಕ್ತಿ ದರಗಳ ಮೇಲಿನ ತೆರಿಗೆಯಿಂದ ವಿನಾಯಿತಿ**

**ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉತ್ಪಾದನಾ ಘಟಕಗಳಿಗೆ**

ವಲಯ-1, ವಲಯ-2, ವಲಯ-3 ಮತ್ತು ಹೆಚ್‌ಕೆ ವಲಯ-1 ಮತ್ತು ವಲಯ-2ಕ್ಕಾಗಿ ಅನುಕ್ರಮವಾಗಿ 6 ವರ್ಷಗಳು, 5 ವರ್ಷಗಳು, 4 ವರ್ಷಗಳು, 7 ವರ್ಷಗಳು ಮತ್ತು 6 ವರ್ಷಗಳ ಆರಂಭಿಕ ಅವಧಿಗಾಗಿ ವಿದ್ಯುತ್ ತೆರಿಗೆಯಿಂದ ಶೇ.100ರಷ್ಟು ವಿನಾಯಿತಿ.

**ಐ) ತಂತ್ರಜ್ಞಾನ ನವೀಕರಣ, ಗುಣಮಟ್ಟ ಪ್ರಮಾಣೀಕರಣ**

**ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉತ್ಪಾದನಾ ಕೈಗಾರಿಕೆಗಳು**

**1) ತಂತ್ರಜ್ಞಾನ ನವೀಕರಣ ಸಾಲದ ಮೇಲಿನ ಬಡ್ಡಿ ಸಹಾಯಧನ**

ವಲಯ-1, 2, 3 ಮತ್ತು ಹೆಚ್‌ಕೆ ವಲಯ-1, 2 : ಭಾರತ ಸರ್ಕಾರದ ಸಿಎಲ್‌ಸಿಎಸ್‌ಎಸ್‌ಗೆ ಒಳಪಡದೆ, ಕೆಎಸ್‌ಎಫ್‌ಸಿ ಹಾಗೂ ಶೆಡ್ಯೂಲ್ಡ್ ವಾಣಿಜ್ಯಕ ಬ್ಯಾಂಕುಗಳಿಂದ ಮೇಲೆ ಪಡೆದ ಸಾಲದ ಮೇಲೆ 5%.

**2) ಐಎಸ್‌ಒ ಸರಣಿಯ ಪ್ರಮಾಣೀಕರಣ ವೆಚ್ಚ:**

ವಲಯ 1, 2, 3 ಮತ್ತು ಹೆಚ್‌ಕೆ ವಲಯ 1,2: ವೆಚ್ಚದ 75%, (ಗರಿಷ್ಟ 75,000 ರೂ.ಗಳು)

**3) ಬಿಐಎಸ್ ಪ್ರಮಾಣ ಪತ್ರ:**

ಬಿಐಎಸ್‌ಗೆ ನೀಡಲಾದ ಶುಲ್ಕದ 50% (ಗರಿಷ್ಠ 20,000 ರೂಪಾಯಿಗಳು) ಮತ್ತು ಬಿಐಎಸ್‌ನಿಂದ ಅನುಮೋದಿತವಾದ ಪರೀಕ್ಷಣಾ ಉಪಕರಣಗಳ ಖರೀದಿ ವೆಚ್ಚದ 25% (ಗರಿಷ್ಠ 50,000 ರೂಗಳು).

4) ತಂತ್ರಜ್ಞಾನದ ಅಳವಡಿಕೆ

ಮಾನ್ಯತೆ ಪಡೆದ ರಾಷ್ಟ್ರೀಯ ಪ್ರಯೋಗಾಲಯಗಳ ತಂತ್ರಜ್ಞಾನ ಅಳವಡಿಕೆ ವೆಚ್ಚದ 25% (ಗರಿಷ್ಠ 50,000 ರೂಪಾಯಿಗಳು).

5) ಟೆಕ್ನಾಲಜಿ ಬಿಸಿನೆಸ್ ಇಂಕ್ಯುಬೇಷನ್ ಸೆಂಟರ್:

ವೆಚ್ಚದ 25% (ಗರಿಷ್ಠ 50 ಲಕ್ಷ ರೂಪಾಯಿಗಳು)

6) ಎಲೆಕ್ಟ್ರಾನಿಕ್ ತ್ಯಾಜ್ಯಗಳು ಮತ್ತು ಪ್ಲಾಸ್ಟಿಕ್ ತ್ಯಾಜ್ಯಗಳ ಪುನರ್ ಬಳಕೆ

ವಲಯ-1, 2, 3 ಮತ್ತು ಹೆಚ್‌ಕೆ ವಲಯ-1, 2ರಲ್ಲಿ ರೂ.10 ಲಕ್ಷಗಳ ಪರಿಮಿತಿಗೆ ಒಳಪಟ್ಟಂತೆ 5% ಹೆಚ್ಚುವರಿ ಬಂಡವಾಳ ಉತ್ತೇಜನ ಸಹಾಯಧನ.

ಜೆ. ಮಳೆ ಕೊಯ್ಲು ಮತ್ತು ಜಲಸಂರಕ್ಷಣೆ ಕ್ರಮಗಳು

ವಲಯ-1, 2, 3 ಮತ್ತು ಹೆಚ್‌ಕೆ ವಲಯ-1, 2ರಲ್ಲಿ ಚಿಕ್ಕ ಮತ್ತು ಮಧ್ಯಮ ಉತ್ಪಾದನಾ ಘಟಕಗಳು

(1) ಮಳೆ ಕೊಯ್ಲು: ಉಪಕರಣ ವೆಚ್ಚದ 50% (ಗರಿಷ್ಠ ರೂ.1.00 ಲಕ್ಷ)
(2) ತ್ಯಾಜ್ಯ ನೀರಿನ ಪುನರ್ ಬಳಕೆ: ಉಪಕರಣ ವೆಚ್ಚದ 50% (ಗರಿಷ್ಠ ರೂ.5.00 ಲಕ್ಷ)
(3) ಶೂನ್ಯ ತ್ಯಾಜ್ಯ ಸಂಸ್ಕರಣಾ ಕಾರ್ಯವಿಧಾನ: ಉಪಕರಣ ವೆಚ್ಚದ 50% (ಗರಿಷ್ಠ ರೂ.5.00 ಲಕ್ಷ)

ಕೆ) ಇಂಧನ ಸಂರಕ್ಷಣೆ:

ಎಲ್ಲಾ ವಲಯಗಳಲ್ಲಿನ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉತ್ಪಾದನಾ ಕೈಗಾರಿಕೆಗಳು

ಇಂಧನ ಉಳಿತಾಯದ ಕ್ರಮಗಳನ್ನು ಬಳಸಿ, ಈ ಮೊದಲು ಬಳಸಲಾಗುತ್ತಿದ್ದ ಇಂಧನದ ಕನಿಷ್ಠ 10% ಉಳಿತಾಯವಾದಲ್ಲಿ: ಬಂಡವಾಳ ವೆಚ್ಚದ 10% (ಗರಿಷ್ಠ ರೂ. 5 ಲಕ್ಷ)

ಅಸಾಂಪ್ರದಾಯಿಕ ಇಂಧನ ಮೂಲಗಳ ಬಳಕೆ: : ಬಂಡವಾಳ ವೆಚ್ಚದ 10% (ಗರಿಷ್ಠ ರೂ. 5 ಲಕ್ಷ)

ಮೇಲೆ 'ಎ' ಯಲ್ಲಿ ನಿರ್ದಿಷ್ಟಪಡಿಸಿರುವ ಎಲ್ಲಾ ಸಾಲ ದಸ್ತಾವೇಜುಗಳು, ಗುತ್ತಿಗೆ ಕಾಗದ ಪತ್ರಗಳು ಮತ್ತು ಮಾರಾಟ ಕಾಗದ ಪತ್ರಗಳಿಗಾಗಿ ನೋಂದಣಿ ಶುಲ್ಕಗಳು ಪ್ರತಿ ರೂ.1000/-ಕ್ಕಾಗಿ ರೂ.1/-ರ ರಿಯಾಯಿತಿ ದರದಲ್ಲಿರುತ್ತದೆ.

ಟಿಪ್ಪಣಿ :

(I) ಸ್ಟ್ಯಾಂಪ್ ಶುಲ್ಕದ ವಿನಾಯಿತಿ ಹಾಗೂ ರಿಯಾಯಿತಿಯಲ್ಲಿ ನೋಂದಣಿ ಶುಲ್ಕಗಳು, ಕೆಎಲ್‌ಆರ್ ಕಾಯ್ದೆಯ ಸೆಕ್ಷನ್ 109ರಡಿ ಖರೀದಿಸಲಾದ ಭೂಮಿ ಹಾಗೂ ಎಸ್‌ಎಲ್‌ಎಸ್‌ಡಬ್ಲ್ಯೂಸಿಸಿ/ ಡಿಎಲ್‌ಎಸ್‌ಡಬ್ಲ್ಯೂಸಿಸಿ ಅನುಮೋದಿಸಿದ ಯೋಜನೆಗಳಿಗಾಗಿ ಕೈಗಾರಿಕವಾಗಿ ಪರಿವರ್ತಿತ ಭೂಮಿಯ ನೇರ ಖರೀದಿಗಾಗಿ ಸಹ ಅನ್ವಯಿಸುತ್ತವೆ. ಈ ಪ್ರೋತ್ಸಾಹಕವು, ಸ್ವಾಧೀನಪಡಿಸಿಕೊಂಡ ಭೂಮಿಯ ನಷ್ಟ ಪರಿಹಾರವಾಗಿ ಕೆಐಎಡಿಬಿ ಭೂಮಾಲೀಕರಿಗೆ ವರ್ಗಾಯಿಸುವ ಭೂಮಿಗೂ ಅನ್ವಯಿಸುತ್ತದೆ.

(II) ಸ್ಟ್ಯಾಂಪ್ ಶುಲ್ಕದ ವಿನಾಯಿತಿ ಹಾಗೂ ರಿಯಾಯಿತಿಯಲ್ಲಿ ನೋಂದಣಿ ಶುಲ್ಕಗಳು, ಗುತ್ತಿಗೆ ಅವಧಿ ತೀರಿದ ನಂತರ ಭೂಮಿ, ಶೆಡ್‌ಗಳು, ಸೈಟ್‌ಗಳು, ಕೈಗಾರಿಕಾ ವಸಾಹತುಗಳಿಗೆ ಸಂಬಂಧಪಟ್ಟಂತೆ ಅಂತಿಮ ಮಾರಾಟ ಪತ್ರದ ನೋಂದಣಿಗೆ ಸಹ ಅನ್ವಯಿಸುತ್ತವೆ ಮತ್ತು ಈ ದರ ಗುತ್ತಿಗೆ ಹಾಗೂ ಮಾರಾಟ ಪತ್ರಕ್ಕೆ ಸಹಿ ಹಾಕುವ ಸಮಯದಲ್ಲಿ ಜಾರಿಯಲ್ಲಿದ್ದಂತೆ ಕೈಗಾರಿಕಾ ನೀತಿ ನಿರ್ದಿಷ್ಟಪಡಿಸಿರುವ ದರದಲ್ಲಿರುತ್ತದೆ.

ಸಿ) ಭೂಪರಿವರ್ತನೆ ಶುಲ್ಕದ ಮರುಪಾವತಿ

ಖಾಸಗಿ ಹೂಡಿಕೆದಾರರು ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸುವುದು ಒಳಪಟ್ಟಂತೆ, ಭೂಮಿಯನ್ನು ಕೃಷಿ ಬಳಕೆಯಿಂದ ಕೈಗಾರಿಕಾ ಬಳಕೆಗೆ ಪರಿವರ್ತಿಸಲು ಸೂಚಿತವಾಗಿರುವ ಭೂಪರಿವರ್ತನಾ ಶುಲ್ಕವನ್ನು ಕೆಳಗೆ ವಿವರಿಸಿರುವಂತೆ ಮರುಪಾವತಿಸಲಾಗುವುದು.

1) ಹೈದರಾಬಾದ್-ಕರ್ನಾಟಕ ಪ್ರದೇಶವನ್ನು ಹೊರತುಪಡಿಸಿ

ವಲಯ-1 : 100%<br>
ವಲಯ-2 : 100%<br>
ವಲಯ-3 : 75%<br>
ವಲಯ-4 : ಇಲ್ಲ

2) ಹೈದರಾಬಾದ್ ಕರ್ನಾಟಕ ಪ್ರದೇಶ

ಹೆಚ್‌ಕೆ ವಲಯ-1 : 100%<br>
ಹೆಚ್‌ಕೆ ವಲಯ-2 : 100%

ಡಿ) ಪ್ರವೇಶ ತೆರಿಗೆಯಿಂದ ವಿನಾಯಿತಿ

ಬೃಹತ್, ಮೆಗಾ, ಅಲ್ಟ್ರಾ ಮೆಗಾ ಮತ್ತು ಸೂಪರ್ ಮೆಗಾ ಸಂಸ್ಥೆಗಳು

ವಲಯ-1, 2, 3 ಮತ್ತು ಹೆಚ್‌ಕೆ ವಲಯ-1 ಮತ್ತು 2ರಲ್ಲಿ ಬೃಹತ್ ಮತ್ತು ಮೆಗಾ ಉದ್ಯಮಗಳು 3 ವರ್ಷಗಳ ಪ್ರಾರಂಭಿಕ ಅವಧಿಗಾಗಿ, ಅಲ್ಟ್ರಾ ಮೆಗಾ ಮತ್ತು ಸೂಪರ್ ಮೆಗಾ ಸಂಸ್ಥೆಗಳು ಯೋಜನಾ ಅನುಷ್ಠಾನದ ಆರಂಭಿಕ ದಿನಾಂಕದಿಂದ 5 ವರ್ಷಗಳ ಅವಧಿಗಾಗಿ "ಸ್ಥಾವರ ಮತ್ತು ಯಂತ್ರೋಪಕರಣ ಮತ್ತು ಬಂಡವಾಳ ಸಾಮಗ್ರಿಗಳ" ಮೇಲೆ ಪ್ರವೇಶ ತೆರಿಗೆಯನ್ನು ಪಾವತಿಸುವಲ್ಲಿ 100% ವಿನಾಯಿತಿಗೆ ಅರ್ಹವಾಗುತ್ತವೆ. ಈ ಉದ್ದೇಶಕ್ಕಾಗಿ ಸ್ಥಾವರ ಮತ್ತು ಯಂತ್ರೋಪಕರಣ ಮತ್ತು ಬಂಡವಾಳ ಸಾಮಗ್ರಿಗಳನ್ನು ಕುರಿತ ಅರ್ಥ ವಿವರಣೆಯಲ್ಲಿ ಕ್ಯಾಪ್ಟಿವ್ ವಿದ್ಯುತ್ ಉತ್ಪಾದನೆಗೆ ಅಗತ್ಯವಾಗುವ ಯಂತ್ರೋಪಕರಣಗಳು ಒಳಪಟ್ಟಂತೆ ಸ್ಥಾವರ ಮತ್ತು ಯಂತ್ರೋಪಕರಣ, ಉಪಕರಣ ಇತ್ಯಾದಿ ಸಹ ಸೇರಿರುತ್ತದೆ.

ಕಚ್ಚಾ ಸಾಮಗ್ರಿಗಳು, ಉಪಕರಣಗಳು, ಬಿಡಿ ಭಾಗಗಳು ಮತ್ತು ಇತರ ಸಾಮಗ್ರಿಗಳು (ಪೆಟ್ರೋಲಿಯಂ ಉತ್ಪನ್ನಗಳನ್ನು ಹೊರತುಪಡಿಸಿ) (ಅನ್ವಯಿತವಾದೆಡೆ) ವಾಣಿಜ್ಯ ಉತ್ಪಾದನೆಯ ಆರಂಭ ದಿನಾಂಕದಿಂದ 5 ವರ್ಷಗಳ ಅವಧಿಗಾಗಿ ವಿನಾಯಿತಿ ಇರುತ್ತದೆ. ಬೃಹತ್, ಮೆಗಾ, ಅಲ್ಟ್ರಾ ಮೆಗಾ ಮತ್ತು ಸೂಪರ್ ಮೆಗಾ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ, ಕಾರ್ಯಾಚರಣೆಯ ಅವಧಿಗಾಗಿ 1, 2 ಮತ್ತು 3 ವರ್ಷಗಳ ಹೆಚ್ಚುವರಿ ಅವಧಿಯನ್ನು ಅನುಕ್ರಮವಾಗಿ ಅನುಮತಿಸಲಾಗುವುದು.

**ಇ) ಇಟಿಪಿಗಳನ್ನು ಸ್ಥಾಪಿಸಲು ಸಹಾಯಧನ**

ಬೃಹತ್, ಮೆಗಾ, ಅಲ್ಟ್ರಾ ಮೆಗಾ ಮತ್ತು ಸೂಪರ್ ಮೆಗಾ ಸಂಸ್ಥೆಗಳು ಹಾಗೂ ಖಾಸಗಿ ಕೈಗಾರಿಕಾ ಪ್ರದೇಶ ಲೇಔಟ್‌ಗಳಿಗಾಗಿ (ಸಿಇಟಿಪಿ) :

ಹೆಚ್‌ಕೆ ವಲಯ-1 ಮತ್ತು 2, ಇತರ ವಲಯಗಳು 1, 2 ಮತ್ತು 3ಕ್ಕೆ ಸಂಬಂಧಪಟ್ಟಂತೆ ರೂ.2.00 ಕೋಟಿಗಳ ಮತ್ತು ವಲಯ-4ಕ್ಕಾಗಿ ರೂ.1.00 ಕೋಟಿಗಳ ಪರಿಮಿತಿಗೆ ಒಳಪಟ್ಟಂತೆ ಇಟಿಪಿ ವೆಚ್ಚದ ಏಕಕಾಲದ ಬಂಡವಾಳ ಸಹಾಯಧನ.

**ಎಫ್) ಬೃಹತ್, ಮೆಗಾ, ಅಲ್ಟ್ರಾ ಮೆಗಾ ಮತ್ತು ಸೂಪರ್ ಮೆಗಾ ಸಂಸ್ಥೆಗಳಿಗಾಗಿ ಅನುದಾನ ಕೊಡಲಾಗುವ ನಿವ್ವಳ ವ್ಯಾಟ್ ಮತ್ತು ಸಿಎಸ್‌ಟಿಯ ಮರುಪಾವತಿ**

ವಲಯ-1, 2, 3 ಮತ್ತು ಹೆಚ್‌ಕೆ ವಲಯ-1 ಮತ್ತು 2ರಲ್ಲಿ ಸ್ಥಾಪಿಸಲಾಗುವ ಎಲ್ಲಾ ಬೃಹತ್, ಮೆಗಾ, ಅಲ್ಟ್ರಾ ಮೆಗಾ ಮತ್ತು ಸೂಪರ್ ಮೆಗಾ ಸಂಸ್ಥೆಗಳಿಗೆ, ನೇರ ಉದ್ಯೋಗ ಒದಗಿಸುವ ಕನಿಷ್ಠ ಸಂಖ್ಯೆಯ ಆಧಾರದ ಮೇಲೆ ನಿವ್ವಳ ರಿಯಾಯಿತಿ ಮತ್ತು ಸಿಎಸ್‌ಟಿಯನ್ನು ಅನುದಾನವಾಗಿ ಹಿಂಪಾವತಿ ಮಾಡಲಾಗುವುದು.

<table>
<tr><th>ಸ್ಥಿರಾಸ್ತಿಗಳ ಮೇಲೆ ಬಂಡವಾಳ ಶ್ರೇಣಿ (ರೂ.ಕೋಟಿಗಳಲ್ಲಿ)</th><th>ಹೈದರಾಬಾದ್ ಕರ್ನಾಟಕಯೇತರ ಪ್ರದೇಶದಲ್ಲಿ ಅನುದಾನದ ಪ್ರಮಾಣ</th><th>ಹೈದರಾಬಾದ್ ಕರ್ನಾಟಕದಲ್ಲಿ ಅನುದಾನದ ಪ್ರಮಾಣ</th></tr>
<tr><td>ಬೃಹತ್ : (ಅಂದರೆ ರೂ.10 ಕೋಟಿಯಿಂದ ರೂ.250 ಕೋಟಿವರೆಗೆ ಸ್ಥಿರಾಸ್ತಿ ಮೇಲಿನ ಬಂಡವಾಳ)<br><br>ಮೊದಲ ರೂ.10 ಕೋಟಿಗಾಗಿ ಕನಿಷ್ಠ 20 ಜನರಿಗೆ ನೇರ ಉದ್ಯೋಗ ಮತ್ತು ಪ್ರತಿ ರೂ.50 ಕೋಟಿಯ ಹೆಚ್ಚುವರಿ ಬಂಡವಾಳಕ್ಕಾಗಿ 35 ಉದ್ಯೋಗಗಳು</td>
<td>100%ರಷ್ಟು ನಿವ್ವಳ ವ್ಯಾಟ್ + ಸಿಎಸ್‌ಟಿಯನ್ನು ವಾಣಿಜ್ಯ ಉತ್ಪಾದನೆಯ ಆರಂಭಿಕ ದಿನಾಂಕದಿಂದ ಬಡ್ಡಿರಹಿತ ಸಾಲವಾಗಿ ಕೆಳಕಂಡಂತೆ ನೀಡಲಾಗುವುದು.<br><table><tr><th>ವಲಯ</th><th>ಗರಿಷ್ಠ ಅವಧಿ</th><th>ಸಾಲ/ ಅನುದಾನದ ಮಿತಿ</th></tr><tr><td>1</td><td>9</td><td>65% of VFA</td></tr><tr><td>2</td><td>8</td><td>50% of VFA</td></tr><tr><td>3</td><td>7</td><td>40% of VFA</td></tr></table><br>ಸಾಲವನ್ನು ಕೆಳಕಂಡಂತೆ ಮರುಪಾವತಿ ಮಾಡಬೇಕು. ಮೊದಲನೆಯ ವರ್ಷದಲ್ಲಿ ಪಡೆದ ಸಾಲವನ್ನು 11ನೆಯ ವರ್ಷದಲ್ಲೂ, 2ನೆಯ ವರ್ಷದ್ದನ್ನು 12ನೆಯ ವರ್ಷದಲ್ಲೂ ಮತ್ತು ಇದೇ ರೀತಿಯಾಗಿ ಹಿಂಪಾವತಿಸಬೇಕು.<br><br>ಈ ಪ್ರೋತ್ಸಾಹಕವು, ಅವಧಿ ಅಥವಾ ಸಾಲಮಿತಿ, ಯಾವುದು ಮೊದಲು ಉಂಟಾಗುತ್ತದೆಯೋ, ಅದಕ್ಕೆ ಸೀಮಿತವಾಗಿರುತ್ತದೆ ಹಾಗೂ ಇದನ್ನು ಮುಂದಕ್ಕೆ ಒಯ್ಯುವುದನ್ನು ಅನುಮತಿಸಲಾಗುವುದಿಲ್ಲ.</td>
<td>100%ರಷ್ಟು ನಿವ್ವಳ ವ್ಯಾಟ್ + ಸಿಎಸ್‌ಟಿಯನ್ನು ವಾಣಿಜ್ಯ ಉತ್ಪಾದನೆಯ ಆರಂಭಿಕ ದಿನಾಂಕದಿಂದ ಬಡ್ಡಿರಹಿತ ಸಾಲವಾಗಿ ಕೆಳಕಂಡಂತೆ ನೀಡಲಾಗುವುದು.<br><table><tr><th>ವಲಯ</th><th>ಗರಿಷ್ಠ ಅವಧಿ</th><th>ಸಾಲ/ ಅನುದಾನದ ಮಿತಿ</th></tr><tr><td>1</td><td>10</td><td>75% of VFA</td></tr><tr><td>2</td><td>9</td><td>60% of VFA</td></tr></table><br>ಸಾಲವನ್ನು ಕೆಳಕಂಡಂತೆ ಮರುಪಾವತಿ ಮಾಡಬೇಕು. ಮೊದಲನೆಯ ವರ್ಷದಲ್ಲಿ ಪಡೆದ ಸಾಲವನ್ನು 11ನೆಯ ವರ್ಷದಲ್ಲೂ, 2ನೆಯ ವರ್ಷದ್ದನ್ನು 12ನೆಯ ವರ್ಷದಲ್ಲೂ ಮತ್ತು ಇದೇ ರೀತಿಯಾಗಿ ಹಿಂಪಾವತಿಸಬೇಕು.<br><br>ಈ ಪ್ರೋತ್ಸಾಹಕವು, ಅವಧಿ ಅಥವಾ ಸಾಲಮಿತಿ, ಯಾವುದು ಮೊದಲು ಉಂಟಾಗುತ್ತದೆಯೋ, ಅದಕ್ಕೆ ಸೀಮಿತವಾಗಿರುತ್ತದೆ ಹಾಗೂ ಇದನ್ನು ಮುಂದಕ್ಕೆ ಒಯ್ಯುವುದನ್ನು ಅನುಮತಿಸಲಾಗುವುದಿಲ್ಲ.</td></tr>
<tr><th>ಸ್ಥಿರಾಸ್ತಿಗಳ ಮೇಲೆ ಬಂಡವಾಳ ಶ್ರೇಣಿ (ರೂ.ಕೋಟಿಗಳಲ್ಲಿ)</th><th>ಹೈದರಾಬಾದ್ ಕರ್ನಾಟಕಯೇತರ ಪ್ರದೇಶದಲ್ಲಿ ಅನುದಾನದ ಪ್ರಮಾಣ</th><th>ಹೈದರಾಬಾದ್ ಕರ್ನಾಟಕದಲ್ಲಿ ಅನುದಾನದ ಪ್ರಮಾಣ</th></tr>
<tr><td>ಮೆಗಾ ಉದ್ಯಮ : (ಅಂದರೆ ರೂ.250 ಕೋಟಿಯಿಂದ ರೂ.500 ಕೋಟಿವರೆಗೆ ಸ್ಥಿರಾಸ್ತಿ ಮೇಲಿನ ಬಂಡವಾಳ)<br><br>ಮೊದಲ ರೂ.250 ಕೋಟಿಗಾಗಿ ಕನಿಷ್ಠ 200 ನೇರ ಉದ್ಯೋಗ ಮತ್ತು ಪ್ರತಿ ರೂ.50 ಕೋಟಿಯ ಹೆಚ್ಚುವರಿ ಬಂಡವಾಳಕ್ಕಾಗಿ 40 ಉದ್ಯೋಗಗಳು</td>
<td>100%ರಷ್ಟು ನಿವ್ವಳ ವ್ಯಾಟ್ + ಸಿಎಸ್‌ಟಿಯನ್ನು ವಾಣಿಜ್ಯ ಉತ್ಪಾದನೆಯ ಆರಂಭಿಕ ದಿನಾಂಕದಿಂದ ಬಡ್ಡಿರಹಿತ ಸಾಲವಾಗಿ ಕೆಳಕಂಡಂತೆ ನೀಡಲಾಗುವುದು.<br><table><tr><th>ವಲಯ</th><th>ಗರಿಷ್ಠ ಅವಧಿ</th><th>ಸಾಲ/ ಅನುದಾನದ ಮಿತಿ</th></tr><tr><td>1</td><td>10</td><td>80% of VFA</td></tr><tr><td>2</td><td>9</td><td>60% of VFA</td></tr><tr><td>3</td><td>8</td><td>50% of VFA</td></tr></table><br>ಸಾಲವನ್ನು ಕೆಳಕಂಡಂತೆ ಮರುಪಾವತಿ ಮಾಡಬೇಕು. ಮೊದಲನೆಯ ವರ್ಷದಲ್ಲಿ ಪಡೆದ ಸಾಲವನ್ನು 11ನೆಯ ವರ್ಷದಲ್ಲೂ, 2ನೆಯ ವರ್ಷದ್ದನ್ನು 12ನೆಯ ವರ್ಷದಲ್ಲೂ ಮತ್ತು ಇದೇ ರೀತಿಯಾಗಿ ಹಿಂಪಾವತಿಸಬೇಕು.<br><br>ಈ ಪ್ರೋತ್ಸಾಹಕವು, ಅವಧಿ ಅಥವಾ ಸಾಲಮಿತಿ, ಯಾವುದು ಮೊದಲು ಉಂಟಾಗುತ್ತದೆಯೋ, ಅದಕ್ಕೆ ಸೀಮಿತವಾಗಿರುತ್ತದೆ ಹಾಗೂ ಇದನ್ನು ಮುಂದಕ್ಕೆ ಒಯ್ಯುವುದನ್ನು ಅನುಮತಿಸಲಾಗುವುದಿಲ್ಲ.</td>
<td>100%ರಷ್ಟು ನಿವ್ವಳ ವ್ಯಾಟ್ + ಸಿಎಸ್‌ಟಿಯನ್ನು ವಾಣಿಜ್ಯ ಉತ್ಪಾದನೆಯ ಆರಂಭಿಕ ದಿನಾಂಕದಿಂದ ಬಡ್ಡಿರಹಿತ ಸಾಲವಾಗಿ ಕೆಳಕಂಡಂತೆ ನೀಡಲಾಗುವುದು.<br><table><tr><th>ವಲಯ</th><th>ಗರಿಷ್ಠ ಅವಧಿ</th><th>ಸಾಲ/ ಅನುದಾನದ ಮಿತಿ</th></tr><tr><td>1</td><td>11</td><td>90% of VFA</td></tr><tr><td>2</td><td>10</td><td>75% of VFA</td></tr></table><br>ಸಾಲವನ್ನು ಕೆಳಕಂಡಂತೆ ಮರುಪಾವತಿ ಮಾಡಬೇಕು. ಮೊದಲನೆಯ ವರ್ಷದಲ್ಲಿ ಪಡೆದ ಸಾಲವನ್ನು 11ನೆಯ ವರ್ಷದಲ್ಲೂ, 2ನೆಯ ವರ್ಷದ್ದನ್ನು 12ನೆಯ ವರ್ಷದಲ್ಲೂ ಮತ್ತು ಇದೇ ರೀತಿಯಾಗಿ ಹಿಂಪಾವತಿಸಬೇಕು.<br><br>ಈ ಪ್ರೋತ್ಸಾಹಕವು, ಅವಧಿ ಅಥವಾ ಸಾಲಮಿತಿ, ಯಾವುದು ಮೊದಲು ಉಂಟಾಗುತ್ತದೆಯೋ, ಅದಕ್ಕೆ ಸೀಮಿತವಾಗಿರುತ್ತದೆ ಹಾಗೂ ಇದನ್ನು ಮುಂದಕ್ಕೆ ಒಯ್ಯುವುದನ್ನು ಅನುಮತಿಸಲಾಗುವುದಿಲ್ಲ.</td></tr>
</table>

<table>
<tr><th>ಸ್ಥಿರಾಸ್ತಿಗಳ ಮೇಲೆ ಬಂಡವಾಳ ಶ್ರೇಣಿ (ರೂ.ಕೋಟಿಗಳಲ್ಲಿ)</th><th>ಹೈದರಾಬಾದ್ ಕರ್ನಾಟಕಯೇತರ ಪ್ರದೇಶದಲ್ಲಿ ಅನುದಾನದ ಪ್ರಮಾಣ</th><th>ಹೈದರಾಬಾದ್ ಕರ್ನಾಟಕದಲ್ಲಿ ಅನುದಾನದ ಪ್ರಮಾಣ</th></tr>
<tr><td>ಅಲ್ಟ್ರಾ ಮೆಗಾ ಉದ್ಯಮ :<br>(ಅಂದರೆ ರೂ.500 ಕೋಟಿಯಿಂದ ರೂ.1000 ಕೋಟಿವರೆಗೆ ಸ್ಥಿರಾಸ್ತಿ ಮೇಲಣ ಬಂಡವಾಳ)<br><br>ಮೊದಲ ರೂ.500 ಕೋಟಿಗಾಗಿ ಕನಿಷ್ಠ 400 ನೇರ ಉದ್ಯೋಗ ಮತ್ತು ಪ್ರತಿ ರೂ.50 ಕೋಟಿಯ ಹೆಚ್ಚುವರಿ ಬಂಡವಾಳಕ್ಕಾಗಿ 40 ಉದ್ಯೋಗಗಳು</td>
<td>100%ರಷ್ಟು ನಿವ್ವಳ ವ್ಯಾಟ್ + ಸಿಎಸ್‌ಟಿಯನ್ನು ವಾಣಿಜ್ಯ ಉತ್ಪಾದನೆಯ ಆರಂಭಿಕ ದಿನಾಂಕದಿಂದ ಬಡ್ಡಿರಹಿತ ಸಾಲವಾಗಿ ಕೆಳಕಂಡಂತೆ ನೀಡಲಾಗುವುದು.
<table>
<tr><th>ವಲಯ</th><th>ಗರಿಷ್ಠ ಅವಧಿ</th><th>ಸಾಲ/ ಅನುದಾನದ ಮಿತಿ</th></tr>
<tr><td>1</td><td>11</td><td>85% of VFA</td></tr>
<tr><td>2</td><td>10</td><td>75% of VFA</td></tr>
<tr><td>3</td><td>9</td><td>60% of VFA</td></tr>
</table>
ಸಾಲವನ್ನು ಕೆಳಕಂಡಂತೆ ಮರುಪಾವತಿ ಮಾಡಬೇಕು. ಮೊದಲನೆಯ ವರ್ಷದಲ್ಲಿ ಪಡೆದ ಸಾಲವನ್ನು 11ನೆಯ ವರ್ಷದಲ್ಲೂ, 2ನೆಯ ವರ್ಷದ್ದನ್ನು 12ನೆಯ ವರ್ಷದಲ್ಲೂ ಮತ್ತು ಇದೇ ರೀತಿಯಾಗಿ ಹಿಂಪಾವತಿಸಬೇಕು.<br><br>ಈ ಪ್ರೋತ್ಸಾಹಕವು, ಅವಧಿ ಅಥವಾ ಸಾಲಮಿತಿ, ಯಾವುದು ಮೊದಲು ಉಂಟಾಗುತ್ತದೆಯೋ, ಅದಕ್ಕೆ ಸೀಮಿತವಾಗಿರುತ್ತದೆ ಹಾಗೂ ಇದನ್ನು ಮುಂದಕ್ಕೆ ಒಯ್ಯುವುದನ್ನು ಅನುಮತಿಸಲಾಗುವುದಿಲ್ಲ.</td>
<td>100%ರಷ್ಟು ನಿವ್ವಳ ವ್ಯಾಟ್ + ಸಿಎಸ್‌ಟಿಯನ್ನು ವಾಣಿಜ್ಯ ಉತ್ಪಾದನೆಯ ಆರಂಭಿಕ ದಿನಾಂಕದಿಂದ ಬಡ್ಡಿರಹಿತ ಸಾಲವಾಗಿ ಕೆಳಕಂಡಂತೆ ನೀಡಲಾಗುವುದು.
<table>
<tr><th>ವಲಯ</th><th>ಗರಿಷ್ಠ ಅವಧಿ</th><th>ಸಾಲ/ ಅನುದಾನದ ಮಿತಿ</th></tr>
<tr><td>1</td><td>12</td><td>95% of VFA</td></tr>
<tr><td>2</td><td>11</td><td>85% of VFA</td></tr>
</table>
ಸಾಲವನ್ನು ಕೆಳಕಂಡಂತೆ ಮರುಪಾವತಿ ಮಾಡಬೇಕು. ಮೊದಲನೆಯ ವರ್ಷದಲ್ಲಿ ಪಡೆದ ಸಾಲವನ್ನು 11ನೆಯ ವರ್ಷದಲ್ಲೂ, 2ನೆಯ ವರ್ಷದ್ದನ್ನು 12ನೆಯ ವರ್ಷದಲ್ಲೂ ಮತ್ತು ಇದೇ ರೀತಿಯಾಗಿ ಹಿಂಪಾವತಿಸಬೇಕು.<br><br>ಈ ಪ್ರೋತ್ಸಾಹಕವು, ಅವಧಿ ಅಥವಾ ಸಾಲಮಿತಿ, ಯಾವುದು ಮೊದಲು ಉಂಟಾಗುತ್ತದೆಯೋ, ಅದಕ್ಕೆ ಸೀಮಿತವಾಗಿರುತ್ತದೆ ಹಾಗೂ ಇದನ್ನು ಮುಂದಕ್ಕೆ ಒಯ್ಯುವುದನ್ನು ಅನುಮತಿಸಲಾಗುವುದಿಲ್ಲ.</td></tr>
<tr><th>ಸ್ಥಿರಾಸ್ತಿಗಳ ಮೇಲೆ ಬಂಡವಾಳ ಶ್ರೇಣಿ (ರೂ.ಕೋಟಿಗಳಲ್ಲಿ)</th><th>ಹೈದರಾಬಾದ್ ಕರ್ನಾಟಕಯೇತರ ಪ್ರದೇಶದಲ್ಲಿ ಅನುದಾನದ ಪ್ರಮಾಣ</th><th>ಹೈದರಾಬಾದ್ ಕರ್ನಾಟಕದಲ್ಲಿ ಅನುದಾನದ ಪ್ರಮಾಣ</th></tr>
<tr><td>ಸೂಪರ್ ಮೆಗಾ ಉದ್ಯಮ :<br>(ಅಂದರೆ ರೂ.1000 ಕೋಟಿ ಮೀರಿದ ಸ್ಥಿರಾಸ್ತಿ ಮೇಲಣ ಬಂಡವಾಳ)<br><br>ಮೊದಲ ರೂ.1000 ಕೋಟಿಗಾಗಿ ಕನಿಷ್ಠ 800 ನೇರ ಉದ್ಯೋಗ ಮತ್ತು ಪ್ರತಿ ರೂ.200 ಕೋಟಿಯ ಹೆಚ್ಚುವರಿ ಬಂಡವಾಳಕ್ಕಾಗಿ 40 ಉದ್ಯೋಗಗಳು</td>
<td>100%ರಷ್ಟು ನಿವ್ವಳ ವ್ಯಾಟ್ + ಸಿಎಸ್‌ಟಿಯನ್ನು ವಾಣಿಜ್ಯ ಉತ್ಪಾದನೆಯ ಆರಂಭಿಕ ದಿನಾಂಕದಿಂದ ಬಡ್ಡಿರಹಿತ ಸಾಲವಾಗಿ ಕೆಳಕಂಡಂತೆ ನೀಡಲಾಗುವುದು.
<table>
<tr><th>ವಲಯ</th><th>ಗರಿಷ್ಠ ಅವಧಿ</th><th>ಸಾಲ/ ಅನುದಾನದ ಮಿತಿ</th></tr>
<tr><td>1</td><td>13</td><td>95% of VFA</td></tr>
<tr><td>2</td><td>12</td><td>85% of VFA</td></tr>
<tr><td>3</td><td>11</td><td>75% of VFA</td></tr>
</table>
ಸಾಲವನ್ನು ಕೆಳಕಂಡಂತೆ ಮರುಪಾವತಿ ಮಾಡಬೇಕು. ಮೊದಲನೆಯ ವರ್ಷದಲ್ಲಿ ಪಡೆದ ಸಾಲವನ್ನು 11ನೆಯ ವರ್ಷದಲ್ಲೂ, 2ನೆಯ ವರ್ಷದ್ದನ್ನು 12ನೆಯ ವರ್ಷದಲ್ಲೂ ಮತ್ತು ಇದೇ ರೀತಿಯಾಗಿ ಹಿಂಪಾವತಿಸಬೇಕು.<br><br>ಈ ಪ್ರೋತ್ಸಾಹಕವು, ಅವಧಿ ಅಥವಾ ಸಾಲಮಿತಿ, ಯಾವುದು ಮೊದಲು ಉಂಟಾಗುತ್ತದೆಯೋ, ಅದಕ್ಕೆ ಸೀಮಿತವಾಗಿರುತ್ತದೆ ಹಾಗೂ ಇದನ್ನು ಮುಂದಕ್ಕೆ ಒಯ್ಯುವುದನ್ನು ಅನುಮತಿಸಲಾಗುವುದಿಲ್ಲ.</td>
<td>100%ರಷ್ಟು ನಿವ್ವಳ ವ್ಯಾಟ್ + ಸಿಎಸ್‌ಟಿಯನ್ನು ವಾಣಿಜ್ಯ ಉತ್ಪಾದನೆಯ ಆರಂಭಿಕ ದಿನಾಂಕದಿಂದ ಬಡ್ಡಿರಹಿತ ಸಾಲವಾಗಿ ಕೆಳಕಂಡಂತೆ ನೀಡಲಾಗುವುದು.
<table>
<tr><th>ವಲಯ</th><th>ಗರಿಷ್ಠ ಅವಧಿ</th><th>ಸಾಲ/ ಅನುದಾನದ ಮಿತಿ</th></tr>
<tr><td>1</td><td>14</td><td>100% of VFA</td></tr>
<tr><td>2</td><td>13</td><td>95% of VFA</td></tr>
</table>
ಸಾಲವನ್ನು ಕೆಳಕಂಡಂತೆ ಮರುಪಾವತಿ ಮಾಡಬೇಕು. ಮೊದಲನೆಯ ವರ್ಷದಲ್ಲಿ ಪಡೆದ ಸಾಲವನ್ನು 11ನೆಯ ವರ್ಷದಲ್ಲೂ, 2ನೆಯ ವರ್ಷದ್ದನ್ನು 12ನೆಯ ವರ್ಷದಲ್ಲೂ ಮತ್ತು ಇದೇ ರೀತಿಯಾಗಿ ಹಿಂಪಾವತಿಸಬೇಕು.<br><br>ಈ ಪ್ರೋತ್ಸಾಹಕವು, ಅವಧಿ ಅಥವಾ ಸಾಲಮಿತಿ, ಯಾವುದು ಮೊದಲು ಉಂಟಾಗುತ್ತದೆಯೋ, ಅದಕ್ಕೆ ಸೀಮಿತವಾಗಿರುತ್ತದೆ ಹಾಗೂ ಇದನ್ನು ಮುಂದಕ್ಕೆ ಒಯ್ಯುವುದನ್ನು ಅನುಮತಿಸಲಾಗುವುದಿಲ್ಲ.</td></tr>
</table>

## 5.17 ಪ್ರಮುಖ ಒತ್ತಾಸೆಯ ಕೈಗಾರಿಕೆಗಳು :

### 5.17.1 ಏರೋಸ್ಪೇಸ್ ವಲಯ:

ಏರೋಸ್ಪೇಸ್ ವಲಯದಲ್ಲಿ ಅನೇಕ ಪ್ರಮುಖ ಬಹುರಾಷ್ಟ್ರೀಯ ಸಂಸ್ಥೆಗಳು ಮತ್ತು ಪಿಎಸ್‌ಯುಗಳ ಅಸ್ತಿತ್ವ ಹಾಗೂ ಉತ್ತಮ ಪರಿಸರ ವ್ಯವಸ್ಥೆಯಿಂದಾಗಿ ರಾಜ್ಯವು ಈ ವಲಯದಲ್ಲಿ ವಿಶ್ವಾಸಾರ್ಹ ಜಾಗತಿಕ ತಾಣವಾಗಿ ಹೊರಹೊಮ್ಮುತ್ತಿದೆ. ಈ ವಲಯದ ಬೆಳವಣಿಗೆಗೆ ಮತ್ತಷ್ಟು ಇಂಬು ನೀಡಲು ಕರ್ನಾಟಕವು, ಕರ್ನಾಟಕ ಏರೋಸ್ಪೇಸ್ ಪಾಲಿಸಿ 2013-23ಯನ್ನು ಪ್ರತ್ಯೇಕ ನೀತಿ ಕ್ರಮಗಳು ಮತ್ತು ಹೆಚ್ಚಿನ ಪ್ರೋತ್ಸಾಹಗಳು ಹಾಗೂ ರಿಯಾಯಿತಿಗಳೊಂದಿಗೆ ಈ ನೀತಿಯಲ್ಲಿ ಮೊದಲ 5 ವರ್ಷಗಳಲ್ಲಿ ರೂ.24,000 ಕೋಟಿ ಬಂಡವಾಳವನ್ನು ಆಕರ್ಷಿಸುವ ನಿರೀಕ್ಷೆಯಿದೆ.

ಅಗತ್ಯಾನುಸಾರವಾಗಿ ಪ್ರೋತ್ಸಾಹಗಳನ್ನು ನೀಡುವುದರ ಮೂಲಕ ಕನಿಷ್ಠ 2 ಒಇಎಂ ಆ್ಯಂಕರ್ ಘಟಕಗಳನ್ನು ಆಕರ್ಷಿಸಲು ಪ್ರಯತ್ನಿಸಲಾಗುವುದು.

ಏರೋಸ್ಪೇಸ್ ವಲಯದ ಕೈಗಾರಿಕೆಗಳು ಹೂಡುವ ಇತರ ಎಲ್ಲಾ ಬಂಡವಾಳಗಳು, ಏರೋಸ್ಪೇಸ್ ನೀತಿ 2013-23ಗೆ ಒಳಪಟ್ಟಿರುತ್ತವೆ.

### 5.17.2 ಆಟೋಮೋಟಿವ್ ವಲಯ

ರಾಜ್ಯವು ಟಾಟಾ ಮೋಟರ್ಸ್, ಟಿವಿಎಸ್ ಮೋಟರ್ಸ್, ಟೊಯೋಟಾ, ವೋಲ್ವೋ, ಹೊಂಡಾ, ಸ್ಕ್ಯಾನಿಯಾ ಇಂಡಿಯಾ, ಎಲ್ ಅಂಡ್ ಟಿ ಕೊಮಾಟ್ಸು, ಟಾಟಾ ಹಿಟಾಚಿ, ಟಾಟಾ ಮಾರ್ಕೋಪೋಲೋ ಮುಂತಾದ ಪ್ರಮುಖ ವಾಹನ ತಯಾರಕ ಉದ್ಯಮಗಳಿಗೆ ಆಸರೆ ನೀಡಿದೆ. ಹೀರೋ ಮೋಟೋಕಾರ್ಪ್, ಟ್ರಯಂಫ್ ಮುಂತಾದ ಇತರ ಪ್ರಮುಖ ವಾಹನ ತಯಾರಕರು ಸಹ ರಾಜ್ಯದ ಬಗ್ಗೆ ತೀವ್ರ ಆಸಕ್ತಿಯನ್ನು ತೋರಿಸಿವೆ. ಈ ವಲಯ ಕಲ್ಪಿಸಬಹುದಾದ ಬೃಹತ್ ಉದ್ಯೋಗಾವಕಾಶಗಳು ಹಾಗೂ ಸಂಬಂಧಪಟ್ಟ ಉಪ ಕೈಗಾರಿಕೆಗಳ ಪರಿಣಾಮಕಾರಿ ಸ್ಥಾಪನೆಯನ್ನು ಪರಿಗಣಿಸಿ, ಹೆಚ್ಚುವರಿ ಬಂಡವಾಳಗಳನ್ನು ಆಕರ್ಷಿಸುವಂತಹ ಒಂದು ಸೂಕ್ತ ವಾತಾವರಣವನ್ನು ಕಲ್ಪಿಸಲು ಉದ್ದೇಶಿಸಲಾಗಿದೆ

- ರಾಜ್ಯದಲ್ಲಿ ವಾಹನ ವಲಯಕ್ಕಾಗಿ ಆರ್ ಅಂಡ್ ಡಿ ಪ್ರಯತ್ನಗಳನ್ನು ಪ್ರೇರೇಪಿಸಿ ಸಾಂಸ್ಥಿಕಗೊಳಿಸುವುದು.
- ಸಂಶೋಧನೆಗಾಗಿ ಕೈಗಾರಿಕೆ ಮತ್ತು ತಜ್ಞರ ನಡುವೆ ಸಂಪರ್ಕವನ್ನು ಬೆಂಬಲಿಸಿ ಪೋಷಿಸುವುದು.
- ರಾಜ್ಯದಲ್ಲಿ ಕರ್ನಾಟಕ ವಾಹನ ಸಂಶೋಧನೆ ಮತ್ತು ನವೀನತೆ ಕೇಂದ್ರವನ್ನು ಕಾರ್ಯಾರಂಭ ಮಾಡಲು ಉದ್ದೇಶಿಸಲಾಗಿದೆ. ಇದು ಇನ್‌ಕ್ಯುಬೇಶನ್ ಕೇಂದ್ರವಾಗಿ ಕೂಡಾ ಕಾರ್ಯ ನಿರ್ವಹಿಸಲಿದ್ದು ರಾಜ್ಯದ ಬೆಂಬಲದೊಂದಿಗೆ ಪಿಪಿಪಿ ಮಾದರಿಯಲ್ಲಿ ಸ್ಥಾಪಿಸಲಾಗುವುದು.
- ರಾಜ್ಯದಲ್ಲಿ ವಾಹನ ಬಿಡಿ ಭಾಗಗಳ ಬೆಳವಣಿಗೆಗಾಗಿ ಕ್ರಮಗಳನ್ನು ಅಧ್ಯಯನ ಮಾಡಿ ಶಿಫಾರಸು ಮಾಡಲು ಒಂದು ಕೈಗಾರಿಕಾ ಗುಂಪಿನ ಸ್ಥಾಪನೆ.
- ವಾಯುಮಾಲಿನ್ಯವನ್ನು ಕಡಿಮೆ ಮಾಡಿ ಹಸಿರು ಹೈಬ್ರಿಡ್ ಮತ್ತು ಎಲೆಕ್ಟ್ರಿಕಲ್ ವಾಹನಗಳ ತಯಾರಿಕೆಯನ್ನು ಉತ್ತೇಜಿಸುವ ಗುರಿಯಿಂದ ಪರೋಕ್ಷ ಪ್ರೋತ್ಸಾಹಗಳಾಗಿ ರಸ್ತೆ ತೆರಿಗೆ, ನೋಂದಣಿ ತೆರಿಗೆಗಳನ್ನು ಕಡಿಮೆ ಮಾಡಲು ಉದ್ದೇಶಿಸಲಾಗಿದೆ.

### 5.17.3 ಮಷಿನ್ ಟೂಲ್ ವಲಯ

ಮಷಿನ್ ಟೂಲ್ ವಲಯವು ರಾಜ್ಯದಲ್ಲಿ ವಿವಿಧ ಕೈಗಾರಿಕೆಗಳ ಉತ್ಪಾದನಾ ಕಾರ್ಯಾಚರಣೆಗಳಿಗಾಗಿ ಬೆನ್ನೆಲುಬಾಗಿದೆ ಮತ್ತು ಎಂಎಸ್ಎಂಇಗಳ ದೊಡ್ಡ ನೆಲೆಯನ್ನು ಆಧಾರವಾಗಿ ಹೊಂದಿದೆ. ಮಷಿನ್ ಟೂಲ್ ವಲಯವು ಆಟೋಮೋಟಿವ್, ಏರೋಸ್ಪೇಸ್ ಮತ್ತು ರಕ್ಷಣೆ, ಜವಳಿ, ಭಾರಿ ಇಂಜಿನಿಯರಿಂಗ್ ಮತ್ತು ಉಕ್ಕು ಮುಂತಾದ ಕೈಗಾರಿಕೆಗಳಿಗೆ ಬೆಂಬಲ ನೀಡುತ್ತದೆ.

ಬೆಂಗಳೂರು ಪ್ರದೇಶವೊಂದೇ ರೂ.2,160 ಕೋಟಿಗಳ ಮೌಲ್ಯದ ಭಾರತೀಯ ಮಷಿನ್ ಟೂಲ್‌ಗಳ ಶೇ.60ರಷ್ಟನ್ನು ಉತ್ಪಾದಿಸುವುದರಿಂದ, ಕರ್ನಾಟಕವು ದೇಶದ ಮಷಿನ್ ಟೂಲ್‌ಗಳ ಕ್ಷೇತ್ರದಲ್ಲಿ ಮಹತ್ತರ ಪಾತ್ರ ವಹಿಸಿದೆ.

ಈ ವಲಯದಲ್ಲಿ ಮುಂದಾಳತ್ವವನ್ನು ಉಳಿಸಿಕೊಳ್ಳಲು ಕೆಳಗಿನ ಕ್ರಮಗಳನ್ನು ಉದ್ದೇಶಿಸಲಾಗಿದೆ.

i) ಕೆಐಎಡಿಬಿ ಅಥವಾ ಪಿಪಿಪಿ ನಮೂನೆಯ ಮೂಲಕ ರಾಜ್ಯದಲ್ಲಿ ಒಂದು ವಿಶಿಷ್ಟ ಮಷಿನ್ ಟೂಲ್ ಪಾರ್ಕ್‌ನ ಸ್ಥಾಪನೆಯನ್ನು ಪ್ರೋತ್ಸಾಹಿಸುವುದು.

ii) ಪಿಪಿಪಿ ನಮೂನೆಯಡಿ ಕೈಗಾರಿಕೆಯ ಸಹಯೋಗದೊಂದಿಗೆ ರಾಜ್ಯದಲ್ಲಿ ಮಷಿನ್ ಟೂಲ್ ಕೇಂದ್ರೀಕೃತ ತಂತ್ರಜ್ಞಾನ ಇನ್‌ಕ್ಯೂಬೇಷನ್ ಸೆಂಟರ್ ನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

iii) ಕರ್ನಾಟಕದ ಕುಶಲ ಅಭಿವೃದ್ಧಿ ನಿಗಮವು ಮಷಿನ್ ಟೂಲ್ಸ್ ಕೈಗಾರಿಕೆಯಲ್ಲಿ ಉದ್ಯೋಗಕ್ಕಾಗಿ ಸೂಕ್ತ ಕುಶಲತೆಯುಳ್ಳ ಕಾರ್ಯಪಡೆಯನ್ನು ನಿರ್ಮಿಸುವತ್ತ ಸಂಬಂಧಪಟ್ಟ ಕೈಗಾರಿಕೆಯ ಸಮಾಲೋಚನೆಯೊಂದಿಗೆ ವಿಶೇಷ ಪಠ್ಯಕ್ರಮಗಳನ್ನು ಒದಗಿಸುತ್ತದೆ.

iv) ಪಿಪಿಪಿ ನಮೂನೆಯಲ್ಲಿ ಪ್ರಸಕ್ತ ಟೂಲ್ ರೂಂಗಳ ಆಧುನೀಕರಣ ಮತ್ತು ಹೊಸ ಟೂಲ್‌ರೂಂಗಳ ಸ್ಥಾಪನೆಯ ಸಾಧ್ಯತೆಯನ್ನು ಸಹ ಪರಿಶೀಲಿಸಲಾಗುವುದು

### 5.17.4 ಸ್ಟೀಲ್ ಮತ್ತು ಸಿಮೆಂಟ್ ವಲಯ:

ವಿಫುಲ ಮತ್ತು ಉತ್ತಮ ಗುಣಮಟ್ಟದ ಖನಿಜ ಸಂಪತ್ತು ಕರ್ನಾಟಕದಲ್ಲಿ ಇದೆ. ಕಬ್ಬಿಣದ ಅದಿರು ಮುಂತಾದ ಪ್ರಮುಖ ಖನಿಜವು ಸುಮಾರು 2 ಬಿಲಿಯನ್ ಮೆಟ್ರಿಕ್ ಟನ್‌ಗಳಷ್ಟು ರಾಜ್ಯದಲ್ಲಿ ಲಭಿಸುತ್ತದೆ ಎಂದು ಅಂದಾಜು ಮಾಡಲಾಗಿದೆ ಹಾಗೂ ವಾಣಿಜ್ಯ ಬಳಕೆಗಾಗಿ ಸುಣ್ಣದ ಕಲ್ಲು, ಸಿಲಿಕಾ, ಮ್ಯಾಂಗನೀಸ್ ಮತ್ತು ಇತರ ಖನಿಜಗಳ ಗಣನೀಯ ಪ್ರಮಾಣವು ಲಭ್ಯವಿದೆ.

ರಾಜ್ಯವು ಪ್ರಮುಖ ಉಕ್ಕು ಕಾರ್ಯಾಗಾರಗಳಿಗೆ ಆಸರೆ ನೀಡಿ ಇದಕ್ಕಾಗಿ ಬಂಡವಾಳಗಳನ್ನು ಈಗಾಗಲೇ ಆಕರ್ಷಿಸಿದೆ. ರಾಜ್ಯದಲ್ಲಿನ 18 ಘಟಕಗಳ ಒಟ್ಟಾರೆ ಉಕ್ಕು ಉತ್ಪಾದನಾ ಸಾಮರ್ಥ್ಯ ಸುಮಾರು 22 mmtpa ಆಗಿದೆ. ಸುಮಾರು 11 ಪ್ರಮುಖ ಸಮಗ್ರ ಉಕ್ಕು ಕಾರ್ಯಾಗಾರಗಳು ಅನುಷ್ಠಾನದ ವಿಭಿನ್ನ ಹಂತಗಳಲ್ಲಿವೆ.

ನೆರೆಹೊರೆಯ ರಾಜ್ಯಗಳ ಸಿಮೆಂಟ್ ಅಗತ್ಯಗಳನ್ನು ಕರ್ನಾಟಕದ ಸಿಮೆಂಟ್ ಕಾರ್ಖಾನೆಗಳು ಪೂರೈಸುತ್ತವೆ. ರಾಜ್ಯದಲ್ಲಿನ 22 ಘಟಕಗಳ ಒಟ್ಟಾರೆ ಸಿಮೆಂಟ್ ಉತ್ಪಾದನಾ ಸಾಮರ್ಥ್ಯ ಸುಮಾರು 16 mmtpa ಆಗಿದೆ. ಸುಮಾರು 13 ಸಿಮೆಂಟ್ ಯೋಜನೆಗಳು ಅನುಷ್ಠಾನದಲ್ಲಿವೆ. ಎಲ್ಲಾ ಯೋಜನೆಗಳನ್ನು ಸಕಾಲದಲ್ಲಿ ಅನುಷ್ಠಾನಗೊಳಿಸಲು ಪ್ರಯತ್ನಿಸಲಾಗುವುದು.

ಸುಪ್ರೀಂ ಕೋರ್ಟ್ ಮತ್ತು ಎಂಎಂಆರ್‌ಡಿ ಕಾಯ್ದೆ ನೀಡಿರುವ ಮಾರ್ಗದರ್ಶನಗಳನ್ನು ಗಮನದಲ್ಲಿಟ್ಟುಕೊಂಡು ಕ್ಯಾಪ್ಟಿವ್ ಬಳಕೆಗಾಗಿ ಗಣಿ ಗುತ್ತಿಗೆಗಳ ನಿಗದಿ ಮಾಡುವ ಬಗ್ಗೆ ಒಂದು ನೀತಿ ನಿರ್ಧಾರವನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ಗಣಿಗಳನ್ನು ನಿಗದಿ ಮಾಡುವಲ್ಲಿ ಮೌಲ್ಯವರ್ಧನೆ ಪ್ರಾಮುಖ್ಯತೆಯನ್ನು ನೀಡಲಾಗುವುದು.

### 5.17.5 ವಾಹನ ತಯಾರಿಕೆ, ಮಷಿನ್ ಟೂಲ್ ರೂಂ, (ಉಕ್ಕು, ಸಿಮೆಂಟ್ ಹೊರತುಪಡಿಸಿ) ಮುಂತಾದ ಪ್ರಮುಖ ಉತ್ಪಾದನಾ ವಲಯಗಳಿಗಾಗಿ ಅಲ್ಟ್ರಾ ಮೆಗಾ ಮತ್ತು ಸೂಪರ್ ಮೆಗಾ ಉದ್ಯಮಗಳಿಗೆ ಪ್ರೋತ್ಸಾಹಗಳು ಮತ್ತು ರಿಯಾಯಿತಿಗಳ ಹೆಚ್ಚುವರಿ ಸೌಲಭ್ಯ

I) ವಲಯ-1, 2 ಮತ್ತು 3ರಲ್ಲಿ ಅಲ್ಟ್ರಾ ಮೆಗಾ ಮತ್ತು ಸೂಪರ್‌ಮೆಗಾ ಯೋಜನೆಗಳಿಗಾಗಿ ಅನುಕ್ರಮವಾಗಿ 9 ವರ್ಷಗಳು, 8 ವರ್ಷಗಳು ಮತ್ತು 7 ವರ್ಷಗಳು ಹಾಗೂ ಹೈದರಾಬಾದ್ ಕರ್ನಾಟಕದ ವಲಯ 1 ಮತ್ತು 2ರಲ್ಲಿ ಅನುಕ್ರಮವಾಗಿ 10 ಮತ್ತು 9 ವರ್ಷಗಳ ಅವಧಿಗಾಗಿ ವಿದ್ಯುಚ್ಛಕ್ತಿ ಶುಲ್ಕದಿಂದ ವಿನಾಯಿತಿ ಇರುತ್ತದೆ.

II) ಅಲ್ಟ್ರಾ ಮೆಗಾ ಮತ್ತು ಸೂಪರ್‌ಮೆಗಾ ಯೋಜನೆಗಳಿಗಾಗಿ ಕೆಳಕಂಡಂತೆ ನಿವ್ವಳ ವ್ಯಾಟ್ ಮತ್ತು ಸಿಎಸ್‌ಟಿಯನ್ನು ಅನುದಾನವಾಗಿ ನೀಡಲಾಗುವುದು.

<table>
<tr><th>ಸ್ಥಿರಾಸ್ತಿಗಳ ಮೇಲೆ ಬಂಡವಾಳ ಶ್ರೇಣಿ (ರೂ.ಕೋಟಿಗಳಲ್ಲಿ)</th><th>ಹೈದರಾಬಾದ್ ಕರ್ನಾಟಕಯೇತರ ಪ್ರದೇಶದಲ್ಲಿ ಅನುದಾನದ ಪ್ರಮಾಣ</th><th>ಹೈದರಾಬಾದ್ ಕರ್ನಾಟಕದಲ್ಲಿ ಅನುದಾನದ ಪ್ರಮಾಣ</th></tr>
<tr><td>ಅಲ್ಟ್ರಾ ಮೆಗಾ ಉದ್ಯಮ : (ಅಂದರೆ ರೂ.500 ಕೋಟಿಯಿಂದ ರೂ.1000 ಕೋಟಿವರೆಗೆ ಸ್ಥಿರಾಸ್ತಿ ಮೇಲಣ ಬಂಡವಾಳ)<br><br>ಮೊದಲ ರೂ.500 ಕೋಟಿಗಾಗಿ ಕನಿಷ್ಠ 400 ನೇರ ಉದ್ಯೋಗ ಮತ್ತು ಪ್ರತಿ ರೂ.50 ಕೋಟಿಯ ಹೆಚ್ಚುವರಿ ಬಂಡವಾಳಕ್ಕಾಗಿ 40 ಉದ್ಯೋಗಗಳು</td>
<td>100%ರಷ್ಟು ನಿವ್ವಳ ವ್ಯಾಟ್ + ಸಿಎಸ್‌ಟಿಯನ್ನು ವಾಣಿಜ್ಯ ಉತ್ಪಾದನೆಯ ಆರಂಭಿಕ ದಿನಾಂಕದಿಂದ ಬಡ್ಡಿರಹಿತ ಸಾಲವಾಗಿ ಕೆಳಕಂಡಂತೆ ನೀಡಲಾಗುವುದು.
<table>
<tr><th>ವಲಯ</th><th>ಗರಿಷ್ಠ ಅವಧಿ</th><th>ಸಾಲ/ ಅನುದಾನದ ಮಿತಿ</th></tr>
<tr><td>1</td><td>13</td><td>90% of VFA</td></tr>
<tr><td>2</td><td>12</td><td>80% of VFA</td></tr>
<tr><td>3</td><td>11</td><td>75% of VFA</td></tr>
</table>
ಸಾಲವನ್ನು ಕೆಳಕಂಡಂತೆ ಮರುಪಾವತಿ ಮಾಡಬೇಕು. ಮೊದಲನೆಯ ವರ್ಷದಲ್ಲಿ ಪಡೆದ ಸಾಲವನ್ನು 11ನೆಯ ವರ್ಷದಲ್ಲೂ, 2ನೆಯ ವರ್ಷದ್ದನ್ನು 12ನೆಯ ವರ್ಷದಲ್ಲೂ ಮತ್ತು ಇದೇ ರೀತಿಯಾಗಿ ಹಿಂಪಾವತಿಸಬೇಕು.<br><br>ಈ ಪ್ರೋತ್ಸಾಹಕವು, ಅವಧಿ ಅಥವಾ ಸಾಲಮಿತಿ, ಯಾವುದು ಮೊದಲು ಉಂಟಾಗುತ್ತದೆಯೋ, ಅದಕ್ಕೆ ಸೀಮಿತವಾಗಿರುತ್ತದೆ ಹಾಗೂ ಇದನ್ನು ಮುಂದಕ್ಕೆ ಒಯ್ಯುವುದನ್ನು ಅನುಮತಿಸಲಾಗುವುದಿಲ್ಲ.</td>
<td>100%ರಷ್ಟು ನಿವ್ವಳ ವ್ಯಾಟ್ + ಸಿಎಸ್‌ಟಿಯನ್ನು ವಾಣಿಜ್ಯ ಉತ್ಪಾದನೆಯ ಆರಂಭಿಕ ದಿನಾಂಕದಿಂದ ಬಡ್ಡಿರಹಿತ ಸಾಲವಾಗಿ ಕೆಳಕಂಡಂತೆ ನೀಡಲಾಗುವುದು.
<table>
<tr><th>ವಲಯ</th><th>ಗರಿಷ್ಠ ಅವಧಿ</th><th>ಸಾಲ/ ಅನುದಾನದ ಮಿತಿ</th></tr>
<tr><td>1</td><td>14</td><td>100% of VFA</td></tr>
<tr><td>2</td><td>13</td><td>90% of VFA</td></tr>
</table>
ಸಾಲವನ್ನು ಕೆಳಕಂಡಂತೆ ಮರುಪಾವತಿ ಮಾಡಬೇಕು. ಮೊದಲನೆಯ ವರ್ಷದಲ್ಲಿ ಪಡೆದ ಸಾಲವನ್ನು 11ನೆಯ ವರ್ಷದಲ್ಲೂ, 2ನೆಯ ವರ್ಷದ್ದನ್ನು 12ನೆಯ ವರ್ಷದಲ್ಲೂ ಮತ್ತು ಇದೇ ರೀತಿಯಾಗಿ ಹಿಂಪಾವತಿಸಬೇಕು.<br><br>ಈ ಪ್ರೋತ್ಸಾಹಕವು, ಅವಧಿ ಅಥವಾ ಸಾಲಮಿತಿ, ಯಾವುದು ಮೊದಲು ಉಂಟಾಗುತ್ತದೆಯೋ, ಅದಕ್ಕೆ ಸೀಮಿತವಾಗಿರುತ್ತದೆ ಹಾಗೂ ಇದನ್ನು ಮುಂದಕ್ಕೆ ಒಯ್ಯುವುದನ್ನು ಅನುಮತಿಸಲಾಗುವುದಿಲ್ಲ.</td></tr>
<tr><th>ಸ್ಥಿರಾಸ್ತಿಗಳ ಮೇಲೆ ಬಂಡವಾಳ ಶ್ರೇಣಿ (ರೂ.ಕೋಟಿಗಳಲ್ಲಿ)</th><th>ಹೈದರಾಬಾದ್ ಕರ್ನಾಟಕಯೇತರ ಪ್ರದೇಶದಲ್ಲಿ ಅನುದಾನದ ಪ್ರಮಾಣ</th><th>ಹೈದರಾಬಾದ್ ಕರ್ನಾಟಕದಲ್ಲಿ ಅನುದಾನದ ಪ್ರಮಾಣ</th></tr>
<tr><td>ಸೂಪರ್ ಮೆಗಾ ಉದ್ಯಮ : (ಅಂದರೆ ರೂ.1000 ಕೋಟಿ ಮೀರಿದ ಸ್ಥಿರಾಸ್ತಿ ಮೇಲಣ ಬಂಡವಾಳ)<br><br>ಮೊದಲ ರೂ.1000 ಕೋಟಿಗಾಗಿ ಕನಿಷ್ಠ 800 ನೇರ ಉದ್ಯೋಗ ಮತ್ತು ಪ್ರತಿ ರೂ.200 ಕೋಟಿಯ ಹೆಚ್ಚುವರಿ ಬಂಡವಾಳಕ್ಕಾಗಿ 40 ಉದ್ಯೋಗಗಳು</td>
<td>100%ರಷ್ಟು ನಿವ್ವಳ ವ್ಯಾಟ್ + ಸಿಎಸ್‌ಟಿಯನ್ನು ವಾಣಿಜ್ಯ ಉತ್ಪಾದನೆಯ ಆರಂಭಿಕ ದಿನಾಂಕದಿಂದ ಬಡ್ಡಿರಹಿತ ಸಾಲವಾಗಿ ಕೆಳಕಂಡಂತೆ ನೀಡಲಾಗುವುದು.
<table>
<tr><th>ವಲಯ</th><th>ಗರಿಷ್ಠ ಅವಧಿ</th><th>ಸಾಲ/ ಅನುದಾನದ ಮಿತಿ</th></tr>
<tr><td>1</td><td>14</td><td>100% of VFA</td></tr>
<tr><td>2</td><td>13</td><td>90% of VFA</td></tr>
<tr><td>3</td><td>12</td><td>80% of VFA</td></tr>
</table>
ಸಾಲವನ್ನು ಕೆಳಕಂಡಂತೆ ಮರುಪಾವತಿ ಮಾಡಬೇಕು. ಮೊದಲನೆಯ ವರ್ಷದಲ್ಲಿ ಪಡೆದ ಸಾಲವನ್ನು 11ನೆಯ ವರ್ಷದಲ್ಲೂ, 2ನೆಯ ವರ್ಷದ್ದನ್ನು 12ನೆಯ ವರ್ಷದಲ್ಲೂ ಮತ್ತು ಇದೇ ರೀತಿಯಾಗಿ ಹಿಂಪಾವತಿಸಬೇಕು.<br><br>ಈ ಪ್ರೋತ್ಸಾಹಕವು, ಅವಧಿ ಅಥವಾ ಸಾಲಮಿತಿ, ಯಾವುದು ಮೊದಲು ಉಂಟಾಗುತ್ತದೆಯೋ, ಅದಕ್ಕೆ ಸೀಮಿತವಾಗಿರುತ್ತದೆ ಹಾಗೂ ಇದನ್ನು ಮುಂದಕ್ಕೆ ಒಯ್ಯುವುದನ್ನು ಅನುಮತಿಸಲಾಗುವುದಿಲ್ಲ.</td>
<td>100%ರಷ್ಟು ನಿವ್ವಳ ವ್ಯಾಟ್ + ಸಿಎಸ್‌ಟಿಯನ್ನು ವಾಣಿಜ್ಯ ಉತ್ಪಾದನೆಯ ಆರಂಭಿಕ ದಿನಾಂಕದಿಂದ ಬಡ್ಡಿರಹಿತ ಸಾಲವಾಗಿ ಕೆಳಕಂಡಂತೆ ನೀಡಲಾಗುವುದು.
<table>
<tr><th>ವಲಯ</th><th>ಗರಿಷ್ಠ ಅವಧಿ</th><th>ಸಾಲ/ ಅನುದಾನದ ಮಿತಿ</th></tr>
<tr><td>1</td><td>16</td><td>100% of VFA</td></tr>
<tr><td>2</td><td>15</td><td>100% of VFA</td></tr>
</table>
ಸಾಲವನ್ನು ಕೆಳಕಂಡಂತೆ ಮರುಪಾವತಿ ಮಾಡಬೇಕು. ಮೊದಲನೆಯ ವರ್ಷದಲ್ಲಿ ಪಡೆದ ಸಾಲವನ್ನು 11ನೆಯ ವರ್ಷದಲ್ಲೂ, 2ನೆಯ ವರ್ಷದ್ದನ್ನು 12ನೆಯ ವರ್ಷದಲ್ಲೂ ಮತ್ತು ಇದೇ ರೀತಿಯಾಗಿ ಹಿಂಪಾವತಿಸಬೇಕು.<br><br>ಈ ಪ್ರೋತ್ಸಾಹಕವು, ಅವಧಿ ಅಥವಾ ಸಾಲಮಿತಿ, ಯಾವುದು ಮೊದಲು ಉಂಟಾಗುತ್ತದೆಯೋ, ಅದಕ್ಕೆ ಸೀಮಿತವಾಗಿರುತ್ತದೆ ಹಾಗೂ ಇದನ್ನು ಮುಂದಕ್ಕೆ ಒಯ್ಯುವುದನ್ನು ಅನುಮತಿಸಲಾಗುವುದಿಲ್ಲ.</td></tr>
</table>

III) ಯೋಜನಾ ಅನುಷ್ಠಾನ ಮತ್ತು ಕಾರ್ಯಾಚರಣೆಯ ಅವಧಿಯಲ್ಲಿ ಪ್ರವೇಶ ತೆರಿಗೆಯಿಂದ ವಿನಾಯಿತಿ (ಪೆಟ್ರೋಲಿಯಂ ಉತ್ಪನ್ನಗಳನ್ನು ಹೊರತುಪಡಿಸಿ) ಕೆಳಕಂಡಂತೆ ಇರುತ್ತದೆ.

ವಲಯ-1, 2, 3 ಮತ್ತು ಹೆಚ್‌ಕೆ ವಲಯ-1 ಮತ್ತು 2, ಯೋಜನಾ ಅನುಷ್ಠಾನದ ಆರಂಭ ದಿನಾಂಕದಿಂದ 5 ವರ್ಷಗಳ ಪ್ರಾರಂಭಿಕ ಅವಧಿಗಾಗಿ "ಸ್ಥಾವರ ಮತ್ತು ಯಂತ್ರೋಪಕರಣ ಮತ್ತು ಬಂಡವಾಳ ಸಾಮಗ್ರಿಗಳ" ಮೇಲೆ ಪ್ರವೇಶ ತೆರಿಗೆಯನ್ನು ಪಾವತಿಸುವಲ್ಲಿ 100% ವಿನಾಯಿತಿಗೆ ಅರ್ಹವಾಗುತ್ತವೆ. ಈ ಉದ್ದೇಶಕ್ಕಾಗಿ ಸ್ಥಾವರ ಮತ್ತು ಯಂತ್ರೋಪಕರಣ ಮತ್ತು ಬಂಡವಾಳ ಸಾಮಗ್ರಿಗಳನ್ನು ಕುರಿತ ಅರ್ಥ ವಿವರಣೆಯಲ್ಲಿ ಕ್ಯಾಪ್ಟಿವ್ ವಿದ್ಯುತ್ ಉತ್ಪಾದನೆಗೆ ಅಗತ್ಯವಾಗುವ ಯಂತ್ರೋಪಕರಣಗಳು ಒಳಪಟ್ಟಂತೆ ಕಾರ್ಯಾಗಾರ ಮತ್ತು ಯಂತ್ರೋಪಕರಣ, ಸಲಕರಣೆ ಇತ್ಯಾದಿ ಸಹ ಸೇರಿರುತ್ತದೆ.

ಕಚ್ಚಾ ಸಾಮಗ್ರಿಗಳು, ಉಪಕರಣಗಳು, ಬಿಡಿ ಭಾಗಗಳು ಮತ್ತು ಇತರ ಸಾಮಗ್ರಿಗಳು (ಪೆಟ್ರೋಲಿಯಂ ಉತ್ಪನ್ನಗಳನ್ನು ಹೊರತುಪಡಿಸಿ) (ಅನ್ವಯಿತವಾದೆಡೆ) ವಾಣಿಜ್ಯ ಉತ್ಪಾದನೆಯ ಆರಂಭ ದಿನಾಂಕದಿಂದ 9 ವರ್ಷಗಳ ಅವಧಿಗಾಗಿ.

5.17.6 ಬಂಡವಾಳ ಹೂಡಿಕೆದಾರರ ಸ್ಥೈರ್ಯವನ್ನು ಹೆಚ್ಚಿಸಲು ನೀತಿಯ ಅವಧಿಯಲ್ಲಿ ಪ್ರಮುಖ ಒತ್ತಾಸೆಯ ಕೈಗಾರಿಕೆಗಳನ್ನು ಪಬ್ಲಿಕ್ ಯುಟಿಲಿಟೀಸ್ ಎಂದು 1947ರ ಕೈಗಾರಿಕಾ ಡಿಸ್‌ಪ್ಯೂಟ್ಸ್ ಕಾಯ್ದೆಯಡಿ ಘೋಷಿಸಲಾಗುವುದು.

## 5.18 ಪುನರ್‌ಸ್ಥಾಪನೆ, ಪುನರುಜ್ಜೀವನ ಮತ್ತು ಸುಸೂತ್ರ ನಿರ್ಗಮನಕ್ಕಾಗಿ ಪ್ರತ್ಯೇಕ ನೀತಿಯ ಜಾರಿ

ನೋಂದಾಯಿತವಾದ ಕೈಗಾರಿಕಾ ಘಟಕಗಳ ಒಟ್ಟಾರೆ ಸಂಖ್ಯೆ, ಕಾರ್ಯ ಮಾಡುತ್ತಿರುವ ಘಟಕಗಳ ಸಂಖ್ಯೆ, ಮುಚ್ಚಲ್ಪಟ್ಟ ಘಟಕಗಳು ಮತ್ತು ಇವಕ್ಕೆ ಕಾರಣವನ್ನು ಅಧ್ಯಯನ ಮಾಡಲು ನಿಯಮಿತ ವಾರ್ಷಿಕ ಸಮೀಕ್ಷೆಯನ್ನು ಕೈಗೊಳ್ಳಲಾಗುವುದು. ಸಮೀಕ್ಷೆಯ ಫಲಿತಾಂಶದ ಆಧಾರದ ಮೇಲೆ ತದನಂತರ, ಕೈಗಾರಿಕೆಗಳ ಪುನರ್‌ಸ್ಥಾಪನೆ, ಪುನರುಜ್ಜೀವನ ಮತ್ತು ಸುಸೂತ್ರ ನಿರ್ಗಮನಕ್ಕಾಗಿ ಪ್ರತ್ಯೇಕ ನೀತಿಯನ್ನು ರೂಪಿಸಲು ಉದ್ದೇಶಿಸಲಾಗಿದೆ.

## 5.19 ಹಣಕಾಸು ಬೆಂಬಲ

ಉದ್ದೇಶಿಸಲಾಗಿರುವ ಪ್ರೋತ್ಸಾಹಕಗಳು ಹಾಗೂ ನೀತಿಯ ಇತರ ಕ್ರಮಗಳಿಂದ ಉಂಟಾಗುವ ವೆಚ್ಚವನ್ನು ಪೂರೈಸಲು ಸೂಕ್ತ ಬಜೆಟ್ ಬೆಂಬಲದ ಏರ್ಪಾಡುಗಳನ್ನು ಮಾಡಲಾಗುವುದು.

ಮೇಲೆ ಹೇಳಿರುವುದಕ್ಕೆ ಹೊರತಾಗಿ NIMZ ಗಳನ್ನು ಉತ್ತೇಜಿಸಲು ಉದ್ದೇಶಿತ ಎಸ್‌ಪಿವಿಗಳಲ್ಲಿ ಈಕ್ವಿಟಿ ಭಾಗವಹಿಸುವಿಕೆಗಾಗಿಯೂ ಸೂಕ್ತ ಏರ್ಪಾಡುಗಳನ್ನು ಮಾಡಲಾಗುವುದು.

ಸರ್ಕಾರವು, ಅಗತ್ಯವಾದೆಡೆ, ಕೆಐಎಡಿಬಿ/ಕೆಎಸ್‌ಐಐಡಿಸಿ/ಕೆಎಸ್‌ಎಸ್‌ಐಡಿಸಿ ಪರವಾಗಿ ಗ್ಯಾರಂಟಿಗಳನ್ನು ಒದಗಿಸುತ್ತದೆ.

## 5.20 ವಿಶೇಷ ಪ್ರೋತ್ಸಾಹಕಗಳು

ಅರ್ಹ ಪ್ರಕರಣಗಳಲ್ಲಿ, ಅವುಗಳು ಹೂಡುವ ಬಂಡವಾಳ ಯೋಜನೆಯ ನಿವೇಶನ, ಉತ್ಪತ್ತಿಯಾಗುವ ನೇರ ಮತ್ತು ಪರೋಕ್ಷ ಉದ್ಯೋಗಾವಕಾಶಗಳು ಹಾಗೂ ವೆಂಡರ್ಸ್ ಮತ್ತು ಪೂರಕ-ಘಟಕಗಳ ಮೂಲಕ ಅಧಿಕ ಬಂಡವಾಳವನ್ನು ಆಕರ್ಷಿಸುವ ಸಾಮರ್ಥ್ಯವನ್ನು ಪರಿಗಣಿಸಿದ ನಂತರ, ನೀತಿಯಲ್ಲಿ ಪ್ರಸ್ತಾಪಿತವಾಗಿರುವ ಷರತ್ತುಗಳನ್ನು ಸಡಿಲಿಸಿ, ಪ್ರೋತ್ಸಾಹಗಳು/ವಿನಾಯಿತಿಗಳ ವಿಶೇಷ ಪ್ಯಾಕೇಜ್ ಒದಗಿಸುವುದನ್ನು ಪರಿಶೀಲಿಸಲಾಗುವುದು.

## 5.21 ಭೂಮಿ, ನೀರು ಮತ್ತು ವಿದ್ಯುತ್ ಅಗತ್ಯ

ನೀತಿಯಲ್ಲಿ ಪ್ರಸ್ತಾಪಿಸಿದ ಉಪಕ್ರಮಗಳಿಂದಾಗಿ ರೂ.5.00 ಲಕ್ಷ ಕೋಟಿ ಮೀರಿ ಬಂಡವಾಳವನ್ನು ಆಕರ್ಷಿಸಿ ಸುಮಾರು 15 ಲಕ್ಷ ಜನರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಲಾಗುವುದು ಎನ್ನುವ ನಿರೀಕ್ಷೆಯಿದೆ.

ನೀತಿಯ ಅವಧಿಯಲ್ಲಿ ಈ ಉದ್ಯಮಗಳಿಗೆ ಭೂಮಿ, ನೀರು ಮತ್ತು ವಿದ್ಯುತ್ ನ ಅಗತ್ಯಗಳನ್ನು ಕೆಳಕಂಡಂತೆ ಅಂದಾಜು ಮಾಡಲಾಗಿದೆ.

| ವಲಯ | ಘಟಕಗಳ ಸಂಖ್ಯೆ | ಕೋಟಿ ರೂ.ಗಳಲ್ಲಿ ಬಂಡವಾಳ | ಉದ್ಯೋಗ | ಭೂ ಅಗತ್ಯ ಎಕರೆಗಳಲ್ಲಿ | ವಿದ್ಯುತ್ ಮೆ.ವಾ.ನಲ್ಲಿ | ನೀರು ದಿನಕ್ಕೆ ದಶಲಕ್ಷ ಲೀಟರ್‌ನಲ್ಲಿ |
|---|---|---|---|---|---|---|
| ಅತಿ ಚಿಕ್ಕ | 194448 | 31950 | 898350 | 5000 | 100 | 15 |
| ಚಿಕ್ಕ | 16018 | 60400 | 377550 | 2500 | 300 | 10 |
| ಮಧ್ಯಮ | 459 | 17600 | 59100 | 3000 | 300 | 15 |
| ಬೃಹತ್, ಮೆಗಾ, ಅಲ್ಟ್ರಾ ಮೆಗಾ ಮತ್ತು ಸೂಪರ್ ಮೆಗಾ | 323 | 390050 | 165000 | 29500 | 2300 | 200 |
| ಒಟ್ಟಾರೆ | **211248** | **500000** | **1500000** | **40000** | **3000** | **240** |

ಈ ಅಂದಾಜು ಕೆಳಗಿನ ಅಂಶಗಳನ್ನು ಆಧರಿಸಿದೆ:

- ಭೂಮಿಯ ಅಗತ್ಯ
- ಸುಮಾರು 40,000 ಅತಿ ಸಣ್ಣ ಘಟಕಗಳಿಗೆ ಕೆಐಎಡಿಬಿ/ಕೆಎಸ್ಎಸ್ಐಡಿಸಿ ವತಿಯಿಂದ ಸುಮಾರು 5,000 ಎಕರೆ ವಿಸ್ತೀರ್ಣದಲ್ಲಿ ಶೆಡ್‌ಗಳು ಅಥವಾ ಚಿಕ್ಕ ಜಾಗಗಳು ಅಗತ್ಯವಾಗುತ್ತವೆ: ಇನ್ನುಳಿದವು ತಮ್ಮ ಸ್ವಂತ ಭೂಮಿ/ಶೆಡ್‌ನಲ್ಲಿ ಅಥವಾ ಗುತ್ತಿಗೆಯ ಸ್ಥಳದಲ್ಲಿ ಘಟಕಗಳನ್ನು ಸ್ಥಾಪಿಸುತ್ತವೆ.
- ಸುಮಾರು 5,000 ಸಣ್ಣ ಘಟಕಗಳಿಗೆ ಕೆಐಎಡಿಬಿ/ಕೆಎಸ್ಎಸ್ಐಡಿಸಿ ವತಿಯಿಂದ ಸುಮಾರು 2,500 ಎಕರೆ ವಿಸ್ತೀರ್ಣದಲ್ಲಿ ಶೆಡ್‌ಗಳು ಅಥವಾ ಚಿಕ್ಕ ಜಾಗಗಳು ಅಗತ್ಯವಾಗುತ್ತವೆ: ಇನ್ನುಳಿದವು ತಮ್ಮ ಸ್ವಂತ ಭೂಮಿ/ಶೆಡ್‌ನಲ್ಲಿ ಅಥವಾ ಗುತ್ತಿಗೆಯ ಸ್ಥಳದಲ್ಲಿ ಘಟಕಗಳನ್ನು ಸ್ಥಾಪಿಸುತ್ತವೆ.
- ಸುಮಾರು 1,500 ಘಟಕಗಳಿಗೆ ಕೆಐಎಡಿಬಿ/ಕೆಎಸ್ಎಸ್ಐಡಿಸಿ ವತಿಯಿಂದ ಸುಮಾರು 3,000 ಎಕರೆ ವಿಸ್ತೀರ್ಣದಲ್ಲಿ ಶೆಡ್‌ಗಳು ಅಥವಾ ಚಿಕ್ಕ ಜಾಗಗಳು ಅಗತ್ಯವಾಗುತ್ತವೆ: ಇನ್ನುಳಿದವು ತಮ್ಮ ಸ್ವಂತ ಭೂಮಿ/ಶೆಡ್‌ನಲ್ಲಿ ಅಥವಾ ಗುತ್ತಿಗೆಯ ಸ್ಥಳದಲ್ಲಿ ಘಟಕಗಳನ್ನು ಸ್ಥಾಪಿಸುತ್ತವೆ.
- ಬೃಹತ್ ಮತ್ತು ಮೆಗಾ ಅಲ್ಟ್ರಾ ಮೆಗಾ ಮತ್ತು ಸೂಪರ್ ಮೆಗಾ ಉದ್ಯಮಗಳಿಗಾಗಿ ಕೆಐಎಡಿಬಿ ಮೂಲಕ ಸ್ವಾಧೀನಪಡಿಸಿಕೊಂಡು ನಿಗದಿಪಡಿಸಲಾಗುವ ಸುಮಾರು 14,500 ಎಕರೆಗಳ ಅಗತ್ಯವಿರುತ್ತವೆ ಹಾಗೂ ಬಾಕಿ ಉಳಿದ 15,000 ಎಕರೆಗಳನ್ನು ಕೆಎಲ್‌ಆರ್ ಕಾಯ್ದೆ ಕಲಮು 109ರಡಿ ಅಥವಾ ಖಾಸಗಿ ಕ್ಷೇತ್ರದ ಮೂಲಕ ಸ್ವಾಧೀನಪಡಿಸಿಕೊಳ್ಳಬೇಕಾಗಿದೆ.

ನೀರು, ವಿದ್ಯುತ್ ಮತ್ತು ಕಾರ್ಮಿಕ ಅಗತ್ಯಗಳು ಆಯಾ ಕೈಗಾರಿಕಾ ಮಾನಕಗಳ ಪ್ರಕಾರ ಇರುತ್ತವೆ ಮತ್ತು ಸೂಚನಾತ್ಮಕ ಅಂದಾಜು ಮಾತ್ರ ಆಗಿವೆ.

## 6. ಅನುಷ್ಠಾನ ವ್ಯವಸ್ಥೆ

6.1 ನೀತಿಯ ಎಲ್ಲಾ ಅಂಶಗಳ ಅನುಷ್ಠಾನ ಕುರಿತ ಪ್ರಗತಿಯ ಮೇಲೆ ನಿಯಮಿತವಾಗಿ ನಿಗಾ ಇಡಲು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಆಯಾ ಇಲಾಖೆಗಳ ಎಸಿಎಸ್/ಪ್ರಧಾನ ಕಾರ್ಯದರ್ಶಿಗಳ/ಕಾರ್ಯದರ್ಶಿಗಳ ಸಹಯೋಗದೊಂದಿಗೆ ಉಚ್ಚ ಮಟ್ಟದ ವಿಭಾಗೀಯ ಮೇಲ್ವಿಚಾರಣಾ ಸಮಿತಿಯನ್ನು ರಚಿಸಲಾಗುವುದು.

ಈ ಸಮಿತಿಯು ನೀತಿಗೆ ಸಂಬಂಧಪಟ್ಟಂತೆ ವಿವಿಧ ಇಲಾಖೆಗಳು ಸರ್ಕಾರಿ ಆಜ್ಞೆಗಳನ್ನು ಕಾಲಕ್ಕೆ ಸರಿಯಾಗಿ ಜಾರಿಗೊಳಿಸುವುದನ್ನು ಖಚಿತಪಡಿಸಿಕೊಳ್ಳುತ್ತದೆ.

ಈ ಸಮಿತಿಯು ನೀತಿಯ ಸುಸೂತ್ರ ಅನುಷ್ಠಾನಕ್ಕಾಗಿ ಅಗತ್ಯವಾದೆಡೆ ನೀತಿಯ ಅನುಷ್ಠಾನದ ಅವಧಿಯಲ್ಲಿ ತಿದ್ದುಪಡಿ ತರುವುದನ್ನು ಶಿಫಾರಸು ಮಾಡುತ್ತದೆ.

ಈ ಸಮಿತಿಯು ನೀತಿಯ ಅನುಷ್ಠಾನದಲ್ಲಿ ಸಾಧಿಸಲಾಗುವ ಪ್ರಗತಿ ಕುರಿತಂತೆ ಅರ್ಧವಾರ್ಷಿಕ ವರದಿಗಳನ್ನು ಸಹ ಹೊರತರುತ್ತದೆ.

ಈ ಸಮಿತಿಗೆ ಇಲಾಖೆಯ ಪಾಲಿಸಿ ಮಾನಿಟರಿಂಗ್ ಕೋಶ ಅಥವಾ ಔಟ್‌ಸೋರ್ಸ್ ಮಾಡಲಾದ ವೃತ್ತಿಪರ ಸಂಸ್ಥೆ, ನೆರವನ್ನು ನೀಡುತ್ತದೆ. ಈ ಕೋಶವು ಸಂಶೋಧನೆ, ಅಧ್ಯಯನ, ಸಮೀಕ್ಷೆಗಳು ಇತ್ಯಾದಿಯನ್ನು ಕೈಗೊಂಡು ನೀತಿ ಉಪಕ್ರಮಗಳ ಪ್ರಭಾವವನ್ನು ಅಂದಾಜು ಮಾಡಿ ಅದರ ಅನುಷ್ಠಾನ ಕುರಿತಂತೆ ಸೂಕ್ತ ಪ್ರತಿಕ್ರಿಯೆಯನ್ನು ಕೈಗೊಳ್ಳಲು ಅಗತ್ಯ ಸಿಬ್ಬಂದಿ ಮತ್ತು ಸಂಪನ್ಮೂಲಗಳನ್ನು ಹೊಂದಿರುತ್ತದೆ.

6.2 ನಿಯತ ಕಾಲಿಕವಾಗಿ ಪ್ರಗತಿಯನ್ನು ಖಚಿತಪಡಿಸಿಕೊಳ್ಳಲು ಕೆಳಗಿನ ಗುರಿಗಳನ್ನು ಹೊಂದಲಾಗಿದೆ:

| ಸಂಚಯಿತ ಅಂಕಿಗಳು ವರ್ಷದ ಅಂತ್ಯದ ವೇಳೆಗೆ | ಬಂಡವಾಳ ಪ್ರಸ್ತಾವನೆಗಳ ಅನುಮೋದನೆ (ರೂ.ಕೋಟಿ) | ನಿರೀಕ್ಷಿತ ಉದ್ಯೋಗಗಳ ಸೃಷ್ಟಿ (ಲಕ್ಷ ಸಂಖ್ಯೆಗಳಲ್ಲಿ) | ಬಂಡವಾಳ ಹೂಡಿಕೆಯ ಗ್ರೌಂಡಿಂಗ್ (ರೂ.ಕೋಟಿ) | ವಾಸ್ತವಿಕ ಉದ್ಯೋಗ (ಲಕ್ಷ ಸಂಖ್ಯೆಗಳಲ್ಲಿ) |
|---|---|---|---|---|
| 2014 - 15 | 50,000 | 1.00 | 30,000 | 0.50 |
| 2015 - 16 | 2,50,000 | 3.50 | 1,00,000 | 1.50 |
| 2016 - 17 | 3,50,000 | 7.00 | 1,50,000 | 2.50 |
| 2017 - 18 | 4,25,000 | 11.00 | 2,00,000 | 3.75 |
| 2018 - 19 | 5,00,000 | 15.00 | 2,50,000 | 5.00 |

6.3 ನೀತಿಯನ್ನು ಪರಿಣಾಮಕಾರಿಯಾಗಿ ಮತ್ತು ಅರ್ಥಪೂರ್ಣವಾಗಿ ಜಾರಿಗೆ ತರಲು, ಬುಡಮಟ್ಟದ ಕಚೇರಿಗಳನ್ನು ಅಂದರೆ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಕಚೇರಿಗಳನ್ನು ಬಲಪಡಿಸುವ ಮೂಲಕ ಇಲಾಖೆಯನ್ನು ಪುನರ್‌ವ್ಯವಸ್ಥೆ ಮಾಡಬೇಕಾದ ತುರ್ತು ಅಗತ್ಯವಿದೆ.

6.4 ಬಂಡವಾಳ ಹೂಡಿಕೆಗಾಗಿ ರಾಜ್ಯವನ್ನು ಪಿತ್ಸ್ವಾಸಾರ್ಹ ತಾಣವಾಗಿಸಿ ಒಂದು ಪೂರಕ ಬಂಡವಾಳ ವಾತಾವರಣವನ್ನು ಕಲ್ಪಿಸುವ ಸಲುವಾಗಿ, ಕೆಯುಎಂ, ಕೆಐಎಡಿಬಿ ಮತ್ತು ಕೆಎಸ್‌ಎಸ್‌ಐಡಿಸಿ ಗಳ ಕಾರ್ಯವಿಧಾನವನ್ನು ಪುನರ್‌ಪರಿಶೀಲಿಸಬೇಕಾಗಿದೆ: ಮತ್ತು ಮಾನವ ಹಸ್ತಕ್ಷೇಪವನ್ನು ಕಡಿಮೆ ಮಾಡಿ ಒಂದು ಸಾಂಸ್ಥಿಕ ವ್ಯವಸ್ಥೆಯನ್ನು ತರುವತ್ತ ಹೆಚ್ಚಿನ ಆದ್ಯತೆ ನೀಡಲು ಅವುಗಳ ಕಾರ್ಯವಿಧಾನಗಳನ್ನು ಪುನರ್ ರಚಿಸಬೇಕಾಗಿದೆ.

ಇಲಾಖೆಯು ಈ ಸಂಸ್ಥೆಗಳನ್ನು ಪುನರ್‌ವ್ಯವಸ್ಥೆಗೊಳಿಸುವ ಕ್ರಮವನ್ನು ಕೈಗೆತ್ತಿಗೊಳ್ಳಲಿದೆ

6.5 ಕೈಗಾರಿಕಾ ನೀತಿ 2014–19ರ ಅಂಶಗಳು, ಅನುಬಂಧ 3 ಎ ರಲ್ಲಿ ವಿವರಿಸಿರುವ ಷರತ್ತು ಮತ್ತು ನಿಯಮಗಳಿಗೆ ಒಳಪಟ್ಟಂತೆ ಅರ್ಹ ಕೈಗಾರಿಕೆಗಳಿಗೆ ಅನ್ವಯಿಸುತ್ತವೆ.

**ಅನುಬಂಧ-1**

## ಪ್ರೋತ್ಸಾಹಗಳು ಮತ್ತು ರಿಯಾಯಿತಿಗಳಿಗೆ ಅರ್ಹವಾದ ಸೇವಾ ಉದ್ಯಮಗಳ ಪಟ್ಟಿ

ಡಿಎಲ್‌ಎಸ್‌ಡಬ್ಲ್ಯೂಸಿಸಿ, ಎಸ್‌ಎಲ್‌ಎಸ್‌ಡಬ್ಲ್ಯೂಸಿಸಿ ಮತ್ತು ಎಸ್‌ಹೆಚ್‌ಎಲ್‌ಸಿಸಿ
ಅನುಮೋದಿಸುವ ಯೋಜನೆಗಳಿಗೆ ಮಾತ್ರ ಅನ್ವಯಿಸುತ್ತದೆ

1. ಕೈಗಾರಿಕೆಗಳಿಗೆ ಬೆಂಬಲ ನೀಡುವ ಲಾಜಿಸ್ಟಿಕ್ ಫೆಸಿಲಿಟಿಗಳು

   ಎ) ಕಂಟೈನರ್ ಫ್ರೈಟ್ ಸ್ಟೇಷನ್ ಆಪರೇಟರ್ಸ್

   ಬಿ) ವೇರ್ ಹೌಸಸ್

   ಸಿ) ಆಹಾರ ಸಂಸ್ಕರಣೆ ಕೈಗಾರಿಕೆಗೆ ಇಕ್ವಿಪ್‌ಮೆಂಟ್ ಬೆಂಬಲ ನೀಡುವ ಶೈತ್ಯಾಗಾರಗಳು ಮತ್ತು ಇದೇ ರೀತಿಯ ಸೌಕರ್ಯಗಳು

   ಡಿ) ಮೆಟೀರಿಯಲ್ ಹ್ಯಾಂಡ್ಲಿಂಗ್ ಇಕ್ವಿಪ್‌ಮೆಂಟ್ (ರವಾನೆ ಸಾರಿಗೆಗಳು ಮತ್ತು ಗೂಡ್ಸ್ ಕ್ಯಾರಿಯರ್‌ಗಳನ್ನು ಹೊರತುಪಡಿಸಿದಂತೆ)

2. ಜಾಬ್ ವರ್ಕ್‌ನಲ್ಲಿ ನಿರತವಾದ ಪೌಡರ್ ಕೋಟಿಂಗ್/ಪೆಯಿಂಟಿಂಗ್, ಕೈಗಾರಿಕಾ ಪೆಯಿಂಟಿಂಗ್‌ಗಳು ಇತ್ಯಾದಿ.

3. ಕೆಐಎಡಿಬಿ/ಕೆಎಸ್‌ಎಸ್‌ಐಡಿಸಿ ಕೈಗಾರಿಕಾ ಪ್ರದೇಶಗಳು/ನಿವೇಶನಗಳ ಒಳಗೆ ಸ್ಥಾಪಿಸಲಾಗುವ ವೇ ಬ್ರಿಡ್ಜ್‌ಗಳು ಮತ್ತು ಹೆಲ್ತ್ ಕೇರ್ ಫೆಸಿಲಿಟಿಗಳು.

4. ಮೆಟೀರಿಯಲ್ / ಪ್ರಾಡಕ್ಟ್ ಟೆಸ್ಟಿಂಗ್ ಲ್ಯಾಬರೇಟರಿ

ಈ ಅನುಬಂಧದಲ್ಲಿ ಪಟ್ಟಿ ಮಾಡಲಾಗಿರುವ ಚಟುವಟಿಕೆಗಳಿಗೆ ಸೇವೆಗಳನ್ನು ಸೇರಿಸಲು/ತೆಗೆದುಹಾಕಲು ರಾಜ್ಯ ಮಟ್ಟದ ಸಮನ್ವಯ ಸಮಿತಿಗೆ ಅಧಿಕಾರವಿದೆ.

ಅನುಬಂಧ-2

## ಪ್ರೋತ್ಸಾಹನೆ ಮತ್ತು ರಿಯಾಯಿತಿಗಳಿಗೆ ಅರ್ಹವಲ್ಲದ ಚಟುವಟಿಕೆಗಳ ಪಟ್ಟಿ

1 ವೈನರಿ ಹೊರತಾದ ಮದ್ಯ ತಯಾರಿಸುವ ಮತ್ತು ಭಟ್ಟಿ ಇಳಿಸುವ ಎಲ್ಲಾ ವಿಧದ ಘಟಕಗಳು

2 ಖಂಡಸಾರಿ ಮತ್ತು ಬೆಲ್ಲ ತಯಾರಿಸುವ ಘಟಕಗಳು

3 ಫೋಟೋ ಸ್ಟೂಡಿಯೋ ಮತ್ತು ವರ್ಣ ಸಂಸ್ಕರಣ ಕೇಂದ್ರಗಳು ಹಾಗೂ ತಕ್ಷಣದ ಫೋಟೋ ಪ್ರಿಂಟಿಂಗ್ ಉದ್ಯಮಗಳು

4 ಫೋಟೋಕಾಪಿ / ಜೆರಾಕ್ಸ್ ಮಷಿನ್‌ಗಳು/ಫ್ಯಾಕ್ಸ್ ಮಷಿನ್‌ಗಳು/ಡೇಟಾ ಎಂಟ್ರಿ/ಡೇಟಾ ರಿಕವರಿ ಇತ್ಯಾದಿಗಳು.

5 ರಸಗೊಬ್ಬರ ಮಿಶ್ರಣ ಘಟಕಗಳು

6 ಮೂಲಔಷಧಿ/ತಯಾರಿಸಿದ ಔಷಧಿ/ರಾಸಾಯನಿಕ ವಸ್ತುಗಳನ್ನು ಯಾವುದೇ ಸಂಸ್ಕರಣೆ / ಮೌಲ್ಯವರ್ಧನೆ ಇಲ್ಲದೆ ಕೇವಲ ಮರು ಪ್ಯಾಕಿಂಗ್ ಮಾಡುವುದು.

7 ಪಾರ್ಟಿಕಲ್ ಬೋರ್ಡ್/ಕಡಿಮೆ ಸಾಂದ್ರತೆಯ ಫೈಬರ್ ಬೋರ್ಡ್ (LDF)/ಮಧ್ಯಮ ಸಾಂದ್ರತೆಯ ಫೈಬರ್ ಬೋರ್ಡ್‌ಗಳು (MDF)/ದಟ್ಟ ಸಾಂದ್ರತೆಯ ಫೈಬರ್ ಬೋರ್ಡ್(HDF) ಗಳ ತಯಾರಿಕೆಯನ್ನು ಹೊರತುಪಡಿಸಿ ಮರಮಟ್ಟು ಸಿಗಿಯುವ ಎಲ್ಲಾ ರೀತಿಯ ಕಾರ್ಖಾನೆಗಳು

8 ಬೀಡಿಗಳು/ಸಿಗರೇಟ್‌ಗಳು/ಸಿಗಾರ್‌ಗಳು/ಗುಟ್ಕಾ ಮತ್ತು ತಂಬಾಕು ಆಧಾರಿತ ಉತ್ಪನ್ನಗಳು

9 ಆರ್ಘೋಯಿಕ್ ಮತ್ತು ರಿಯಾಕ್ಟಿವ್ ಬಣ್ಣಗಳನ್ನು ತಯಾರಿಸುವ ಉದ್ಯಮಗಳು

10 ಸುಡುಮದ್ದು / ಪಟಾಕಿ ತಯಾರಿಕಾ ಉದ್ಯಮಗಳು

11 ಓಝೋನ್ ಬರಿದು ಮಾಡುವ ವಸ್ತುಗಳನ್ನು ತಯಾರಿಸುವ ಮತ್ತು/ಅಥವಾ ಬಳಸುವ ಕೈಗಾರಿಕೆಗಳು

12 ವಿದ್ಯುತ್ ಲಾಂಡ್ರಿಗಳು ಒಳಪಟ್ಟಂತೆ ಎಲ್ಲಾ ಲಾಂಡ್ರಿಗಳು

13 ಸಿಮೆಂಟ್ ಹಾಲೋಬ್ಲಾಕ್ ಒಳಪಟ್ಟ ಮತ್ತು ವೈರ್ ಕಟ್/ಫ್ಲೈ ಆಶ್ ಮತ್ತು ರಿಫ್ರಾಕ್ಟರಿ ಇಟ್ಟಿಗೆಗಳ ಹೊರತಾಗಿ ಇಟ್ಟಿಗೆ ತಯಾರಿಸುವ ಉದ್ಯಮ

14 ಹ್ಯಾಚರಿ ಹೊರತಾದ ಕೋಳಿಸಾಕಣೆ ಉದ್ಯಮ

15 ಐಸ್‌ಕ್ರೀಂ ಉದ್ಯಮವನ್ನು ಹೊರತುಪಡಿಸಿ ಪಾಪ್‌ಕಾರ್ನ್ ಮತ್ತು ಐಸ್‌ಕ್ಯಾಂಡಿ ತಯಾರಿಕೆ ಉದ್ಯಮಗಳು

16 ಪ್ರತಿ ದಿನ 2 ಟನ್ ಸಾಮರ್ಥ್ಯಗಿಂತ ಕಡಿಮೆ ಪ್ರಮಾಣದ ಕಾಫಿ ಬೀಜ ಹುರಿಯುವ ಮತ್ತು ಪುಡಿ ಮಾಡುವ ಘಟಕಗಳು

17 ಗಡಿಯಾರ ಮತ್ತು ಕೈಗಡಿಯಾರ/ಮೊಬೈಲ್/ಕಂಪ್ಯೂಟರ್ ಮತ್ತು ಹಾರ್ಡ್‌ವೇರ್ ಸಲಕರಣೆಗಳ ರಿಪೇರಿ ಅಂಗಡಿಗಳು

18 ಕ್ಯಾಸೆಟ್ ರೆಕಾರ್ಡಿಂಗ್ (ಶ್ರಾವ್ಯ ಮತ್ತು ದೃಶ್ಯ) ಉದ್ಯಮಗಳು

19 ಸೈನೈಡ್ ತಯಾರಿಕಾ ಉದ್ಯಮಗಳು

20 ಗಣಿಗಾರಿಕೆ ಮತ್ತು ಗಣಿಗಾರಿಕೆ ಸಲಕರಣೆಗಳು

21 ಸುಣ್ಣದ ಗೂಡು/ಸುಣ್ಣ ಸುಡುವಿಕೆ ಘಟಕಗಳು

22 ಕ್ಷ-ಕಿರಣ ಕ್ಲಿನಿಕ್/ಕ್ಲಿನಿಕಲ್/ರೋಗತಪಾಸಣಾ ಪ್ರಯೋಗಾಲಯ/ಮತ್ತು ಸ್ಕ್ಯಾನಿಂಗ್, ಎಂಆರ್‌ಐ ಪರೀಕ್ಷೆಗಳನ್ನು ಕೈಗೊಳ್ಳುವ ಘಟಕಗಳು

23 ರಿಗ್‌ಗಳು, ಕಾಂಕ್ರೀಟ್/ಟಾರ್ ಮಿಶ್ರಣ ಯಂತ್ರಗಳು, ಉಷ್ಣ ಮಿಶ್ರಣ ಯಂತ್ರಗಳು, ಯೋಜನಾ ಸ್ಥಳದಲ್ಲಿ ಕೆಲಸ ಮಾಡುವ ಯಂತ್ರ ಸ್ಥಾವರಗಳು ಮುಂತಾದ ಚಲನಶೀಲ ಘಟಕಗಳು

24 ಕ್ರೈಸೋಲೇಟ್ ಆಸ್‌ಬೆಸ್ಟಾಸ್‌ನ ತಯಾರಿಕೆ (ಬಿಳಿ ಹರಳು) ಯಲ್ಲಿ ತೊಡಗುವ ಘಟಕಗಳು

25 ಎಲ್ಲಾ ರೀತಿಯ ಸಲೂನ್/ಸ್ಪಾ/ಮಸಾಜಿಂಗ್ ಕೇಂದ್ರಗಳು ಇತ್ಯಾದಿ

26 ಎಲ್ಲಾ ರೀತಿಯ ಹೊಟೇಲ್‌ಗಳು/ರೆಸ್ಟೋರೆಂಟ್‌ಗಳು/ರೆಸಾರ್ಟ್‌ಗಳು/ಅಮ್ಯೂಸ್‌ಮೆಂಟ್ ಪಾರ್ಕ್‌ಗಳು ಇತ್ಯಾದಿ

ಅನುಬಂಧ 3ಎ

## ರಿಯಾಯಿತಿ ಮತ್ತು ಪ್ರೋತ್ಸಾಹನೆಗಳ ಮಂಜೂರಾತಿಯ ನಿಯಮಗಳು ಮತ್ತು ನಿಂಬಂಧನೆಗಳು

ಎ) ಕೈಗಾರಿಕಾ ನೀತಿ 2014-19 ಯನ್ನು ಜಾರಿಗೊಳಿಸುವ ಸರ್ಕಾರಿ ಆದೇಶ ನೀಡಿದ ದಿನಾಂಕದಿಂದ ಜಾರಿಗೆ ಬಂದು, ಐದು ವರ್ಷಗಳವರೆಗೆ ಅಥವಾ ಸರ್ಕಾರ ಪರಿಷ್ಕರಿಸಿದಂತೆ ಕಾರ್ಯಾಚರಣೆಯಲ್ಲಿರುತ್ತದೆ. ಹೊಸ ಕೈಗಾರಿಕಾ ನೀತಿ 2014-19 ಜಾರಿಗೆ ಬಂದಾಗ, ಕೈಗಾರಿಕಾ ನೀತಿ 2009-14ನ್ನು ಹಿಂತೆಗೆದುಕೊಳ್ಳಲಾಗುತ್ತದೆ. ಆದರೆ, ಈ ಮೊದಲಿನ ನೀತಿಗಳಡಿ ಮಂಜೂರಾತಿ ಪಡೆದು, ಪ್ರೋತ್ಸಾಹಗಳು ಮತ್ತು ವಿನಾಯಿತಿಗಳನ್ನು ಭಾಗಶಃ ಪಡೆದಿರುವಂತಹ ಉದ್ಯಮಗಳು ಅನ್ವಯಿತ ಮಂಜೂರಾತಿ ಆಜ್ಞೆಗಳ ಪ್ರಕಾರ ಆ ಪ್ರಯೋಜನಗಳನ್ನು ಪಡೆಯಲು ಅರ್ಹವಿರುತ್ತವೆ.

ಬಿ) ಕೈಗಾರಿಕಾ ನೀತಿ 2014-19 ಪ್ರಕಟಗೊಳ್ಳುವ ಸಮಯದಲ್ಲಿ ಅನುಷ್ಠಾನದಡಿ ಇರುವ ಯೋಜನೆಗಳಿಗಾಗಿ (ಪೈಪ್ ಲೈನ್ ಯೋಜನೆಗಳು) ಕೈಗಾರಿಕಾ ನೀತಿ 2009-14 ಅಥವಾ ಕೈಗಾರಿಕಾ ನೀತಿ 2014-19 ಹೇಗೆ ಅನ್ವಯಿಸುತ್ತದೆ ಎನ್ನುವುದನ್ನು ಕೆಳಕಂಡಂತೆ ನಿರ್ಧರಿಸಲಾಗುವುದು.

(i) 2009-14 ನೀತಿ ಅವಧಿಯಲ್ಲಿ ಜಿಲ್ಲಾ ಮಟ್ಟ, ರಾಜ್ಯ ಮಟ್ಟ ಮತ್ತು ರಾಜ್ಯ ಉನ್ನತ ಮಟ್ಟದ ಮಂಜೂರಾತಿ ಸಮಿತಿಯ ಮೂಲಕ ಅನುಮತಿ ಪಡೆದು 2009-14 ನೀತಿಯ ರೀತ್ಯ ಯೋಜನೆಗಾಗಿ ಯಾವುದೇ ಪ್ರೋತ್ಸಾಹಗಳು ಮತ್ತು ರಿಯಾಯಿತಿಗಳನ್ನು ಪಡೆದಿರುವಂತಹ ಉದ್ಯಮಗಳು 2009-14 ನೀತಿಯ ಅಡಿ ಮಾತ್ರ ಇತರ ಪ್ರೋತ್ಸಾಹಗಳು ಮತ್ತು ರಿಯಾಯಿತಿಗಳನ್ನು ಪಡೆಯಲು ಅರ್ಹವಾಗುತ್ತವೆ.

(ii) ಸ್ವಂತ ಹಣಕಾಸಿನ ಯೋಜನೆ ಒಳಪಟ್ಟಂತೆ ಯಾವುದೇ ಘಟಕ ಕೆಳಗಿನ ಯಾವುದಾದರೂ ಒಂದು ಪರಿಣಾಮಕಾರಿ ಕ್ರಮವನ್ನು ತೆಗೆದುಕೊಂಡಿದ್ದಲ್ಲಿ ಹಾಗೂ ಈ ಯಾವುದೇ ಕ್ರಮದ ದಿನಾಂಕವು ಹೊಸ ಕೈಗಾರಿಕಾ ನೀತಿ 2014-19 ಮೇಲಣ ಸರ್ಕಾರಿ ಆಜ್ಞೆ ನೀಡಿಕೆಯ ದಿನಾಂಕಕ್ಕೆ ಮುಂಚಿತವಾಗಿದ್ದಲ್ಲಿ, ಘಟಕವು 2009-14ರ ನೀತಿಯ ಪ್ರಕಾರ ಮಾತ್ರ ಪ್ರೋತ್ಸಾಹಗಳನ್ನು ಪಡೆಯುತ್ತದೆ.

1) ನಿವೇಶನಕ್ಕಾಗಿ (ಭೂಮಿ ಯಾ ಕಟ್ಟಡ) ಗುತ್ತಿಗೆ ಅಥವಾ ಮಾರಾಟ ಒಪ್ಪಂದವನ್ನು ಮಾಡಿಕೊಂಡ ದಿನಾಂಕ.
2) ಕೆಐಎಡಿಬಿ/ಕೆಎಸ್‌ಎಸ್‌ಐಡಿಸಿ ಅಥವಾ ಇತರ ಯಾವುದೇ ಸಂಸ್ಥೆಯಿಂದ ನಿವೇಶನ ಯಾ ಷೆಡ್ ತೆಗೆದುಕೊಂಡ ಪ್ರಮಾಣ ಪತ್ರದ ದಿನಾಂಕ.
3) ಅರ್ಹ ಅಧಿಕಾರಿಯಿಂದ ಕಟ್ಟಡ ನಕ್ಷೆ ಅನುಮೋದಿತವಾದ ದಿನಾಂಕ.
4) ಹಣಕಾಸು ಸಂಸ್ಥೆ/ಬ್ಯಾಂಕಿನಿಂದ ಸಾಲದ ಮೊದಲ ಕಂತು ಬಿಡುಗಡೆ ಆದ ದಿನಾಂಕ.
5) ಸ್ಥಾವರ ಮತ್ತು ಯಂತ್ರೋಪಕರಣಕ್ಕಾಗಿ ಮೊದಲ ಖರೀದಿ ಬೇಡಿಕೆ ಸಲ್ಲಿಸಿದ ದಿನಾಂಕ.

(iii) ಈ ಉದ್ಯಮಗಳು 2009-14 ನೀತಿಯ ಅವಧಿಯಲ್ಲಿ ಯಾವುದೇ ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳದೇ, ಯಾವುದೇ ಬಂಡವಾಳ ಹೂಡದೆ ಮತ್ತು ಯಾವುದೇ ಪ್ರೋತ್ಸಾಹಗಳು ಮತ್ತು ವಿನಾಯಿತಿಗಳನ್ನು ಪಡೆಯದೇ ಇದ್ದಲ್ಲಿ ಅವುಗಳು 2014-19ರಲ್ಲಿದ್ದಂತೆ ಪ್ರೋತ್ಸಾಹಗಳನ್ನು ಪಡೆಯಬಹುದಾಗಿದೆ.

ಸಿ) ಮೇಲೆ ವಿವರಿಸಿದಂತೆ ಕೈಗಾರಿಕಾ ನೀತಿ 2014-19ರ ಪ್ರಕಟಣೆಯ ಸಮಯದಲ್ಲಿ ಅನುಷ್ಠಾನದಡಿ (ಪೈಪ್ ಲೈನ್ ಯೋಜನೆಗಳು) ಇರುವ ಯೋಜನೆಗಳು 31.08.2017ಗೆ ಮುಂಚಿತವಾಗಿ ವಾಣಿಜ್ಯ ಉತ್ಪಾದನೆಯನ್ನು ಆರಂಭಿಸಬೇಕು. ಇಲ್ಲದಿದ್ದಲ್ಲಿ, ಕೈಗಾರಿಕಾ ನೀತಿ 2009-14 ರೀತ್ಯ ಪ್ರೋತ್ಸಾಹಗಳನ್ನು ಪಡೆಯಲು ಅವುಗಳು ಅರ್ಹತೆಯನ್ನು ಕಳೆದುಕೊಳ್ಳುತ್ತವೆ. ಕೈಗಾರಿಕಾ ನೀತಿ 2014-19ರಡಿ ಕೂಡಾ ಪ್ರೋತ್ಸಾಹಗಳನ್ನು ಪಡೆಯಲು ಅವು ಅರ್ಹವಾಗಿರುವುದಿಲ್ಲ.

ಡಿ) ಈ ನೀತಿಯಡಿ ಪ್ರೋತ್ಸಾಹಗಳು ಮತ್ತು ವಿನಾಯಿತಿಗಳು ಮೂಲತಃ ಉತ್ಪಾದನಾ ಉದ್ಯಮಗಳಿಗಾಗಿ ಮಾತ್ರ ಲಭ್ಯವಿರುತ್ತವೆ. ಆದರೆ ಅನುಬಂಧ-1ರಲ್ಲಿ ಪಟ್ಟಿ ಮಾಡಿರುವಂತೆ ಕೈಗಾರಿಕಾ ಸಂಬಂಧಿತ ಸೇವಾ ಉದ್ಯಮಗಳ ನಿರ್ದಿಷ್ಟ ವರ್ಗಗಳು ಸಹಾ ಪ್ರೋತ್ಸಾಹಗಳು ಮತ್ತು ವಿನಾಯಿತಿಗಳಿಗೆ ಅರ್ಹವಾಗುತ್ತವೆ.

ಇ) ಈ ನೀತಿಯಡಿ ಸೂಚಿಸಲಾಗಿರುವ ಪ್ರೋತ್ಸಾಹಗಳು ಮತ್ತು ವಿನಾಯಿತಿಗಳು ಹೊಸ ಉದ್ಯಮಗಳ ಸ್ಥಾಪನೆಗಾಗಿ ಎಲ್ಲಾ ಹೊಸ ಬಂಡವಾಳಗಳು ಹಾಗೂ ಅನುಬಂಧ-5ರ ಕ್ರ.ಸಂ. 'ಯು'ನಲ್ಲಿ ವಿವರಿಸಿರುವ ವಿಸ್ತರಣೆ, ವೈವಿಧ್ಯಕರಣ ಮತ್ತು ಆಧುನೀಕರಣಕ್ಕಾಗಿ ಲಭ್ಯವಿರುತ್ತವೆ.

ಎಫ್) 2014-19ರ ನೀತಿಯ ರೀತ್ಯ ಸ್ಟ್ಯಾಂಪ್ ಡ್ಯೂಟಿ ವಿನಾಯಿತಿಗಳು, ಪ್ರವೇಶ ತೆರಿಗೆ ವಿನಾಯಿತಿಗಳು ಹಾಗೂ ವಿದ್ಯುತ್ ಟ್ಯಾರಿಫ್ ಮೇಲಿನ ತೆರಿಗೆ ವಿನಾಯಿತಿಗಳು, ಕಂದಾಯ, ಹಣಕಾಸು ಮತ್ತು ಇಂಧನ ಇಲಾಖೆಗಳು ಇದಕ್ಕೆ ಸಂಬಂಧಿಸಿದಂತೆ ಅಧಿಸೂಚನೆಗಳನ್ನು ನೀಡಿದ ನಂತರವೇ ಜಾರಿಗೆ ಬರುತ್ತವೆ.

ಜಿ) ಅನುಬಂಧ-2ರಲ್ಲಿ ಪಟ್ಟಿ ಮಾಡಲಾಗಿರುವ ಕೈಗಾರಿಕಾ ಚಟುವಟಿಕೆಗಳು/ಉದ್ಯಮಗಳು ಯಾವುದೇ ಸ್ಥಳದಲ್ಲಿದ್ದರೂ ಅವು ಯಾವುದೇ ಪ್ರೋತ್ಸಾಹಗಳಿಗೆ ಮತ್ತು ವಿನಾಯಿತಿಗಳಿಗೆ ಅರ್ಹವಾಗಿರುವುದಿಲ್ಲ.

ಹೆಚ್) ಉದ್ಯಮಗಳು ಕೈಗಾರಿಕಾ ಇಲಾಖೆಯ ಯಾವುದೇ ಒಂದು ನೀತಿಯಡಿ ಪ್ರೋತ್ಸಾಹಗಳು ಮತ್ತು ವಿನಾಯಿತಿಗಳನ್ನು ಪಡೆಯಬಹುದಾಗಿದೆ.

ಐ) ಹಣಕಾಸು ಸಂಸ್ಥೆಗಳು/ಬ್ಯಾಂಕುಗಳಿಂದ ಅರ್ಹ ಸ್ಥಿರಾಸ್ತಿಗಳ ಮೇಲೆ ಕನಿಷ್ಠ 50% ಅವಧಿ ಸಾಲಗಳನ್ನು ಪಡೆಯುವ ಉದ್ಯಮಗಳಿಗಾಗಿ ಮಾತ್ರ ಬಂಡವಾಳ ಉತ್ತೇಜನ ಸಹಾಯಧನವನ್ನು ನೀಡಲಾಗುತ್ತದೆ. ಇಂತಹ ಅರ್ಹ ಘಟಕಗಳು ವಾಣಿಜ್ಯ ಉತ್ಪಾದನೆ ಆರಂಭವಾದ ದಿನಾಂಕದ ಒಂದು ವರ್ಷದ ಒಳಗೆ ಬಂಡವಾಳ ಉತ್ತೇಜನ ಸಹಾಯಧನದ ಮಂಜೂರಾತಿಯನ್ನು ಕೋರಬಹುದಾಗಿದೆ.

ಜೆ) ತೆರಿಗೆ ಆಧಾರಿತ ಪ್ರೋತ್ಸಾಹಗಳನ್ನು ಪಡೆಯಲು, ಹಣಕಾಸು ಸಂಸ್ಥೆಗಳಿಂದ ಪಡೆಯುವ ಸಾಲ ಪ್ರಮಾಣದ ಮೇಲೆ ಯಾವ ನಿರ್ಬಂಧವೂ ಇರುವುದಿಲ್ಲ. ಸ್ವಂತವಾಗಿ ಹಣಕಾಸು ಪೂರೈಸಿಕೊಂಡ ಘಟಕಗಳು ಸಹ ತೆರಿಗೆ ಆಧಾರಿತ ಪ್ರೋತ್ಸಾಹಕಗಳಿಗೆ ಅರ್ಹವಾಗುತ್ತವೆ.

ಕೆ) ಹಣಕಾಸು ಸಂಸ್ಥೆಗಳು/ವಾಣಿಜ್ಯ ಬ್ಯಾಂಕುಗಳು ಅನುಮೋದಿಸುವ ಅರ್ಹ ಸ್ಥಿರಾಸ್ತಿಯ ಮೌಲ್ಯವು, ಬಂಡವಾಳ ಉತ್ತೇಜನ ಸಹಾಯಧನದ ಪ್ರಮಾಣವನ್ನು ಲೆಕ್ಕ ಹಾಕುವಲ್ಲಿ ಆಧಾರವಾಗಿರುತ್ತದೆ.

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು, ಸ್ಥಿರಾಸ್ತಿಗಳ ಅರ್ಹ ವಿವರಣೆ, ಪರೋಕ್ಷ ಆಸ್ತಿಗಳು ಹಾಗೂ ಪ್ರೋತ್ಸಾಹಗಳು ಮತ್ತು ರಿಯಾಯಿತಿಗಳಿಗೆ ಅರ್ಹವಾಗದ ಆಸ್ತಿಗಳನ್ನು ಗಮನದಲ್ಲಿಟ್ಟುಕೊಂಡು ಹಣಕಾಸು ಸಂಸ್ಥೆಗಳು/ವಾಣಿಜ್ಯ ಬ್ಯಾಂಕುಗಳು ನೀಡಬೇಕಾದ ಒಂದು ಪ್ರಮಾಣ ಪತ್ರದ ನಮೂನೆಯನ್ನು ನಿಗದಿ ಮಾಡುತ್ತದೆ.

ಎಲ್) ಯಾವುದೇ ಉದ್ಯಮದ ವಿಸ್ತರಣೆ/ವೈವಿಧ್ಯಕರಣ/ಆಧುನೀಕರಣಕ್ಕಾಗಿ ಬಂಡವಾಳಗಳನ್ನು ಲೆಕ್ಕ ಹಾಕುವಲ್ಲಿ ಸೃಷ್ಟಿಯಾಗುವ ಹೆಚ್ಚುವರಿ ಹೊಸ ಬಂಡವಾಳಗಳನ್ನು ಮಾತ್ರ ಪರಿಗಣಿಸಲಾಗುವುದು. ಈಗಾಗಲೇ ಸಹಾಯಧನ ಮಂಜೂರಾಗಿರುವ ಮೂಲ ಬಂಡವಾಳವನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ.

ಎಂ) ಲಭ್ಯವಿರುವ ಹಣಕಾಸು ಸಂಪನ್ಮೂಲಗಳ ಆಧಾರದ ರೀತ್ಯ, ಎಲ್ಲಾ ಉದ್ಯಮಗಳಿಗೆ ಎರಡರಿಂದ ನಾಲ್ಕು ಕಂತುಗಳಲ್ಲಿ ಬಂಡವಾಳ ಉತ್ತೇಜನ ಸಹಾಯಧನವನ್ನು ಮಂಜೂರು ಮಾಡಲಾಗುವುದು.

ಎನ್) ಎಂಎಸ್ಎಂಇಡಿ ಕಾಯ್ದೆ 2006 ಪ್ರಕಾರ, ಉತ್ಪಾದನಾ ಉದ್ಯಮಗಳನ್ನು ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳಾಗಿ (ಎಂಎಸ್ಎಂಇ), ಅವುಗಳು ಸ್ಥಾವರ ಮತ್ತು ಯಂತ್ರೋಪಕರಣದ ಮೇಲೆ ಹೂಡುವ ಬಂಡವಾಳದ ಆಧಾರದ ಮೇಲೆ ವರ್ಗೀಕರಿಸಿ ವಿವರಿಸಲಾಗಿದೆ;

ಈ ನೀತಿಯಡಿ ಪ್ರಕಟಿಸಲಾಗಿರುವ ಪ್ರೋತ್ಸಾಹಗಳು ಮತ್ತು ರಿಯಾಯಿತಿಗಳು ಎಂಎಸ್ಎಂಇನ ಈ ಪರಿಭಾಷೆಯಂತೆ ಲಭ್ಯವಿರುತ್ತದೆ ಹಾಗೂ ಕಾಲಕಾಲಕ್ಕೆ ಭಾರತ ಸರ್ಕಾರ ಮಾಡುವ ಪರಿಷ್ಕರಣೆಗೆ ಅನುಸಾರವಾಗಿ ಪರಿಷ್ಕರಣೆಯಾಗುತ್ತವೆ; ಅರ್ಹ ಪ್ರೋತ್ಸಾಹಗಳು ಮತ್ತು ರಿಯಾಯಿತಿಗಳು ಪರಿಭಾಷೆಯಲ್ಲಿ ಬದಲಾವಣೆ ತಂದ ದಿನಾಂಕದಿಂದ ಹೊಸ ಪರಿಭಾಷೆಯ ರೀತ್ಯ ಇರುತ್ತವೆ.

ಒ) ಮುಂದುವರೆದಂತೆ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮವೆಂದು ವರ್ಗೀಕರಣವಾಗದೆ ಇರುವ ಕೈಗಾರಿಕಾ ಘಟಕವನ್ನು ರಾಜ್ಯ ಸರ್ಕಾರ ಬೃಹತ್ ಮೆಗಾ, ಅಲ್ಟ್ರಾ ಮೆಗಾ ಉದ್ಯಮ ಮತ್ತು ಸೂಪರ್ ಮೆಗಾ ಉದ್ಯಮವೆಂದು ಅನುಬಂಧ-5ರ ಸಿ, ಡಿ, ಇ, ಎಫ್‌ದಲ್ಲಿ ವಿವರಿಸಿರುವಂತೆ ಬಂಡವಾಳದ ಆಧಾರದ ಮೇಲೆ ವರ್ಗೀಕರಿಸಿದೆ.

ಪಿ) ಈ ನೀತಿಯಡಿ ಪ್ರಕಟಿಸಲಾಗಿರುವ ಪ್ರೋತ್ಸಾಹಗಳು ಮತ್ತು ರಿಯಾಯಿತಿಗಳು ಬೃಹತ್ ಮೆಗಾ, ಅಲ್ಟ್ರಾ ಮೆಗಾ ಉದ್ಯಮ ಮತ್ತು ಸೂಪರ್ ಮೆಗಾ ಉದ್ಯಮವೆಂಬ ಪರಿಭಾಷೆಗಳನ್ವಯ ಲಭ್ಯವಿರುತ್ತದೆ ಹಾಗೂ ಕಾಲಕಾಲಕ್ಕೆ ಸರ್ಕಾರ ಮಾಡುವ ಪರಿಷ್ಕರಣೆಗೆ ಅನುಸಾರವಾಗಿ ಪರಿಷ್ಕರಣೆಯಾಗುತ್ತವೆ; ಅರ್ಹ ಪ್ರೋತ್ಸಾಹಗಳು ಮತ್ತು ರಿಯಾಯಿತಿಗಳು ಪರಿಭಾಷೆಯಲ್ಲಿ ಬದಲಾವಣೆ ತಂದ ದಿನಾಂಕದಿಂದ ಹೊಸ ಪರಿಭಾಷೆಯ ರೀತ್ಯ ಇರುತ್ತವೆ.

ಕ್ಯೂ) ವ್ಯಾಟ್ ಸಂಬಂಧಿತ ಪ್ರೋತ್ಸಾಹನೆಗಳು:

*(i)* *ವ್ಯಾಟ್ ಮತ್ತು ಸಿಎಸ್‌ಟಿ ಮೇಲೆ ಬಡ್ಡಿರಹಿತ ಸಾಲವೆಂದರೆ, ಅರ್ಹ ಉದ್ಯಮವು ಚಾಲ್ತಿಯಲ್ಲಿರುವ ವ್ಯಾಟ್ ಮತ್ತು ಸಿಎಸ್‌ಟಿಗಳನ್ನು ಕಟ್ಟಿದ ನಂತರವಾಗಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಿಂದ ಅರ್ಹ ನಿವ್ವಳ ವ್ಯಾಟ್ ಮತ್ತು ಸಿಎಸ್‌ಟಿಗಳ ಬಡ್ಡಿರಹಿತ ಸಾಲವನ್ನು ಕೋರಬೇಕು.*

*(ii)* *ವ್ಯಾಟ್ ಸಂಬಂಧಿತ ಪ್ರೋತ್ಸಾಹವನ್ನು, ಹೊಸ ಬಂಡವಾಳದಿಂದ ಉಂಟಾಗುವ ಉತ್ಪಾದನೆಯ ಮಾರಾಟಕ್ಕೆ ಮಾತ್ರ ಒದಗಿಸಲಾಗುವುದು.*

*(iii)* *ವ್ಯಾಟ್ ಸಂಬಂಧಿತ ಪ್ರೋತ್ಸಾಹವು, ರಾಜ್ಯದೊಳಗೆ ಅಂತಿಮ ಗ್ರಾಹಕರಿಗಾಗಿ ಉದ್ದೇಶಿತವಾದವನ್ನು ಮಾರಾಟಕ್ಕಾಗಿ ಮಾತ್ರ ಇರುತ್ತದೆ. ಒಂದು ಕೈಗಾರಿಕಾ ಘಟಕವು ರಾಜ್ಯದೊಳಗಿನ ಇತರ ಡೀಲರ್‌ಗಳಿಗೆ ಉತ್ಪನ್ನ ಮಾರಿ, ಅವರು ನಂತರ ಇವನ್ನು ಅಂತರ-ರಾಜ್ಯ ಮಾರಾಟ, ಸ್ಟಾಕ್ ವರ್ಗಾವಣೆ ಅಥವಾ ರಫ್ತು ಮಾರಾಟವಾಗಿ ಪರಿವರ್ತಿಸಿದಲ್ಲಿ, ಇದು ವ್ಯಾಟ್ ಸಂಬಂಧಿತ ಪ್ರೋತ್ಸಾಹಕ್ಕೆ ಅರ್ಹವಾಗುವುದಿಲ್ಲ.*

*(iv)* *ಇತರ ರಾಜ್ಯಗಳಿಂದ ಸರಕನ್ನು ಆಮದು ಮಾಡಿಕೊಂಡು ಅಥವಾ ಸರಕನ್ನು ವರ್ಗಾಯಿಸಿದ ಅಥವಾ ಖರೀದಿಸಿ ಈ ವೆಚ್ಚದ ಕನಿಷ್ಠ ಶೇ.25ರಷ್ಟು ಮೌಲ್ಯ ವರ್ಧನೆಯಿಲ್ಲದೆ ಮಾರಾಟ ಮಾಡಿದಲ್ಲಿ ಈ ನಿರ್ದಿಷ್ಟ ಮಾರಾಟವನ್ನು, ವ್ಯಾಟ್ ಪ್ರೋತ್ಸಾಹದ ವ್ಯಾಪ್ತಿಯಿಂದ ಹೊರಗಿಡಲಾಗುವುದು.*

*(v)* *ಜಿಎಸ್‌ಟಿ ಜಾರಿಯಾದಾಗ ಪ್ರಸ್ತುತವಾಗಿ ರಾಜ್ಯ ಸರ್ಕಾರಕ್ಕೆ ಸಂದಾಯವಾಗುತ್ತಿರುವ ಸಿಎಸ್‌ಟಿ ಅಥವಾ ಇತರ ಯಾವುದೇ ತೆರಿಗೆ ಅಥವಾ ತೆರಿಗೆ ದರದಲ್ಲಿನ ಬದಲಾವಣೆ ರದ್ದಾದಲ್ಲಿ, ಯಾವುದೇ ನಷ್ಟ ಪರಿಹಾರ ಪ್ರೋತ್ಸಾಹವನ್ನು ಒದಗಿಸಲಾಗುವುದಿಲ್ಲ. ಆದರೆ ಮೂಲತಃ ಅನುಮೋದಿಸಿದ ವ್ಯಾಪ್ತಿಯಂತೆ, ವ್ಯಾಟ್ ಸಂಬಂಧಿತ ಪ್ರೋತ್ಸಾಹವನ್ನು ಎಸ್‌ಜಿಎಸ್‌ಟಿ ಸಂಬಂಧಿತ ಪ್ರೋತ್ಸಾಹವಾಗಿ ಪರಿವರ್ತಿಸಲಾಗುವುದು.*

*(vi)* *ಯೋಜನಾ ಅನುಷ್ಠಾನದ ಆರಂಭದಿಂದ ಗರಿಷ್ಠ ಐದು ವರ್ಷಗಳ ಅವಧಿಯೊಳಗೆ ಮಾಡಲಾದ ಬಂಡವಾಳವನ್ನು ಪ್ರೋತ್ಸಾಹ ಪ್ಯಾಕೇಜ್‌ನ ಪ್ರಮಾಣ ಮತ್ತು ಅವಧಿಯನ್ನು ನಿರ್ಧರಿಸಲು ಪರಿಗಣಿಸಲಾಗುವುದು.*

ಆರ್) ಈ ನೀತಿಯಲ್ಲಿನ ವಿವಿಧ ಶೀರ್ಷಿಕೆಗಳಡಿ ಪ್ರಕಟಿಸಲಾಗಿರುವ ಪ್ರೋತ್ಸಾಹಗಳು ಮತ್ತು ವಿನಾಯಿತಿಗಳ ಒಟ್ಟಾರೆಯು ಹೈದರಾಬಾದ್-ಕರ್ನಾಟಕ ಪ್ರದೇಶದ ವಲಯ 1 ಮತ್ತು 2 ಕೂಡ ಸೇರಿದಂತೆ ಎಲ್ಲಾ ವಲಯಗಳಲ್ಲಿ (ಪ್ರತ್ಯೇಕ ಮಿತಿಯನ್ನು ನಿಗದಿಪಡಿಸಿರುವ ಆ್ಯಂಕರ್ ಕೈಗಾರಿಕೆಗಳ ಹೊರತುಪಡಿಸಿ) ಯಾವುದೇ ಹೊಸ ಘಟಕದಲ್ಲಿ ಅಥವಾ ನೀತಿಯ ಅವಧಿಯಲ್ಲಿ ಕೈಗೊಳ್ಳಲಾಗುವ ವಿಸ್ತರಣೆ / ಆಧುನೀಕರಣ / ವೈವಿಧ್ಯಕರಣದಲ್ಲಿ ಹೂಡುವ ಸ್ಥಿರಾಸ್ತಿ ಮೌಲ್ಯದ (ಎಫ್‌ಎ) ಶೇ.100%ಕ್ಕೆ ಸೀಮಿತವಾಗಿದೆ.

ಎಸ್) ಬಂಡವಾಳಗಳನ್ನು ಹಂತಗಳಲ್ಲಿ ಹೂಡುವುದನ್ನು ಎಸ್‌ಹೆಚ್‌ಎಲ್‌ಸಿಸಿ ಅನುಮೋದಿಸುವ ಅಲ್ಟ್ರಾ ಮೆಗಾ ಮತ್ತು ಸೂಪರ್ ಮೆಗಾ ಘಟಕಗಳಿಗಾಗಿ, ತೆರಿಗೆ ಸಂಬಂಧಿತ ಪ್ರೋತ್ಸಾಹಕವು, ಮೊದಲನೆಯ ಹಂತದ ವಾಣಿಜ್ಯ ಉತ್ಪಾದನೆ ಆರಂಭಗೊಳ್ಳುವ ದಿನಾಂಕದಿಂದ ಶುರುವಾಗುತ್ತದೆ ಮತ್ತು ಈ ಪ್ರೋತ್ಸಾಹಗಳು, ಮೊದಲನೆಯ ಹಂತದ ಬಂಡವಾಳಗಳಿಗೆ ಸಪ್ರಮಾಣದಲ್ಲಿರುತ್ತದೆ ಹಾಗೂ, ಮುಂದಿನ ಮಟ್ಟದಲ್ಲಿ ವಾಸ್ತವಿಕವಾಗಿ ಹೂಡಲಾಗುವ ಬಂಡವಾಳದ ಆಧಾರದ ಮೇಲೆ ಸ್ವಯಂ ಆಗಿ ಬದ್ಧಿಯಾಗುತ್ತವೆ.

ಇಂತಹ ಘಟಕಗಳಿಗಾಗಿ ಸ್ಥಾವರ ಮತ್ತು ಯಂತ್ರೋಪಕರಣದ ಮೇಲಿನ ಪ್ರವೇಶ ತೆರಿಗೆ ವಿನಾಯಿತಿಗಳು, ಪ್ರತಿ ಹಂತಕ್ಕಾಗಿ ಪ್ರತ್ಯೇಕವಾಗಿ ಲಭ್ಯವಿರುತ್ತವೆಯಾದರೂ, ಕಚ್ಚಾ ಸಾಮಗ್ರಿಗಳ ಮೇಲಿನ ಪ್ರವೇಶ ತೆರಿಗೆ ವಿನಾಯಿತಿಯನ್ನು ಮೊದಲ ಹಂತದ ವಾಣಿಜ್ಯ ಉತ್ಪಾದನೆಯ ಆರಂಭ ದಿನಾಂಕದಿಂದ ಮಾತ್ರ ಲೆಕ್ಕ ಹಾಕಲಾಗುವುದು.

ಟಿ) 2014-19ರ ಕೈಗಾರಿಕಾ ನೀತಿಯಡಿ ಪ್ರೋತ್ಸಾಹಗಳು ಮತ್ತು ರಿಯಾಯಿತಿಗಳನ್ನು ಪಡೆಯುವ ಘಟಕಗಳಿಗಾಗಿ ನಿರ್ಣಾಯಕ ಉದ್ಯೋಗ ಅವಕಾಶಕ್ಕೆ ಸಂಬಂಧಿಸಿದ ನಿಬಂಧನೆಗಳು:-

*(i)* *ಹೊಸದಾಗಿ ಕೈಗಾರಿಕಾ ಬಂಡವಾಳ ಹೂಡಿಕೆಯಾಗುವ ಎಲ್ಲಾ ಉದ್ಯಮಗಳು ಅತ್ಯಧಿಕ ಹೆಚ್ಚುವರಿ ಉದ್ಯೋಗಾವಕಾಶಗಳನ್ನು ಸೃಷ್ಟಿಸಿ, ಒಟ್ಟು ಉದ್ಯೋಗದ ಆಧಾರದ ಮೇಲೆ ಕನ್ನಡಿಗರಿಗೆ ಶೇಕಡ 70ರಷ್ಟನ್ನು ನೀಡಬೇಕು ಹಾಗೂ ಗುಂಪು-ಡಿ ಯಲ್ಲಿ ಶೇಕಡ 100ರಷ್ಟು ಒದಗಿಸಬೇಕು.*

*(ii)* *ಅನ್ವಯಿತವಾದೆಡೆ, ಮಹಿಳೆಯರಿಗಾಗಿ ಕಾರ್ಮಿಕ ಕಾಯ್ದೆಯ ಕಲಮುಗಳನ್ನು ಜಾರಿಗೊಳಿಸಬೇಕು.*

*(iii)* *ಕಂಪನಿಗಳು ಮಹಿಳಾ ಉದ್ಯೋಗಿಗಳಿಗೆ ಸಂರಕ್ಷಣೆಯನ್ನು ಒದಗಿಸಿ, ಕಾರ್ಯ ಸ್ಥಳದಲ್ಲಿ ಮಹಿಳೆಯರ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ ಸುರಕ್ಷಣೆ ಮತ್ತು ಪರಿಹಾರ) ಕಾಯ್ದೆ, 2013ರ ಕಲಮುಗಳನ್ನು ಯಥಾರ್ಥವಾಗಿ ಪಾಲಿಸಬೇಕು.*

*(iv)* *ಕನ್ನಡಿಗರಿಗೆ ಉದ್ಯೋಗ ನೀಡುವ ವಿಚಾರದಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರವು ಐದು ವರ್ಷಗಳವರೆಗೆ ಮೇಲ್ವಿಚಾರಣೆ ಮಾಡುವುದು. ಮೇಲೆ ತಿಳಿಸಿದಂತೆ ಕನ್ನಡಿಗರಿಗೆ ಉದ್ಯೋಗ ಕೊಡುವುದಕ್ಕೆ ತಪ್ಪಿದಾಗ ವಿಷಯವನ್ನು ಸಂಬಂಧಪಟ್ಟ ಡಿಎಲ್ಎಸ್‌ಡಬ್ಲ್ಯುಸಿಸಿ, ಎಸ್ಎಲ್ಎಸ್‌ಡಬ್ಲ್ಯುಸಿಸಿ ಮತ್ತು ಎಸ್‌ಹೆಚ್ಎಲ್‌ಸಿಸಿಗೆ ವರದಿ ಮಾಡಲಾಗುವುದು ಮತ್ತು ಇವು ಘಟಕಕ್ಕೆ ನೀಡಲಾದ ಪ್ರೋತ್ಸಾಹ ಮತ್ತು ವಿನಾಯಿತಿಗಳನ್ನು ಹಿಂದಕ್ಕೆ ಪಡೆಯುವಂತೆ ಶಿಫಾರಸು ಮಾಡಬಹುದಾಗಿದೆ.*

ಯು) ಉತ್ಪಾದನಾ ಘಟಕಗಳು, 2013ರ ಕಂಪನಿಗಳ ಕಾಯ್ದೆಯ ಸೆಕ್ಷನ್ 35 ರೀತ್ಯ ಕಾರ್ಪೋರೇಟ್ ಸಾಮಾಜಿಕ ಜವಾಬ್ದಾರಿಯ (ಸಿಎಸ್ಆರ್) ಕಟ್ಟಳೆಗಳನ್ನು ಪರಿಪಾಲಿಸಬೇಕು.

ವಿ) ಎಸ್ಎಫ್‌ಸಿಗಳ ಕಾಯ್ದೆ ಸೆಕ್ಷನ್ 29, ಸರ್ಫೇಸಿ ಕಾಯ್ದೆ ಅಥವಾ ಇತರ ಯಾವುದೇ ಕಾಯ್ದೆಗಳಡಿ ಯಾವುದೇ ಹಣಕಾಸು ಸಂಸ್ಥೆ /ಬ್ಯಾಂಕ್‌ನಿಂದ ಪಡೆದ ಭೂಮಿ, ಕಟ್ಟಡ, ಕಾರ್ಯಾಗಾರ ಮತ್ತು ಯಂತ್ರೋಪಕರಣಗಳ ಮೇಲೆ ಯಾವುದೇ ಪ್ರಸಕ್ತ/ಹೊಸ ಘಟಕ/ಉದ್ಯಮ/ಪಾಲುದಾರಿಕೆ ಸಂಸ್ಥೆಯು ಹೂಡುವ ಬಂಡವಾಳಗಳು ಯಾವುದೇ ಬಂಡವಾಳ ಪ್ರೋತ್ಸಾಹ ಸಹಾಯಧನಕ್ಕೆ ಅರ್ಹವಾಗುವುದಿಲ್ಲ. ಆದರೆ ಈ ಷರತ್ತು ತೆರಿಗೆ ಆಧಾರಿತ ಪ್ರೋತ್ಸಾಹಗಳಿಗೆ ಅನ್ವಯಿಸುವುದಿಲ್ಲ (ಅಂದರೆ ಪ್ರಮೋಟರ್‌ಗಳು ಸ್ವಾಧೀನದ ನಂತರ ವಿಸ್ತರಣೆ, ಆಧುನೀಕರಣ, ವೈವಿಧ್ಯಕರಣ ಅಥವಾ ಕೈಗಾರಿಕೆಯ ಪುನರುಜ್ಜೀವನವನ್ನು ಕೈಗೊಂಡಲ್ಲಿ).

ಡಬ್ಲ್ಯು) ಕೈಗಾರಿಕಾ ನೀತಿ 2009-14 ಹಾಗೂ ಸಮಗ್ರ ಕೃಷಿ ವ್ಯಾಪಾರ ಅಭಿವೃದ್ಧಿ ನೀತಿ 2011 ರೀತ್ಯ ಕೃಷಿ ಆಧಾರಿತ ಕೈಗಾರಿಕೆಗಳಿಗೆ ಎಪಿಎಂಸಿ ಸೆಸ್ ರದ್ಧತಿಯನ್ನು ಮಾಡುವಲ್ಲಿ ಇರುವ ಅಸಮಂಜಸತೆಯನ್ನು ತೆಗೆದು ಹಾಕುವುದು.

ಕೈಗಾರಿಕಾ ನೀತಿ 2009-14 ಮತ್ತು ಸಮಗ್ರ ಕೃಷಿ ವ್ಯಾಪಾರ ಅಭಿವೃದ್ಧಿ ನೀತಿ-2011 ಗಳೆರಡರ ಅಡಿಯಲ್ಲಿ ಕೃಷಿ ಆಧಾರಿತ ಕೈಗಾರಿಕೆಗಳಿಗೆ ಎಪಿಎಂಸಿ ಸೆಸ್ ರದ್ದತಿ ಸೌಲಭ್ಯವನ್ನು ಒದಗಿಸಲಾಗಿತ್ತು.

ಕೈಗಾರಿಕಾ ನೀತಿ 2009-14, ವಲಯ-1, 2 ಮತ್ತು 3ರಲ್ಲಿರುವ ಅರ್ಹ ಕೈಗಾರಿಕೆಗಳಿಗೆ ಅನುಕ್ರಮವಾಗಿ 5, 4 ಮತ್ತು 3 ವರ್ಷಗಳ ಅವಧಿಗಾಗಿ ಎಪಿಎಂಸಿ ಸೆಸ್ ರದ್ಧತಿಯನ್ನು ಒದಗಿಸಿದೆ.

ಸಮಗ್ರ ಕೃಷಿ ವ್ಯಾಪಾರ ಅಭಿವೃದ್ಧಿ ನೀತಿ-2011, ಯಾವುದೇ ಪ್ರಾಂತೀಯ ನಿರ್ಬಂಧನೆಗಳಿಲ್ಲದೇ ರಾಜ್ಯದಾದ್ಯಂತ 10 ವರ್ಷಗಳವರೆಗೆ ಅರ್ಹ ಕೈಗಾರಿಕೆಗಳಿಗಾಗಿ ಎಪಿಎಂಸಿ ಸೆಸ್ ರದ್ಧತಿಯನ್ನು ಅನುವು ಮಾಡಿಕೊಟ್ಟಿದೆ.

ಈ ಎರಡೂ ನೀತಿಗಳಡಿ ವಿನಾಯಿತಿಗಳನ್ನು ನೀಡಲು ಡಿಐಸಿಗಳಲ್ಲಿನ ಜಂಟಿ ನಿರ್ದೇಶಕರು ಕೇಂದ್ರ ಅಧಿಕಾರಿಗಳಾಗಿದ್ದರು.

ಎಪಿಎಂಸಿ ಕಾಯ್ದೆಯು ತಿದ್ದುಪಡಿಯಾದ ನಂತರ ಮೇಲಿನ ನೀತಿಗಳನ್ನು ಸಾಧ್ಯವಾಗಿಸುವ ಸರ್ಕಾರಿ ಆಜ್ಞೆಗಳನ್ನು ಅನುಕ್ರಮವಾಗಿ ಏಪ್ರಿಲ್ 6, 2011 ಮತ್ತು ಮಾರ್ಚ್ 16, 2013ರಂದು ನೀಡಲಾಯಿತು.

ಏಪ್ರಿಲ್ 6, 2011 ಮತ್ತು ಮಾರ್ಚ್ 16, 2013ರ ನಡುವೆ ಉತ್ಪಾದನೆಯನ್ನು ಆರಂಭಿಸಿದ ಕೃಷಿ ಆಧಾರಿತ ಕೈಗಾರಿಕೆಗಳು ಕೈಗಾರಿಕಾ ನೀತಿಯಡಿ ಡಿಐಸಿಗಳ ಜಂಟಿ ನಿರ್ದೇಶಕರಿಂದ ಎಪಿಎಂಸಿ ಸೆಸ್ ರದ್ಧತಿ ಪ್ರಮಾಣ ಪತ್ರಗಳನ್ನು ಪಡೆದಿವೆ. ಆದರೆ ಎಪಿಎಂಸಿ ಕಾಯ್ದೆ ತಿದ್ದುಪಡಿಯಾಗಿರದಿದ್ದಲ್ಲಿ ಈ ಕೈಗಾರಿಕೆಗಳು ಸೈದ್ಧಾಂತಿಕವಾಗಿ ಸಮಗ್ರ ಕೃಷಿ ವ್ಯಾಪಾರ ನೀತಿಯಡಿ ಹೆಚ್ಚಿನ ಅವಧಿಗಾಗಿ ವಿನಾಯಿತಿಗಳನ್ನು ಪಡೆಯಲು ಅರ್ಹವಾಗುತ್ತಿದ್ದವು.

ಕೈಗಾರಿಕಾ ನೀತಿ 2009–14ರಡಿ ಎಪಿಎಂಸಿ ಸೆಸ್ ವಿನಾಯಿತಿಗಳನ್ನು ಪಡೆದ ಘಟಕಗಳಿಗೆ, ಸಮಗ್ರ ಕೃಷಿ ವ್ಯಾಪಾರ ನೀತಿ–2011 ರೀತ್ಯಾ ಬಾಕಿ ಅವಧಿಗೆ ಪರಿಷ್ಕೃತ ಎಪಿಎಂಸಿ ಸೆಸ್ ರದ್ಧತಿ ಪ್ರಮಾಣ ಪತ್ರಗಳನ್ನು ನೀಡಲು ಜಿಲ್ಲಾ ಕೈಗಾರಿಕಾ ಕೇಂದ್ರಗಳ ಜಂಟಿ ನಿರ್ದೇಶಕರುಗಳಿಗೆ ಅನುಮತಿ ನೀಡಲಾಗಿದೆ. ಆದರೆ ಈ ವಿನಾಯಿತಿಯ ಒಟ್ಟಾರೆ ಅವಧಿಯು 10 ವರ್ಷಗಳನ್ನು ಮೀರದಂತೆ ಆಯಾ ಜಂಟಿ ನಿರ್ದೇಶಕರು ಖಚಿತಪಡಿಸಿಕೊಳ್ಳಬೇಕು.

ಎಕ್ಸ್) ಈ ಪ್ರೋತ್ಸಾಹಕಗಳು ಮತ್ತು ವಿನಾಯಿತಿಗಳನ್ನು ಕಾರ್ಯಗತಗೊಳಿಸುವ ಪ್ರತ್ಯೇಕ ಕಾರ್ಯಸೂಚಿಗಳನ್ನು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಡಿ ಸ್ಥಾಪಿಸಲಾಗಿರುವ ರಾಜ್ಯ ಮಟ್ಟದ ಸಮನ್ವಯ ಸಮಿತಿಯ ಅನುಮೋದನೆಯೊಂದಿಗೆ ಆಯಾ ಸಂಸ್ಥೆಗಳು ಮತ್ತು ಅಧಿಕಾರಿಗಳ ಮಾರ್ಗದರ್ಶನಕ್ಕಾಗಿ ನೀಡಲಾಗುವುದು.

ವೈ) ರಾಜ್ಯಮಟ್ಟದ ಸಮನ್ವಯ ಸಮಿತಿಯು ಈ ನೀತಿಯಲ್ಲಿ ವಿವರಿಸಿರುವ ನೀತಿ ಕ್ರಮಗಳು, ಪ್ರೋತ್ಸಾಹಗಳು ಮತ್ತು ವಿನಾಯಿತಿಗಳ ಅರ್ಥ ವಿವರಣೆ ನೀಡುವ ಅಧಿಕಾರ ಹೊಂದಿದೆ ಮತ್ತು ಅದರ ನಿರ್ಣಯ ಅಂತಿಮವಾಗಿರುತ್ತದೆ.

ಅನುಬಂಧ 3 ಬಿ

## ಖಾಸಗಿ ಕೈಗಾರಿಕಾ ಪ್ರದೇಶ/ವಸಾಹತುಗಳಿಗೆ ಸಂಬಂಧಿಸಿದಂತೆ ಷರತ್ತು ಮತ್ತು ನಿಬಂಧನೆಗಳು

1. ಖಾಸಗಿ ಕೈಗಾರಿಕಾ ಪ್ರದೇಶ / ವಸಾಹತು ಸ್ಥಾಪನೆಯನ್ನು ಕೆಳಕಂಡವರು ಕೈಗೊಳ್ಳಬಹುದಾಗಿದೆ.

   ಎ) ಖಾಸಗಿ ವ್ಯಕ್ತಿಗಳು, ಕಂಪನಿಗಳು, ಸಹಕಾರಿ ಸಂಘ ಸಂಸ್ಥೆಗಳ ಮೂಲಕ

   ಬಿ) ಸಾರ್ವಜನಿಕ-ಖಾಸಗಿ ಪಾಲುಗಾರಿಕೆ ಮೂಲಕ

   ಸಿ) ರಾಜ್ಯ ಸರ್ಕಾರ ಮತ್ತೊಂದು ಸರ್ಕಾರದ ಸಹಯೋಗದೊಂದಿಗೆ

2. ಖಾಸಗಿ ಕೈಗಾರಿಕಾ ಪ್ರದೇಶಗಳು/ವಸಾಹತುಗಳು ಅಭಿವೃದ್ಧಿಗಾಗಿ ಪ್ರಸ್ತಾವನೆಗಳನ್ನು ಕೈಗಾರಿಕಾ ಮೂಲಭೂತವ್ಯವಸ್ಥೆ ಯೋಜನೆಗಳೆಂದು ಪರಿಗಣಿಸಲಾಗುವುದು ಮತ್ತು ಬಂಡವಾಳದ ಆಧಾರದ ರೀತ್ಯ, ಎಸ್‌ಎಲ್‌ಎಸ್‌ಡಬ್ಲ್ಯೂಸಿಸಿ ಅಥವಾ ಎಸ್‌ಹೆಚ್‌ಎಲ್‌ಸಿಸಿಯು, ಕರ್ನಾಟಕ ಕೈಗಾರಿಕಾ (ಫೆಸಿಲಿಟೇಶನ್) ಕಾಯ್ದೆಗೆ ಅನುಗುಣವಾಗಿ ಅನುಮೋದನೆ ನೀಡುತ್ತದೆ.

3. ಈ ನೀತಿ ಹೈದರಾಬಾದ್-ಕರ್ನಾಟಕಯೇತರ ವಲಯ 4ಕ್ಕೆ ಅನ್ವಯವಾಗುವುದಿಲ್ಲ.

4. ಭೂಮಿಯ ಕನಿಷ್ಠ ವಿಸ್ತೀರ್ಣ 100 ಎಕರೆಗಳಾಗಿರುತ್ತವೆ.

5. ಕೈಗಾರಿಕಾ ಪ್ರದೇಶ/ನಿವೇಶನದ ಅಭಿವೃದ್ಧಿಯು, ಸ್ಥಳೀಯ ಎಲ್‌ಪಿಎ ಅಥವಾ ಕೆಟಿಸಿಪಿ ಕಾಯ್ದೆ ಅಥವಾ ಆಚರಣೆಯಲ್ಲಿರುವ ಇತರವುಗಳ ವಲಯ-ಕಟ್ಟಳೆಗಳಿಗೆ ಒಳಪಡುತ್ತದೆ. ಕೈಗಾರಿಕಾ ಸೈಟುಗಳಲ್ಲಿ ಕಟ್ಟಡ ನಕ್ಷೆಗಳನ್ನು ಕೆಐಎಡಿಬಿ/ಸಂಬಂಧಪಟ್ಟ ಸ್ಥಳೀಯ ಅಧಿಕಾರಿಗಳು ಅನುಮೋದಿಸುತ್ತಾರೆ.

6. ಮೂಲ ಸೌಕರ್ಯಗಳನ್ನು ಸೂಕ್ತ ಬೆಲೆಗಳಲ್ಲಿ ಒದಗಿಸುವುದನ್ನು ಸಾಧ್ಯವಾಗಿಸಲು, ಡೆವಲಪರ್‌ಗಳು, ಬೆಲೆ ನಿಗದಿಗಾಗಿ ಒಂದು ವೈಜ್ಞಾನಿಕ ಪದ್ಧತಿಯನ್ನು ಅನುಸರಿಸಬೇಕು.

7. ಖಾಸಗಿ ಕೈಗಾರಿಕಾ ಪ್ರದೇಶಗಳ ಡೆವಲಪರ್‌ಗಳು, ಎಮ್‌ಒಇಎಫ್‌ನ ಸೈಟಿಂಗ್ ಗೈಡ್ ಲೈನ್ಸ್‌ಗಳನ್ನು ಪಾಲಿಸತಕ್ಕದ್ದು.

8. ವೇಳಾಪಟ್ಟಿಯ ಅನುಸಾರ, ಯೋಜನೆಯನ್ನು ಅನುಷ್ಠಾನಕ್ಕೆ ತರದಿದ್ದಲ್ಲಿ, ಯೋಜನಾ ಪ್ರತಿಪಾದಕರು, ನೀತಿಯಡಿ ಪಡೆದ ಎಲ್ಲಾ ಹಣಕಾಸು ಪ್ರಯೋಜನಗಳನ್ನು ಸರ್ಕಾರಕ್ಕೆ ಮರುಪಾವತಿಸಬೇಕು.

9. ಅನುಷ್ಠಾನವಾಗದಿದ್ದಲ್ಲಿ, ಖಾಸಗಿ ಕೈಗಾರಿಕಾ ಪ್ರದೇಶಗಳು/ವಸಾಹತುಗಾಗಿ ಹಂಚಿಕೆ ಮಾಡಲಾಗುವ ಸರ್ಕಾರಿ ಭೂಮಿಯನ್ನು ಮತ್ತೆ ವಶಪಡಿಸಿಕೊಳ್ಳಲಾಗುವುದು.

# ರಫ್ತು ಉತ್ತೇಜನಾ ಪ್ರೋತ್ಸಾಹಗಳು

## ರಫ್ತು ಉತ್ತೇಜನಾ ಕ್ರಮಗಳು

**ರಫ್ತಿಗಾಗಿ ಮೂಲ ಸೌಲಭ್ಯಗಳನ್ನು ಕಲ್ಪಿಸುವುದು**

- ಪಿಪಿಪಿ ನಮೂನೆಯಡಿ ಜಾರಿಗೆತರಲು ವೈಯಾಬಿಲಿಟಿ ಗ್ಯಾಪ್ ಫಂಡಿಂಗ್ (ವಿಜಿಎಫ್) ಒದಗಿಸುವುದು
- ಮೂಲಸೌಕರ್ಯಗಳ ಅಭಿವೃದ್ಧಿಯನ್ನು ಕಡ್ಡಾಯವಾಗಿ ಕೈಗೊಳ್ಳಬೇಕಾದ ಸರ್ಕಾರಿ ಇಲಾಖೆಗಳು/ಸಂಸ್ಥೆಗಳು , ತಮ್ಮ ವಾರ್ಷಿಕ ಬಜೆಟ್‌ನ ಒಂದು ನಿಗದಿತ ಶೇಕಡಾವಾರು ಪ್ರಮಾಣವನ್ನು, ರಫ್ತು ಉತ್ತೇಜಿಸುವ ಅತ್ಯಗತ್ಯ ಮೂಲಸೌಕರ್ಯಗಳ ರಚನೆಗಾಗಿ ಮುಡಿಪಾಗಿಡಬೇಕು.
- ಇನ್‌ಲ್ಯಾಂಡ್ ಕಂಟೇನರ್ ಡಿಪೋಗಳು, ಕಂಟೇನರ್ ಫ್ರೈಟ್ ಸ್ಟೇಷನ್‌ಗಳು, ಲಾಜಿಸ್ಟಿಕ್ ಪಾರ್ಕ್‌ಗಳು, ಪೂರ್ವ ಮತ್ತು ನಂತರದ ಹಾರ್ವೆಸ್ಟ್ ತಂತ್ರ ಜ್ಞಾನ ಕೇಂದ್ರಗಳು, ವೇರ್‌ಹೌಸಿಂಗ್ ಮತ್ತು ಇತರ ಮೂಲಸೌಕರ್ಯಗಳನ್ನು ಪಿಪಿಪಿ ನಮೂನೆಯ ಮೂಲಕ ಅಭಿವೃದ್ಧಿಪಡಿಸಲು ಖಾಸಗಿ ಭಾಗವಹಿಸುವಿಕೆಯನ್ನು ಉತ್ತೇಜಿಸಲಾಗುವುದು.
- ಮೂಲಸೌಕರ್ಯಗಳು, ಆರ್ ಅಂಡ್ ಡಿ ಕೇಂದ್ರ, ತರಬೇತಿ ಕೇಂದ್ರ ಮತ್ತು ಪರೀಕ್ಷಾ ಕೇಂದ್ರಗಳನ್ನು ರಫ್ತು ವೃದ್ಧಿಗಾಗಿ ಅಭಿವೃದ್ಧಿಪಡಿಸುವಂತೆ ವ್ಯಾಪಾರ ಮತ್ತು ಕೈಗಾರಿಕಾ ಸಂಸ್ಥೆಗಳನ್ನು ಹುರಿದುಂಬಿಸಲಾಗುವುದು .
- ಮುಖ್ಯ ಮಾರ್ಗಗಳ ಹಡಗುಗಳಿಗೆ ಸರಕನ್ನು ರವಾನಿಸುವತ್ತ ನೆರವಾಗಲು, ಸಾಗಣೆ ಬಂದರುಗಳ ಸಮೀಪ ರಫ್ತುದಾರರಿಗಾಗಿ ಸಾಗರೋತ್ತರ ಮಳಿಗೆ ಸೌಕರ್ಯಗಳನ್ನು ಕಲ್ಪಿಸಬೇಕೆಂದು ಖಾಸಗಿ ಭಾಗವಹಿಸುವಿಕೆ, ರಫ್ತು ಪ್ರೋತ್ಸಾಹಕ ಮಂಡಳಿಗಳು, ವ್ಯಾಪಾರ ಕ್ಷೇತ್ರ , ಕೈಗಾರಿಕಾ ಸಂಸ್ಥೆಗಳನ್ನು ಹುರಿದುಂಬಿಸಲಾಗುವುದು.
- ರಫ್ತಿಗೆ ಅನುಕೂಲ ಮಾಡಿಕೊಡಲು, ಪ್ರಸಕ್ತ ಬಂದರುಗಳ ಸಾಮರ್ಥ್ಯವನ್ನು ಬಲಪಡಿಸಲಾಗುವುದು.
- ವಿಭಿನ್ನ ಆಮದು ಮತ್ತು ರಫ್ತು ಸರಕುಗಳನ್ನು ನಿರ್ವಹಿಸುವ ಸಾಮರ್ಥ್ಯ ರಚನೆಗಾಗಿ ಕಿರು ಬಂದರುಗಳನ್ನು ಆದ್ಯತೆಯಾಗಿ ಅಭಿವೃದ್ಧಿಪಡಿಸಲಾಗುವುದು.
- ರಫ್ತುದಾರರ ಬೇಡಿಕೆಗಳನ್ನು ಪೂರೈಸಲು , ಬೆಂಗಳೂರು ಏರ್ ಕಾರ್ಗೋ ಸಮುಚ್ಚಯ ಮತ್ತು ಮಂಗಳೂರು ಏರ್‌ಕಾರ್ಗೋ ಸಮುಚ್ಚಯಗಳನ್ನು ಬಲಪಡಿಸಿ, ಸೌಲಭ್ಯಗಳನ್ನು ಆಧುನೀಕರಿಸಲಾಗುವುದು.
- ಸರಕುಗಳನ್ನು ಶೀಘ್ರವಾಗಿ ಬಂದರುಗಳಿಗೆ ರವಾನಿಸಲು, ಕರ್ನಾಟಕದಲ್ಲಿ ರೈಲ್ವೇ ಕಾರ್ಯಜಾಲವನ್ನು ಬಲಪಡಿಸಲಾಗುವುದು.
- ರಾಜ್ಯದ ಪ್ರಮುಖ ವ್ಯಾಪಾರ ಕೇಂದ್ರಗಳು ಮತ್ತು ಬಂದರುಗಳ ನಡುವೆ ಸಂಚಾರ ಸಂಪರ್ಕವನ್ನು ಹೆಚ್ಚಿಸಲು ಪಿಪಿಪಿ ಆಧಾರದ ಮೇಲೆ ಹೊಸ ರೈಲ್ವೇ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕೆಂದು ರಾಜ್ಯವು ಕೇಂದ್ರ ಸರ್ಕಾರವನ್ನು ಆಗ್ರಹಪಡಿಸುತ್ತದೆ.

**ಎಸ್‌ಇಜೆಡ್ ಗಳಿಗೆ ಪ್ರೋತ್ಸಾಹ**

- ಕೇಂದ್ರ/ರಾಜ್ಯ ಎಸ್‌ಇಜೆಡ್ ನೀತಿಯಡಿ ಲಭ್ಯವಿರುವ ಸೂತ್ರಗಳನ್ನು ಒಗ್ಗೂಡಿಸಿ, ರಾಜ್ಯದಲ್ಲಿ ಬಹು-ಉತ್ಪನ್ನ ಮತ್ತು ವಲಯ- ನಿರ್ದಿಷ್ಟ ಎಸ್ ಇಜೆಡ್ ಗಳ ಅಭಿವೃದ್ಧಿಯನ್ನು ಉತ್ತೇಜಿಸಲಾಗುವುದು.

**ಐಸಿಡಿಗಳು ಮತ್ತು ಸಿಎಫ್ ಎಸ್ ಗಳ ಅಭಿವೃದ್ಧಿಗೆ ಉತ್ತೇಜನ**

- ಸರಾಗವಾದ ರಫ್ತನ್ನು ಖಚಿತಪಡಿಸಿಕೊಳ್ಳಲು, ಪ್ರಸಕ್ತ ಐಸಿಡಿಗಳು ಮತ್ತು ಸಿಎಫ್ ಎಸ್‌ಗಳಿಗೆ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸಿ, ಆಧುನೀಕರಿಸಲಾಗುವುದು.
- ರಫ್ತನ್ನು ಸುಗಮಗೊಳಿಸಲು, ಸಮೂಹಗಳಲ್ಲಿ ಮತ್ತು ಸಾಮರ್ಥ್ಯ-ಸಾಧ್ಯ ಜಿಲ್ಲೆಗಳ ಪ್ರಮುಖ ಕೈಗಾರಿಕಾ ಪ್ರದೇಶಗಳಲ್ಲಿ ಐಸಿಡಿಗಳು/ ಸಿಎಫ್ ಎಸ್ ಗಳು ಮತ್ತು ಲಾಜಿಸ್ಟಿಕ್ ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸಲಾಗುವುದು.
- ವೈಯಾಬಿಲಿಟಿ ಗ್ಯಾಪ್ ಫಂಡ್‌ನೊಂದಿಗೆ ಪಿಪಿಪಿ ನಮೂನೆಯಡಿ ಐಸಿಡಿಗಳು ಮತ್ತು ಸಿಎಫ್‌ಎಸ್‌ಗಳ ಸ್ಥಾಪನೆಯನ್ನು ಉತ್ತೇಜಿಸಲಾಗುವುದು.
- ಎಮ್‌ಎಸ್‌ಎಮ್‌ಇಗಳು ಪೂರ್ತಿ ಕಂಟೇನರ್ ಲೋಡನ್ನು ಬಳಸುವ ಪ್ರಮೇಯ ಇಲ್ಲದೇ, ಸಾಮಾನ್ಯವಾಗಿ ಕಿರು ಪ್ರಮಾಣಗಳನ್ನು ಹಡಗಿನ ಮೂಲಕ ರವಾನಿಸುವುದರಿಂದ, ಇಂತಹ ರಫ್ತುದಾರರಿಗೆ ನೆರವಾಗಲು, ಸಾಮರ್ಥ್ಯ-ಸಾಧ್ಯ ಸ್ಥಳಗಳಲ್ಲಿ ಸಿಎಫ್ ಎಸ್ ಸೌಕರ್ಯಗಳನ್ನು ಪ್ರೋತ್ಸಾಹಿಸಲಾಗುವುದು.

ನಿರ್ದಿಷ್ಟ ವಲಯಗಳಿಗಾಗಿ ಮೂಲ ಸೌಕರ್ಯಗಳ ಅಭಿವೃದ್ಧಿ :

**ಕೃಷಿ ಮತ್ತು ಆಹಾರ ಸಂಸ್ಕರಣಾ ವಲಯ**

- ಆಹಾರ ಪಾರ್ಕ್‌ಗಳು/ಕೃಷಿ ವಿಶೇಷ ವಲಯಗಳು/ಕೃಷಿ ಲಾಜಿಸ್ಟಿಕ್ಸ್ ಪಾರ್ಕ್‌ಗಳು/ಕಾರಿಡಾರ್‌ಗಳ ಸ್ಥಾಪನೆಯನ್ನು ರಾಜ್ಯದ ವಿಭಿನ್ನ ನಿವೇಶನಗಳಲ್ಲಿ ಪ್ರೋತ್ಸಾಹಿಸಲಾಗುವುದು. ಈ ಪಾರ್ಕ್‌ಗಳು ಕೊಯ್ಲು ಪೂರ್ವ ಮತ್ತು ನಂತರದ ತಂತ್ರಜ್ಞಾನ , ಶೀತಲ ಸರಣಿ, ಉಷ್ಣಾಂಶ ನಿಯಂತ್ರಿತ ಮಳಿಗೆಗಳು ಮತ್ತು ರೆಫ್ರಿಜರೇಟೆಡ್ ರವಾನೆ/ ರೀಫರ್ ಟ್ರಕ್‌ಗಳು ಮುಂತಾಗಿ, ಸಂಗ್ರಹಣೆ ಮತ್ತು ರವಾನೆಯ ಸಮಯದಲ್ಲಿ ನಷ್ಟವನ್ನು ಕಡಿಮೆ ಮಾಡುವ ಎಲ್ಲಾ ಅಗತ್ಯ ಮೂಲಸೌಕರ್ಯಗಳನ್ನು ಹೊಂದಿರುತ್ತವೆ.
- ಹಣ್ಣು ಮತ್ತು ತರಕಾರಿ ಬೆಳೆಯುವ ಪ್ರದೇಶಗಳು ಮತ್ತು ಬಂದರುಗಳು ಹಾಗೂ ರಾಷ್ಟ್ರೀಯ/ರಾಜ್ಯ ಹೆದ್ದಾರಿಗಳ ನಡುವೆ ಉತ್ತಮ ಸಂಚಾರ ಸಂಪರ್ಕವನ್ನು ಒದಗಿಸಿ, ಸರಕುಗಳ ರವಾನೆಯನ್ನು ಸರಾಗಗೊಳಿಸುವ ವ್ಯವಸ್ಥೆಯನ್ನು ಬೆಂಬಲಿಸಲು ಉದ್ದೇಶಿಸಲಾಗಿದೆ.
- ಕಾಲಕ್ಕೆ ತಕ್ಕಂತೆ ರೈತರಿಗೆ ವಿಶ್ವಾಸಾರ್ಹ ಕಾರ್ಯಜಾಲ ಕುರಿತ ಮಾಹಿತಿಗಾಗಿ ವಾಸ್ತವಿಕ ಮಾರುಕಟ್ಟೆ ಸಮಾಚಾರ ವರದಿಗಳನ್ನು ಒದಗಿಸಲಾಗುವುದು.
- ಪ್ಯಾಕೇಜಿಂಗ್ ವೆಚ್ಚವನ್ನು ತಗ್ಗಿಸಲು ಆಧುನಿಕ ಪ್ಯಾಕೇಜಿಂಗ್ ತಂತ್ರಜ್ಞಾನಕ್ಕೆ ಇಂಬು ನೀಡಲಾಗುವುದು. ಇದಕ್ಕೆ ಸಂಬಂಧಪಟ್ಟಂತೆ ಭಾರತೀಯ ಪ್ಯಾಕೇಜಿಂಗ್ ಸಂಸ್ಥೆಯ ಒಂದು ಶಾಖೆಯ ಸ್ಥಾಪನೆಯನ್ನು ರಾಜ್ಯ ಬೆಂಬಲಿಸುತ್ತದೆ.
- ಗೆರ್ಕಿನ್ (ಸೌತೆಕಾಯಿ), ಪುಷ್ಪ ಉದ್ಯಮ ಮತ್ತು ರೋಸ್ ಈರುಳ್ಳಿಗಳ ರಫ್ತಿನಲ್ಲಿ ರಾಜ್ಯವು ಹೆಸರು ಗಳಿಸಿರುವುದರಿಂದ, ರಫ್ತು ಯೋಗ್ಯ ಗುಣಮಟ್ಟದ ಉತ್ಪಾದನೆಗಾಗಿ ಈ ವಲಯಕ್ಕೆ ಅಗತ್ಯ ಬೆಂಬಲವನ್ನು ನೀಡಲಾಗುವುದು.
- ಸಾಮರ್ಥ್ಯಸಾಧ್ಯ ಸ್ಥಳಗಳಲ್ಲಿ ಸಾಂಬಾರ್ ಪದಾರ್ಥ ಪಾರ್ಕ್‌ಗಳ ಸ್ಥಾಪನೆಯನ್ನು, ಎಪಿಎಮ್‌ಸಿಗಳು ಹಾಗೂ ಭಾರತ ಸರ್ಕಾರದ ಮಸಾಲೆ ಮಂಡಳಿಯ ತಾಂತ್ರಿಕ/ ಆರ್ಥಿಕ ನೆರವಿನೊಂದಿಗೆ ಹೂಡಲಾಗುವುದು.

**ಜವಳಿ ಮತ್ತು ಸಿದ್ಧ ಉಡುಪುಗಳ ವಲಯ:**

- ರಾಜ್ಯವು ಒಂದು ಪ್ರತ್ಯೇಕ ಜವಳಿ ನೀತಿ 2013ನ್ನು ಪ್ರಕಟಿಸಿದೆ.

**ರಾಸಾಯನಿಕ ಕೈಗಾರಿಕಾ ವಲಯ:**

- ಅಪಾಯಕಾರಿ ರಾಸಾಯನಿಕಗಳ ಸಂಗ್ರಹಣೆ ಮತ್ತು ಪರೀಕ್ಷಾ ಸೌಲಭ್ಯಗಳಿಗಾಗಿ ಬೆಂಗಳೂರು ಮತ್ತು ಮಂಗಳೂರಿನಲ್ಲಿ ದಾಸ್ತಾನು ಮಳಿಗೆ ಸೌಕರ್ಯಗಳ ಸ್ಥಾಪನೆ

**ಫಾರ್ಮಸ್ಯೂಟಿಕಲ್ ವಲಯ:**

- ರಾಜ್ಯದಲ್ಲಿ ಫಾರ್ಮ ವಲಯದ ಬೆಳವಣಿಗೆಯೊಂದಿಗೆ, ರಫ್ತು ಉತ್ತೇಜಿಸಲು, ಮೂಲ ಸೌಕರ್ಯಗಳೊಂದಿಗೆ ಸಾಮಾನ್ಯ ವಿಸರ್ಜನಾ ಸಂಸ್ಕರಣೆ ಸ್ಥಾವರ / ಬಳಕೆದಾರರಿಗಾಗಿ ಸಾಮಾನ್ಯ ಸೌಲಭ್ಯಗಳನ್ನು ಹೊಂದಿರುವ ಸಾಮರ್ಥ್ಯಸಾಧ್ಯ ಸ್ಥಳಗಳಲ್ಲಿ ಪ್ರತ್ಯೇಕ ಫಾರ್ಮ ವಲಯವನ್ನು ಸ್ಥಾಪಿಸಲು ಉತ್ತೇಜಿಸಲಾಗುವುದು.
- ಹಾಸನ ಮತ್ತು ಯಾದ್ಗಿರ್/ ಬೀದರದಲ್ಲಿನ ಫಾರ್ಮ ಎಸ್‌ಇಜೆಡ್‌ಗಳನ್ನು ಬಲಪಡಿಸಿ, ಆದ್ಯತೆಯಾಗಿ ಉತ್ತೇಜಿಸಲಾಗುವುದು.
- ಬಂದರುಗಳಲ್ಲಿ ಫಾರ್ಮ ಉತ್ಪನ್ನಗಳ ನಿರ್ವಹಣೆಗಾಗಿ ಪ್ರತ್ಯೇಕ ಸಂಗ್ರಹಣಾ ಸೌಲಭ್ಯ ಮತ್ತು ಶೀತಲ ಸರಣಿ ಸೌಕರ್ಯವನ್ನು ಸ್ಥಾಪಿಸಲಾಗುವುದು.

**ಇಂಜನಿಯರಿಂಗ್ ವಲಯ ( ಆಟೋಮೊಬೈಲ್, ಏರೊಸ್ಪೇಸ್ ಮತ್ತು ಪ್ರಿಸಿಷನ್ ಟೂಲ್‌ಗಳು)**

- ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಧಾರವಾಡ ಮತ್ತು ಬೆಳಗಾವಿಯಲ್ಲಿ ಆರ್ ಅಂಡ್ ಡಿ ಹಾಗೂ ಪರೀಕ್ಷಾ ಸೌಕರ್ಯಗಳನ್ನು ಉತ್ತೇಜಿಸಲಾಗುವುದು.
- ಆಟೋಮೊಬೈಲ್, ಏರೊಸ್ಪೇಸ್ ಮತ್ತು ಪ್ರಿಸಿಷನ್ ಟೂಲ್‌ಗಳು ಒಳಪಟ್ಟಂತೆ, ಇಂಜನಿಯರಿಂಗ್ ವಲಯಕ್ಕಾಗಿ ಉಚಿತ ವ್ಯಾಪಾರ ಮಳಿಗೆ ವಲಯವನ್ನು ( ಎಫ್‌ಟಿಡಬ್ಲ್ಯೂಜೆಡ್ ) ಪಿಪಿಪಿ ನಮೂನೆಯ ಮೂಲಕ ಅಭಿವೃದ್ಧಿಪಡಿಸಲಾಗುವುದು.

**ಎಲೆಕ್ಟ್ರಾನಿಕ್ಸ್ ವಲಯ:**

- ರಾಜ್ಯವು ಒಂದು ಪ್ರತ್ಯೇಕ ಕರ್ನಾಟಕ ಇಎಸ್‌ಡಿಎಮ್ ನೀತಿಯನ್ನು 2013ನ್ನು ಪ್ರಕಟಿಸಿದೆ.

**ವಜ್ರಗಳು ಮತ್ತು ಆಭರಣಗಳ ವಲಯ :**

- ರಾಜ್ಯವು ವಜ್ರಗಳು ಮತ್ತು ಆಭರಣಗಳ ರಫ್ತಿಗಾಗಿ ಪ್ರಮುಖ ಕೇಂದ್ರ ಆಗಿರುವುದರಿಂದ, ಸರ್ಕಾರವು ಕುಶಲಕರ್ಮಿ ಕೇಂದ್ರೀಕೃತ ಸ್ಥಳಗಳಿಗಾಗಿ ಬೆಂಬಲವನ್ನು ನೀಡುತ್ತದೆ ಹಾಗೂ ಸಾಗರೋತ್ತರ ಮಾರುಕಟ್ಟೆ -ಅಭಿರುಚಿಗೆ ತಕ್ಕ ವಿನೂತನ ವಸ್ತುಗಳನ್ನು ತಯಾರಿಸಲು, ವಿನ್ಯಾಸ ಮತ್ತು ಬೆಳವಣಿಗೆಯ ಸೌಕರ್ಯಗಳನ್ನು ಒದಗಿಸುತ್ತದೆ.
- ಸಂಭಾವ್ಯ ಸ್ಥಳಗಳಲ್ಲಿ ಪರೀಕ್ಷೆ ಮತ್ತು ಕೆಪೇಸಿಟಿ ಬಿಲ್ಡಿಂಗ್ ಸೌಕರ್ಯಗಳನ್ನು ರಚಿಸಲಾಗುವುದು.
- ಬೆಂಗಳೂರಿನಲ್ಲಿ ವಜ್ರಗಳು ಮತ್ತು ಆಭರಣಗಳ ಪಾರ್ಕ್ ಸ್ಥಾಪನೆಯನ್ನು ರಾಜ್ಯ ಉತ್ತೇಜಿಸಲಿದೆ.

**ಪ್ಲಾಸ್ಟಿಕ್ ವಲಯ**

- ಬೆಂಗಳೂರು, ಧಾರವಾಡ ಮತ್ತು ಇತರ ಸಾಮರ್ಥ್ಯಸಾಧ್ಯ ಸ್ಥಳಗಳಲ್ಲಿ ಪ್ಲಾಸ್ಟಿಕ್ ಪಾರ್ಕ್‌ಗಳ ಸ್ಥಾಪನೆಯನ್ನು ಬೆಂಬಲಿಸಲಾಗುವುದು.
- ಕೈಗಾರಿಕೆಗೆ ಅಗತ್ಯವಾಗುವಂತಹ ಡಿಸೈನ್ ಮತ್ತು ಪ್ರೋಟೊಟೈಪಿಂಗ್ ಕೇಂದ್ರಗಳು , ಪರೀಕ್ಷೆ ಮತ್ತು ಟೂಲ್ ರೂಮ್ ಸೌಕರ್ಯಗಳನ್ನು ಬೆಂಬಲಿಸಲಾಗುವುದು.
- ಬೆಂಗಳೂರಿನಲ್ಲಿ ತನ್ನ ಶಾಖೆಯನ್ನು ನ ತೆರೆಯುವಂತೆ ಸಿಐಪಿಇಟಿಯನ್ನು ಉತ್ತೇಜಿಸಲಾಗುವುದು.

**ಚರ್ಮ ವಲಯ**

- ಭಾರತ ಸರ್ಕಾರದ ಮೆಗಾ ಲೆದರ್ ಕ್ಲಸ್ಟರ್ ಸ್ಕೀಮ್‌ನಡಿ ರಾಜ್ಯವು ಬೃಹತ್ ಲೆದರ್ ಪಾರ್ಕ್ ಸ್ಥಾಪನೆಯನ್ನು ಬೆಂಬಲಿಸುತ್ತದೆ.

**ಕರಕುಶಲ ವಲಯ**

- ನಿರ್ದಿಷ್ಟ ಸ್ಥಳಗಳ್ಲಿ ಕರಕುಶಲ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲು ಆರ್ ಅಂಡ್ ಡಿ ಕೇಂದ್ರಗಳು ಮತ್ತು ತರಬೇತಿ ಸೌಕರ್ಯಗಳನ್ನು ಬೆಂಬಲಿಸಲಾಗುವುದು.
- ಪ್ರಸಕ್ತ ಕರಕುಶಲ ಸಮೂಹಗಳಲ್ಲಿ ಕರಕುಶಲ ಪಾರ್ಕ್‌ಗಳು, ಅಗರಬತ್ತಿ ಪಾರ್ಕ್ ಇತ್ಯಾದಿಯ ಸ್ಥಾಪನೆ ಮತ್ತು ಸುಧಾರಿತ ಮೂಲ ಸೌಲಭ್ಯಗಳನ್ನು ಉತ್ತೇಜಿಸಲಾಗುವುದು.
- ಕರಕುಶಲ ಸಮೂಹಗಳು ಮತ್ತು ಕ್ರಾಫ್ಟ್ ಪಾರ್ಕ್‌ಗಳನ್ನು ಜೊತೆಗೂಡಿಸಿ, ಕರಕುಶಲ ಪ್ರವಾಸೋದ್ಯಮಕ್ಕೆ ಅನುವು ಮಾಡಿಕೊಡುವ ಪ್ರವಾಸಿ ತಾಣಗಳನ್ನು ಬೆಂಬಲಿಸಲಾಗುವುದು.
- ಕರಕುಶಲ ಮೇಳಗಳು, ವ್ಯಾಪಾರ ಮೇಳಗಳು/ಪ್ರದರ್ಶನಗಳಲ್ಲಿ ಭಾಗವಹಿಸಿ, ತಮ್ಮ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ಮಾರಲು, ಕುಶಲಕರ್ಮಿಗಳಿಗೆ ಉತ್ತೇಜನ ನೀಡಿ, ಹಣಕಾಸು ಬೆಂಬಲವನ್ನು ಒದಗಿಸಲಾಗುವುದು.
- ಸಾಮರ್ಥ್ಯಸಾಧ್ಯ ನಗರಗಳಲ್ಲಿ ಕರಕುಶಲ ಪ್ರದರ್ಶನವನ್ನು ಏರ್ಪಡಿಸಲು ಕಾರ್ಯಜಾಲವನ್ನು ಅಭಿವೃದ್ಧಿಪಡಿಸಿ, ಉತ್ಪನ್ನಗಳಿಗಾಗಿ ಸಾಗರೋತ್ತರ ಮಾರುಕಟ್ಟೆಗಳನ್ನು ಅನ್ವೇಷಿಸುವ ಸಂಘಗಳು, ವ್ಯಾಪಾರ ಸದನಗಳು/ಇಲಾಖೆ/ಏಜೆನ್ಸಿಗಳಿಗೆ ಬೆಂಬಲವನ್ನು ನೀಡಲಾಗುವುದು.
- ವಿಟಿಪಿಸಿ, ಗುಣಮಟ್ಟವನ್ನು ಸುಧಾರಿಸಿ, ಜಾಗತಿಕ ಕಾರ್ಯಾಚರಣೆಗಾಗಿ ದೊಡ್ಡ ರೀಟೇಲ್ ಘಟಕಗಳಿಗೆ ತಮ್ಮ ಉತ್ಪನ್ನಗಳನ್ನು ಮಾರಲು ಸಾಧ್ಯವಾಗಿಸುವುದಕ್ಕಾಗಿ ಕುಶಲಕರ್ಮಿಗಳೊಂದಿಗೆ ಕೆಲಸ ಮಾಡುತ್ತದೆ.

**ಸಾಗರ ಉತ್ಪನ್ನಗಳು**

- ಮೀನುಗಾರಿಕೆ ಬಂದರಿನ ಆಧುನೀಕರಣದೊಂದಿಗೆ ಶೀತಲ ಸಂಗ್ರಹಣೆ, ಮಳಿಗೆ, ರೀಫರ್ ವ್ಯಾನ್‌ಗಳು ಮುಂತಾದ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು.
- ಸಂಸ್ಥೆಗಳಿಗಾಗಿ ರಫ್ತು ಮತ್ತು ಗುಣಮಟ್ಟ ನಿರ್ವಹಣಾ ಕಾರ್ಯಕ್ರಮಗಳನ್ನು ಬೆಂಬಲಿಸಲಾಗುವುದು.

**ಎಮ್ ಎಸ್ ಎಮ್ ಇ ವಲಯದ ಮೇಲೆ ಗಮನ :**

- ಎಮ್‌ಎಸ್‌ಎಮ್‌ಇ ವಲಯದ ರಫ್ತುಗಳು, ಇತ್ತೀಚೆಗೆ, ಭಾರತದ ವಿದೇಶಿ ವ್ಯಾಪಾರದಲ್ಲಿ ಅಪಾರ ಪ್ರಾಮುಖ್ಯತೆಯನ್ನು ಗಳಿಸಿವೆ. ಈ ವಲಯವು, ದೇಶದ ಒಟ್ಟಾರೆ ರಫ್ತಿನ ಶೇ 40ರಷ್ಟನ್ನು ಪ್ರತಿನಿಧಿಸುತ್ತದೆ.
- ರಾಜ್ಯವು ರಫ್ತು ಚಟುವಟಿಗೆಗಳಿಗೆ ಪೂರಕವಾಗಿ ಎಮ್‌ಎಸ್‌ಎಮ್‌ಇ ವಲಯಕ್ಕೆ ಆದ್ಯತೆ ನೀಡಿ, ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಅವುಗಳ ಸ್ಪರ್ಧಾತ್ಮಕ ಬಲವನ್ನು ಸಹ ಹೆಚ್ಚಿಸಲು ಬಯಸುತ್ತದೆ.

**ರಫ್ತಿನ ಅಭಿವೃದ್ಧಿ ಮತ್ತು ವಿಸ್ತರಣೆಗಾಗಿ ಉದ್ದೇಶಿಸಲಾಗಿರುವ ಇತರ ಉಪಕ್ರಮಗಳು**

- ಪ್ರಮುಖ ಕೈಗಾರಿಕಾ ಸಂಸ್ಥೆಗಳು ಮತ್ತು ವ್ಯಾಪಾರ ಸಂಸ್ಥೆಗಳ ಭಾಗವಹಿಸುವಿಕೆಯೊಂದಿಗೆ ವಿಭಾಗೀಯ ಪ್ರಧಾನಕಚೇರಿಗಳಲ್ಲಿ ವ್ಯಾಪಾರ ಮಾಹಿತಿ ಕೇಂದ್ರಗಳು/ಕಿಯೊಸ್ಕ್‌ಗಳನ್ನು ಸ್ಥಾಪಿಸಲಾಗುವುದು.
- ಸರ್ಕಾರವು ಕೈಗಾರಿಕಾ ವಿವಾದಗಳ ಕಾಯ್ದೆ, 1947ರ ರೀತ್ಯ ಕೆಲವು ಕೈಗಾರಿಕೆಗಳನ್ನು ಸಾರ್ವಜನಿಕ ಉಪಯುಕ್ತ ಸೇವೆಗಳೆಂದು (ಪಿಯುಎಸ್) ಘೋಷಿಸಿದೆ. ಅತ್ಯವಶ್ಯಕ ಸೇವೆಗಳೆಂದು ಘೋಷಿತವಾದ ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ ಮುಷ್ಕರ ಅಥವಾ ಬೀಗಮುದ್ರೆ ತಲೆದೋರಿದಲ್ಲಿ, ಉದ್ಯೋಗಿಗಳು ಅಥವಾ ಆಡಳಿತದಿಂದ ಪೂರ್ವ ಸೂಚನೆ ಕಡ್ಡಾಯವಾಗಿದೆ. ಒಟ್ಟಾರೆಯಾಗಿ 39 ಕೈಗಾರಿಕೆಗಳನ್ನು ಪಿಯುಎಸ್ ಎಂದು ಘೋಷಿಸಿ, ಕಾಯ್ದೆಯ ಮೊದಲ ಷೆಡ್ಯೂಲ್‌ದಲ್ಲಿ ಒಳಪಡಿಸಲಾಗಿದೆ. ಆದ್ದರಿಂದ ಪಿಯುಎಸ್ ಎಂದು ಘೋಷಿತವಾಗುವ ಇಒಯುಗಳು, ರಫ್ತಿಗಾಗಿ ಹಿತಕರ ಕಾರ್ಯವಾತಾವರಣವನ್ನು ಹೊಂದಿರಬೇಕು.
- ಉತ್ತಮ ಕಾರ್ಯ ಸಾಧನೆಯನ್ನು ದಾಖಲಿಸುವ ರಫ್ತುದಾರರಿಗೆ , ಯಾವುದೇ ವಿಳಂಬವಿಲ್ಲದೇ/ ಪರಿಶೀಲನಾ ಕಾಗದಪತ್ರಗಳಿಲ್ಲದೇ,ಚೆಕ್ ಪೋಸ್ಟ್‌ಗಳಲ್ಲಿ ಸರಕುಗಳ ಸುಸೂತ್ರ ರವಾನೆಯನ್ನು ಸಾಧ್ಯವಾಗಿಸಲು ವಾಣಿಜ್ಯ ತೆರಿಗೆ ಇಲಾಖೆಯಿಂದ ಹಸಿರು ಕಾರ್ಡ್ ಕೊಡಲಾಗುವುದು.
- ನಿರೂಪಿತ ಸಾಧನೆಯಿರುವ ರಫ್ತುದಾರರಿಗೆ ಗೋಲ್ಡ್ ಕಾರ್ಡ್ ನೀಡುವಂತೆ ಬ್ಯಾಂಕುಗಳಿಗೆ ಸೂಚಿಸಲಾಗುವುದು. ಈ ಗೋಲ್ಡ್ ಕಾರ್ಡ್ ಗಳಿಸುವವರು, ಸುಲಭ ಷರತ್ತುಗಳ ರೀತ್ಯ, ತ್ವರಿತವಾಗಿ ಹಣಕಾಸು ಬೆಂಬಲವನ್ನು ಪಡೆಯಬಹುದಾಗಿದೆ.
- ರಾಜ್ಯದ ಉತ್ಪನ್ನಗಳಿಗಾಗಿ ಸಂಭಾವ್ಯ ರಫ್ತು ಮಾರುಕಟ್ಟೆಗಳನ್ನು ಗುರುತಿಸಲು, ರಾಜ್ಯವು ಅಧ್ಯಯನಗಳು ಮತ್ತು ಸಮೀಕ್ಷೆಗಳನ್ನು ಬೆಂಬಲಿಸುತ್ತದೆ. ಹಣಕಾಸು ಬೆಂಬಲದ ಮೂಲಕ ಮಾರುಕಟ್ಟೆ ಸಂಶೋಧನೆ ಮತ್ತು ಪ್ರವೇಶಾತಿ ಯುಕ್ತಿಗಳನ್ನು ಉತ್ತೇಜಿಸಲಾಗುವುದು.
- ಸಂಭಾವ್ಯ ಮಾರುಕಟ್ಟೆಗಳನ್ನು ಪತ್ತೆ ಹಚ್ಚಲು, ಅಧ್ಯಯನಾ ಪ್ರವಾಸಗಳು, ವಿದೇಶಗಳಿಗೆ ವ್ಯಾಪಾರ ತಂಡಗಳ ಭೇಟಿ ಹಾಗೂ ಅಂತರರಾಷ್ಟ್ರೀಯ ವ್ಯಾಪಾರ ಮೇಳಗಳಲ್ಲಿ ಭಾಗವಹಿಸುವುದನ್ನು ಎಮ್‌ಡಿಎ ಮತ್ತು ರಾಜ್ಯದ ಇದೇ ರೀತಿಯ ಇತರ ಸ್ಕೀಮ್‌ಗಳನ್ನು ಒಗ್ಗೂಡಿಸಿ ಬೆಂಬಲಿಸಲಾಗುವುದು.
- ರಾಜ್ಯವು ರಫ್ತು ಉತ್ಕೃಷ್ಟತೆಗಾಗಿ ವಾರ್ಷಿಕ ರಫ್ತು ಪ್ರಶಸ್ತಿಗಳನ್ನು ನೀಡುವುದನ್ನು ಮುಂದುವರೆಸಿ, ಹಾಲಿ ಮತ್ತು ಹೊಸ ರಫ್ತುದಾರರನ್ನು ಉತ್ತೇಜಿಸುತ್ತದೆ.
- ವರ್ಲ್ಡ್ ಟ್ರೇಡ್ ಪಾಯಿಂಟ್ ಫೆಡರೇಷನ್, ಜಿನಿವಾದ ಒಂದು ವಿಸ್ತೃತ ಅಂಗವಾಗಿ ವಿಟಿಪಿಸಿಯಲ್ಲಿ ಸ್ಥಾಪಿಸಲಾಗಿರುವ ಟ್ರೇಡ್ ಪಾಯಿಂಟ್, ಎಸ್‌ಎಮ್‌ಇಗಳತ್ತ ವಿಶೇಷ ಗಮನ ಕೊಟ್ಟು, ರಫ್ತುದಾರರಿಗಾಗಿ ವಾಣಿಜ್ಯ ಸೇವೆ ಸಲ್ಲಿಸುವುದನ್ನು ಮುಂದುವರೆಸುತ್ತದೆ.
- ಎಮ್‌ಎಸ್‌ಎಮ್‌ಇ ವಲಯ ಮತ್ತು ಇತರ ಆಸಕ್ತರಿಗೆ, ಜಾಗತಿಕ ಬೆಳವಣಿಗೆಗಳ ಬಗ್ಗೆ ನವೀಕೃತ ಮಾಹಿತಿ ಒದಗಿಸಿ, ಅವರುಗಳ ಸಾಮರ್ಥ್ಯವನ್ನು ವೃದ್ಧಿಸುವ ಒಂದು ಡಬ್ಲ್ಯುಟಿಓ ಮತ್ತು ಐಪಿಆರ್ ಸೆಲ್‌ನ್ನು ಬಲಪಡಿಸಲಾಗುವುದು.
- ವ್ಯಾಪಾರ ಮತ್ತು ಬಂಡವಾಳ ಪ್ರೋತ್ಸಾಹಕ್ಕಾಗಿ ಅಂತರಮುಖಿವಾಗಬಲ್ಲ ಅಂತರರಾಷ್ಟ್ರೀಯ ಡೆಸ್ಕ್‌ಗಳನ್ನು ಸುಗಮವಾಗಿ ಸ್ಥಾಪಿಸಲು, ಅಂತರರಾಷ್ಟ್ರೀಯ ಡೆಸ್ಕ್-ಲಯಸನ್ ಆಫೀಸ್‌ನ್ನು ಬಲಪಡಿಸಲಾಗುವುದು.

**ಪ್ರೋತ್ಸಾಹಕಗಳು ಮತ್ತು ವಿನಾಯಿತಿಗಳು :**

ರಫ್ತುದಾರರಿಗೆ ಸ್ಪರ್ಧಾತ್ಮಕ ಮೇಲುಗೈ ಒದಗಿಸುವ ಬದ್ಧತೆಯಾಗಿ, ರಾಜ್ಯವು ಆಕರ್ಷಕ ಪ್ರೋತ್ಸಾಹಕಗಳು ಮತ್ತು ವಿನಾಯಿತಿಗಳನ್ನು ಕೆಳಕಂಡಂತೆ ಒದಗಿಸುತ್ತದೆ.

**ಪ್ರವೇಶ ತೆರಿಗೆಯಿಂದ ವಿನಾಯಿತಿ :**

ತಮ್ಮ ಒಟ್ಟಾರೆ ವಹಿವಾಟಿನ 50% ರಷ್ಟು ಕನಿಷ್ಠ ರಫ್ತು ಬದ್ಧತೆ ಹೊಂದಿರುವ 100% ಇಓಯುಗಳು ಮತ್ತು ಇತರ ಇಓಯುಗಳು, ಯೋಜನಾ ಅನುಷ್ಠಾನದ ಆರಂಭ ದಿನಾಂಕದಿಂದ 3 ವರ್ಷಗಳ ಪ್ರಾರಂಭಿಕ ಅವಧಿಗಾಗಿ , ವಲಯ ಯಾವುದಾಗಿದ್ದರೂ, "ಕಾರ್ಯಾಗಾರ ಮತ್ತು ಯಂತ್ರೋಪಕರಣ ಮತ್ತು ಬಂಡವಾಳ ಸಾಮಗ್ರಿಗಳ" ಮೇಲೆ ಪ್ರವೇಶ ತೆರಿಗೆಯನ್ನು ಪಾವತಿಸುವಲ್ಲಿ 100% ವಿನಾಯಿತಿಗೆ ಅರ್ಹವಾಗುತ್ತವೆ.

ಕಚ್ಚಾ ಸಾಮಗ್ರಿಗಳು, ಉಪಕರಣಗಳು, ಬಿಡಿ ಭಾಗಗಳು ಮತ್ತು ಇತರ ಸಾಮಗ್ರಿಗಳು (ಪೆಟ್ರೋಲಿಯಂ ಉತ್ಪನ್ನಗಳನ್ನು ಹೊರತುಪಡಿಸಿ) ಮೇಲಿನ 100% ಪ್ರವೇಶ ತೆರಿಗೆ ವಿನಾಯಿತಿ , ವಲಯ ಯಾವುದಾಗಿದ್ದರೂ, ವಾಣಿಜ್ಯಕ ಉತ್ಪಾದನೆಯ ಆರಂಭ ದಿನಾಂಕದಿಂದ 5 ವರ್ಷಗಳ ಅವಧಿಗಾಗಿ ಇರುತ್ತದೆ.

**ಪ್ರಮಾಣೀಕರಣ ಶುಲ್ಕಗಳ ಹಿಂಪಾವತಿ**

ಕನ್‌ಫರ್ಮಿಟಿ ಯೂರೋಪಿಯನ್ (ಸಿಇ), ಚೈನಾ ಕಂಪಲ್ಸರಿ ಸರ್ಟಿಫಿಕೇಟ್ (ಸಿಸಿಸಿ), ಜಿಎಮ್‌ಪಿ, ಫೈಟೋಸ್ಯಾನಿಟರಿ, ರೇಡಿಯೇಷನ್ ಮುಂತಾದ ಕಾನೂನುಬದ್ಧ ಪ್ರಮಾಣಪತ್ರಗಳನ್ನು ಪಡೆಯುವುದಕ್ಕಾಗಿ ತಗುಲುವ ವೆಚ್ಚವನ್ನು , ಪ್ರತಿ ಘಟಕಕ್ಕೆ ಗರಿಷ್ಠ ರೂ. 1 ಲಕ್ಷಕ್ಕೆ ಒಳಪಟ್ಟಂತೆ 50% ರಷ್ಟು ಹಿಂಪಾವತಿ ಮಾಡಲಾಗುವುದು.

**ರಫ್ತು ಸಮಾಲೋಚನೆ/ಮಾರುಕಟ್ಟೆ ವರ್ತಮಾನ ಅಧ್ಯಯನಗಳಿಗಾಗಿ ತಗುಲುವ ವೆಚ್ಚದ ಮರುಪಾವತಿ**

ಮಾನ್ಯತೆ ಪಡೆದ ಸಮಾಲೋಚನಾ ಸಂಸ್ಥೆಗಳ ಮೂಲಕ ಮಾರುಕಟ್ಟೆ ವರ್ತಮಾನ, ಮಾರುಕಟ್ಟೆ ಅಧ್ಯಯನಗಳು/ ಸಮೀಕ್ಷೆಗಳು ಮತ್ತು ದಾಖಲೀಕರಣ ಕೈಗೊಳ್ಳಲು, ವಾರ್ಷಿಕವಾಗಿ ರೂ. 5.00 ಕೋಟಿಗೆ ಕಡಿಮೆ ವಹಿವಾಟು ಇರುವ ರಫ್ತುದಾರರಿಗೆ ಹಣಕಾಸು ನೆರವನ್ನು ನೀಡಲಾಗುವುದು. ಈ ನೆರವಾಗಿ, ರೂ. 2 ಲಕ್ಷಗಳ ಗರಿಷ್ಠ ಮಿತಿಗೆ ಒಳಪಟ್ಟಂತೆ ವೆಚ್ಚದ 50% ರಷ್ಟನ್ನು ಮರುಪಾವತಿಸಲಾಗುವುದು.

**ಬ್ರಾಂಡ್ ಪ್ರಮೋಷನ್ ಮತ್ತು ಗುಣಮಟ್ಟ ಖಾತರಿ**

ಶೋರೂಮ್‌ಗಳು, ಮಳಿಗೆಗಳ ಸ್ಥಾಪನೆ, ಅಂತರರಾಷ್ಟ್ರೀಯ ಡಿಪಾರ್ಟ್‌ಮೆಂಟಲ್ ಸ್ಟೋರ್‌ಗಳಲ್ಲಿ ಪ್ರದರ್ಶನ, , ಪ್ರಚಾರ, ಪರೀಕ್ಷಾ ಶುಲ್ಕಗಳು, ನೋಂದಣಿ ವೆಚ್ಚಗಳು, ಬ್ರಾಂಡ್ ಪ್ರೊಮೋಷನ್ ಹಾಗೂ ಆ್ಯಂಟಿ-ಡಂಪಿಂಗ್ ವಿವಾದಗಳನ್ನು ಪ್ರತಿಸುವ ವೆಚ್ಚದತ್ತ ರೂ. 5.00 ಕೋಟಿಗೆ ಕಡಿಮೆ ವಹಿವಾಟು ಇರುವ ರಫ್ತುದಾರರಿಗೆ ಹಣಕಾಸು ನೆರವನ್ನು ನೀಡಲಾಗುವುದು. ಈ ನೆರವಾಗಿ, ರೂ. 5 ಲಕ್ಷಗಳ ಗರಿಷ್ಠ ಮಿತಿಗೆ ಒಳಪಟ್ಟಂತೆ ವೆಚ್ಚದ 50% ರಷ್ಟನ್ನು ಮರುಪಾವತಿಸಲಾಗುವುದು.

**ಆಮದು-ರಫ್ತು ನಿರ್ವಹಣೆ ಕುರಿತ ಸರ್ಟಿಫಿಕೇಷನ್ ಕೋರ್ಸ್‌ಗಳಿಗಾಗಿ ಪ್ರತ್ಯೇಕ ರಫ್ತುದಾರರಿಗೆ ಬೋಧನಾ ಶುಲ್ಕದ ಹಿಂಪಾವತಿ**

ಹೊಸದೆಹಲಿಯ ಐಐಎಫ್‌ಟಿ, ಎಫ್‌ಇಒ ಮತ್ತು ಇತರ ಮಾನ್ಯ ಸಂಸ್ಥೆಗಳು ನಡೆಸುವ ಆಮದು-ರಫ್ತು ನಿರ್ವಹಣೆಯ ಮೇಲಿನ ಸರ್ಟಿಫಿಕೇಟ್ ಕೋರ್ಸ್‌ದಲ್ಲಿ ಕನಿಷ್ಠ 4 ತಿಂಗಳ ಅವಧಿಗಾಗಿ ಓದುವ ಪ್ರತ್ಯೇಕ ರಫ್ತುದಾರರಿಗೆ ಅಧ್ಯಯನಾ ಶುಲ್ಕವನ್ನು ಹಿಂಪಾವತಿಸಲಾಗುವುದು. ಇದು, ಪ್ರತಿ ಅಭ್ಯರ್ಥಿಗಾಗಿ ಮತ್ತು ಪ್ರತಿ ಕೋರ್ಸ್‌ಗಾಗಿ ರೂ 25,000ದ ಮಿತಿಗೆ ಒಳಪಟ್ಟಂತೆ ಶುಲ್ಕದ 50% ರಷ್ಟು ಇರುತ್ತದೆ ಹಾಗೂ ನೀತಿಯ ಅವಧಿಯಲ್ಲಿ ಒಂದು ಕೋರ್ಸ್‌ಗಾಗಿ ಮಾತ್ರ ಏಕಕಾಲದ ಪಾವತಿಯಾಗಿರುತ್ತದೆ.

**ಸಿಎಫ್‌ಎಸ್‌ಗಳು ಮತ್ತು ಇತರ ರಫ್ತು ಮೂಲವ್ಯವಸ್ಥೆಗಳನ್ನು ಸ್ಥಾಪಿಸಲು ಬೆಂಬಲ**

ಕಂಟೇನರ್ ಫ್ರೈಟ್ ಸ್ಟೇಷನ್‌ಗಳು (ಸಿಎಫ್‌ಎಸ್‌ಗಳು) ಹಾಗೂ ರಾಜ್ಯದ ಸಾಮರ್ಥ್ಯಸಾಧ್ಯ ನಿವೇಶನಗಳಲ್ಲಿ ಲಾಜಿಸ್ಟಿಕ್ ಪಾರ್ಕ್, ಕೊಯ್ಲು-ಪೂರ್ವ ಮತ್ತು ಕೊಯ್ಲು ನಂತರದ ತಂತ್ರಜ್ಞಾನ ಕೇಂದ್ರಗಳು ಮುಂತಾದ ಇತರ ರಫ್ತು ಮೂಲವ್ಯವಸ್ಥೆಗಳ ಸ್ಥಾಪನೆಯನ್ನು ವೈಯಾಬಿಲಿಟಿ ಗ್ಯಾಪ್ ಫಂಡ್ ಆಗಿ ಒದಗಿಸಲಾಗುವುದು. ಇದು ರೂ. 200 ಲಕ್ಷಗಳ ಪರಿಮಿತಿಗೆ ಒಳಪಟ್ಟಂತೆ ಯೋಜನಾ ವೆಚ್ಚದ 25% ರಷ್ಟು ಪ್ರಮಾಣದಲ್ಲಿರುತ್ತದೆ. ಅಗತ್ಯ ಮೂಲ ವ್ಯವಸ್ಥೆಗಳ ಸ್ಥಾಪನೆಯನ್ನು ಸಾರ್ವಜನಿಕ-ಖಾಸಗಿ ಪಾಲುಗಾರಿಕೆಯ ಮೂಲಕ ಕೈಗೊಂಡು ರಫ್ತುಗಳನ್ನು ಉತ್ತೇಜಿಸಲಾಗುವುದು.

ಸಂಭಾವ್ಯ ರಫ್ತುದಾರರು ಸಿಎಫ್‌ಎಸ್ ಮತ್ತು ಇತರ ರಫ್ತು ಮೂಲಸೌಕರ್ಯಗಳನ್ನು ಸ್ಥಾಪಿಸುವುದಕ್ಕಾಗಿ , ಕೆಐಎಡಿಬಿ, ಎಲ್ಲಾ ಕೈಗಾರಿಕಾ ಪ್ರದೇಶಗಳಲ್ಲಿ 10-15 ಎಕರೆಗಳಷ್ಟು ಭೂಮಿಯನ್ನು ಮೀಸಲಾಗಿಡುತ್ತದೆ. ಪ್ರೊಮೋಟರ್, ಭೂ ವೆಚ್ಚ ಮತ್ತು ಸಿಎಫ್‌ಎಸ್‌ಗಳ ರಚನೆಗಾಗಿ ಅಗತ್ಯವಾಗುವ ನಿಧಿಗಳನ್ನು ಪೂರೈಸುತ್ತಾರೆ.

ಕೃಷಿ ಮತ್ತು ಆಹಾರ ಸಂಸ್ಕರಣೆ ವಲಯದಲ್ಲಿ ರಫ್ತುಗಳನ್ನು ಉತ್ತೇಜಿಸಲು, ರಾಜ್ಯದ ಎಪಿಎಮ್‌ಸಿಗಳಿಗೂ ಮೂಲವ್ಯವಸ್ಥೆಗಾಗಿ ಹಣಕಾಸು ನೆರವನ್ನು ನೀಡಲಾಗುವುದು. ಆದರೆ ಭೂಮಿಯ ವೆಚ್ಚಕ್ಕಾಗಿ ಈ ನೆರವನ್ನು ಕೊಡಲಾಗುವುದಿಲ್ಲ. ಎಪಿಎಮ್‌ಸಿಗಳು, ಅಗತ್ಯ ಭೂಮಿಯನ್ನು ಹೊಂದಿರಬೇಕು ಮತ್ತು ಮೂಲವ್ಯವಸ್ಥೆಯ ಅಭಿವೃದ್ಧಿಯತ್ತ ಹಣದ ಕೊರತೆಯನ್ನು ಖುದ್ದಾಗಿ ತುಂಬಬೇಕು.

**ರಫ್ತು ಅನುವು ಸೌಲಭ್ಯಗಳು, ಆರ್ ಆಂಡ್ ಡಿ ಮತ್ತು ಪರೀಕ್ಷಾ ಸೇವೆಗಳನ್ನು ಕಲ್ಪಿಸಲು ಬೆಂಬಲ**

ರಫ್ತು ಕಾರ್ಯ, ಇನ್‌ಕ್ಯುಬೇಷನ್ ಸೌಕರ್ಯಗಳು, ಆರ್ ಅಂಡ್ ಡಿ ಮತ್ತು ಪರೀಕ್ಷಾ ಸೇವೆಗಳನ್ನು ಕಲ್ಪಿಸಲು ವ್ಯಾಪಾರ ಸಂಸ್ಥೆಗಳು/ಸಂಘಗಳಿಗಾಗಿ ಏಕಕಾಲದ ಬೆಂಬಲವಾಗಿ ರೂ. 50 ಲಕ್ಷ ಅಥವಾ ವೆಚ್ಚದ 50% ( ಯಾವುದು ಕಡಿಮೆ ಇರುತ್ತದೆಯೋ, ಅದನ್ನು) ನೀಡಲಾಗುವುದು. ಆದರೆ ಭೂ ವೆಚ್ಚಕ್ಕಾಗಿ ಈ ನೆರವನ್ನು ನೀಡಲಾಗುವುದಿಲ್ಲ.

**ಮಾರುಕಟ್ಟೆ ಅಭಿವೃದ್ಧಿ ನೆರವು**

ಈ ಸ್ಕೀಮ್ ನಡಿ, ಹಣಕಾಸು ನೆರವನ್ನು ಕೆಳಕಂಡಂತೆ ಕೊಡಲಾಗುವುದು:

**ದಕ್ಷಿಣ ಅಮೇರಿಕಾದ ದೇಶಗಳು**

ಕೆಳಗಿನ ಅಂಶ-ರೀತ್ಯದ ಮಿತಿಯೊಂದಿಗೆ ರೂ. 1.75 ಲಕ್ಷವರೆಗಿನ ನೆರವು

- ಗರಿಷ್ಠ ರೂ. 1 ಲಕ್ಷಕ್ಕೆ ಒಳಪಟ್ಟಂತೆ 75% ರಷ್ಟು ಎಕಾನಮಿ ಏರ್‌ಫೇರ್
- ಗರಿಷ್ಠ ರೂ 50,000ಕ್ಕೆ ಒಳಪಟ್ಟಂತೆ 50% ರಷ್ಟು ಸ್ಟಾಲ್ ಬಾಡಿಗೆಗಳು ( ಮಹಿಳೆಯರು ಮತ್ತು ಎಸ್‌ಸಿ/ಎಸ್‌ಟಿ ಉದ್ಯಮಶೀಲರಿಗಾಗಿ ಗರಿಷ್ಠ ರೂ 50,000ಕ್ಕೆ ಒಳಪಟ್ಟಂತೆ 100% ರಷ್ಟು ಸ್ಟಾಲ್ ಬಾಡಿಗೆಯನ್ನು ಮರುಪಾವತಿಸಲಾಗುವುದು). ಗರಿಷ್ಠ ರೂ. 10,000ಕ್ಕೆ ಒಳಪಟ್ಟಂತೆ 50% ರಷ್ಟು ಫ್ರೈಟ್ ಶುಲ್ಕಗಳು.
- 3 ಕೆಲಸದ ದಿನಗಳಿಗಾಗಿ ದಿನಕ್ಕೆ $100 ಡಿಎ

ಇತರ ದೇಶಗಳು

- ಕೆಳಗಿನ ಅಂಶ-ರೀತ್ಯದ ಮಿತಿಯೊಂದಿಗೆ ರೂ. 1.50 ಲಕ್ಷವರೆಗಿನ ನೆರವು
- ಗರಿಷ್ಠ ರೂ. 75,000 ಒಳಪಟ್ಟಂತೆ 75% ರಷ್ಟು ಎಕಾನಮಿ ಏರ್‌ಫೇರ್
- ಗರಿಷ್ಠ ರೂ 50,000ಕ್ಕೆ ಒಳಪಟ್ಟಂತೆ 50% ರಷ್ಟು ಸ್ಟಾಲ್ ಬಾಡಿಗೆಗಳು ( ಮಹಿಳೆಯರು ಮತ್ತು ಎಸ್‌ಸಿ/ಎಸ್‌ಟಿ ಉದ್ಯಮಶೀಲರಿಗಾಗಿ ಗರಿಷ್ಠ ರೂ 50,000ಕ್ಕೆ ಒಳಪಟ್ಟಂತೆ 100% ರಷ್ಟು ಸ್ಟಾಲ್ ಬಾಡಿಗೆಯನ್ನು ಮರುಪಾವತಿಸಲಾಗುವುದು.
- ಗರಿಷ್ಠ ರೂ. 10,000ಕ್ಕೆ ಒಳಪಟ್ಟಂತೆ 50% ರಷ್ಟು ಫ್ರೈಟ್ ಶುಲ್ಕಗಳು.
- 3 ಕೆಲಸದ ದಿನಗಳಿಗಾಗಿ ದಿನಕ್ಕೆ $100 ಡಿಎ

**ಎಕ್ಸ್‌ಪೋರ್ಟ್ ಕ್ರೆಡಿಟ್ ಗ್ಯಾರಂಟಿ ಇನ್‌ಶ್ಯೂರೆನ್ಸ್‌ನ ಮರುಪಾವತಿ**

ಆಫ್ರಿಕ, ಲ್ಯಾಟಿನ್ ಅಮೇರಿಕ ಮತ್ತು ಸಿಐಎಸ್ ಮುಂತಾದ ಅಪಾಯ ಸಾಧ್ಯ ದೇಶಗಳಿಗೆ ಉತ್ಪನ್ನಗಳನ್ನು ರಫ್ತು ಮಾಡಲು, ಎಕ್ಸ್‌ಪೋರ್ಟ್ ಕ್ರೆಡಿಟ್ ಗ್ಯಾರಂಟಿ ಇನ್‌ಶ್ಯೂರೆನ್ಸ್‌ನತ್ತ ಕಟ್ಟಲಾಗುವ ವಿಮೆಗಾಗಿ ವಾರ್ಷಿಕ ರೂ. 5.00 ಕೋಟಿಗಿಂತ ಕಡಿಮೆ ವಹಿವಾಟಿರುವ ರಫ್ತುದಾರರಿಗೆ ಹಣಕಾಸು ನೆರವನ್ನು ನೀಡಲಾಗುವುದು. ಈ ನೆರವು, ವಾರ್ಷಿಕ ರೂ. 50,000 ಮೀರದಂತೆ ಕಟ್ಟಲಾಗುವ ವಿಮೆಯ ಕಂತಿನ 10% ರಷ್ಟು ಇರುತ್ತದೆ.

**ಎಮ್‌ಎಸ್‌ಎಮ್‌ಇ, ಎಸ್‌ಸಿ/ಎಸ್‌ಟಿ, ಕುಶಲಕರ್ಮಿಗಳು ಮತ್ತು ಮಹಿಳಾ ಉದ್ಯಮಶೀಲರಿಗಾಗಿ ಹಣಕಾಸು ನೆರವು**

- ರಾಜ್ಯದ ಒಳಗೆ ಮತ್ತು ರಾಜ್ಯದ ಹೊರಗೆ ಪ್ರದರ್ಶನಗಳಲ್ಲಿ ( ದಿಲ್ಲಿ ಹಾತ್ ಮತ್ತು ಇತರ ನಗರ ಹಾತ್‌ಗಳು ಒಳಪಟ್ಟಂತೆ) ಭಾಗವಹಿಸುವ ಎಮ್‌ಎಸ್‌ಎಮ್‌ಇ, ಎಸ್‌ಸಿ/ಎಸ್‌ಟಿ, ಕುಶಲಕರ್ಮಿಗಳು ಮತ್ತು ಮಹಿಳಾ ಉದ್ಯಮಶೀಲರಿಗೆ ಕೆಳಕಂಡಂತೆ ಹಣಕಾಸು ನೆರವನ್ನು ನೀಡಲಾಗುವುದು:
- ರಾಜ್ಯದ ಒಳಗೆ ರೂ.5,000 ಮತ್ತು ರಾಜ್ಯದ ಹೊರಗೆ ರೂ 10,000 ವರೆಗಿನ ಸ್ಟಾಲ್ ಬಾಡಿಗೆಗಳ ಹಿಂಪಾವತಿ
- ಗರಿಷ್ಠ 15 ದಿನಗಳ ಪ್ರದರ್ಶನ ಅವಧಿಗಾಗಿ ಪ್ರತಿ ಸ್ಟಾಲ್‌ಗಾಗಿ ಇಬ್ಬರಿಗೆ ರೂ. 100/- (ರಾಜ್ಯದ ಒಳಗೆ) ಅಥವಾ ರೂ. 150/-(ರಾಜ್ಯದ ಹೊರಗೆ) ಡಿಎ.
- ಪ್ರತಿ ಸ್ಟಾಲ್‌ಗಾಗಿ ಇಬ್ಬರಿಗೆ ಎರಡನೆಯ ದರ್ಜೆಯ ರೈಲು ಟಿಕೆಟ್

**ಗರ್ಕಿನ್, ರೋಸ್ ಈರುಳ್ಳಿ ಮತ್ತು ಪುಷ್ಪಗಳ ರಫ್ತಿನ ಅಭಿವೃದ್ಧಿಗಾಗಿ ಬೆಂಬಲ**

ರಫ್ತು ಉದ್ದೇಶಿತ ಗರ್ಕಿನ್, ರೋಸ್ ಈರುಳ್ಳಿ ಮತ್ತು ಪುಷ್ಪಗಳ ಗುಣ ಮಟ್ಟಕ್ಕಾಗಿ ವೈಜ್ಞಾನಿಕ ಪದ್ಧತಿಗಳನ್ನು ರೈತರು ಅಂಗೀಕರಿಸಲು ತರಬೇತಿ, ಹಾಗೂ, ರಫ್ತುದಾರರು ಆಮದಾದ ಬೀಜಗಳನ್ನು ಪಡೆಯಲು ತಗುಲುವ ವೆಚ್ಚದ 10% ರಷ್ಟನ್ನು ಹಣಕಾಸು ನೆರವಾಗಿ ನೀಡಲು ಉದ್ದೇಶಿಸಲಾಗಿದೆ.

ಸಮೀಕ್ಷೆ ಮತ್ತು ಮೇಲ್ವಿಚಾರಣಾ ವ್ಯವಸ್ಥೆ

- ರಾಜ್ಯದಿಂದ ರಫ್ತುಗಳನ್ನು ಉತ್ತೇಜಿಸಲು ಸೂತ್ರಗಳು, ಸೂಕ್ತ ಮಾರ್ಗದರ್ಶನಗಳು ಮತ್ತು ಕಾರ್ಯಶೀಲ ಕ್ರಮಗಳನ್ನು ಕೈಗೊಳ್ಳಲು, ದಿನಾಂಕ ಫೆ 28,2005ರ ಆದೇಶ ಸಂ ಸಿಐ 290 ಎಸ್‌ಪಿಸಿ 94(ಪಿ) ಬೆಂಗಳೂರು ಪ್ರಕಾರ ಸನ್ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಡಿ ರಚಿಸಲಾದ ಸ್ಟೇಟ್ ಎಕ್ಸ್‌ಪೋರ್ಟ್ ಪ್ರಮೋಶನ್ನ ಕೌನ್ಸಿಲ್ ವಿವಿಧ ಉಪಕ್ರಮಗಳನ್ನು ಸಲಹೆ ಮಾಡಲು, ರಫ್ತು ಬೆಳವಣಿಗೆಗೆ ಇರುವ ಅಡಚಣೆಗಳನ್ನು ಪರಿಹರಿಸಲು, ಮೂಲವ್ಯವಸ್ಥೆಯಲ್ಲಿನ ಕೊರತೆಗಳನ್ನು ತುಂಬಲು ಹಾಗೂ ಸುಲಭವಾಗಿ ರಫ್ತು ವ್ಯಾಪಾರ ಕೈಗೊಳ್ಳುವುದನ್ನು ಸಾಕಾರಗೊಳಿಸುವ ಗುರಿ ಹೊಂದಿದೆ.

- ಎಎಸ್ಐಡಿಇ ಸ್ಕೀಮ್‌ಗಾಗಿ ದಿನಾಂಕ ಫೆ 28,2005ರ ಆದೇಶ ಸಂ ಸಿಐ 290 ಎಸ್‌ಪಿಸಿ 94(ಪಿ) ಬೆಂಗಳೂರು ರೀತ್ಯ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಡಿ ರಚಿಸಲಾದ ಎಸ್‌ಎಲ್‌ಪಿಇಸಿ ಸಹ, ರಾಜ್ಯದಲ್ಲಿ ಎಎಸ್‌ಐಡಿಇ ಸ್ಕೀಮ್‌ನ ಮೇಲ್ವಿಚಾರಣೆಯಲ್ಲದೇ, ನೀತಿಯ ಉಪಕ್ರಮಗಳ ಅನುಷ್ಠಾನದ ಬಗ್ಗೆಯೂ ನಿಯಮಿತವಾಗಿ ನಿಗಾ ಇಡುತ್ತದೆ. ಈ ಸಮಿತಿಯನ್ನು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರಮುಖ ಇಲಾಖೆಗಳು/ಏಜೆನ್ಸಿಗಳು, ರಫ್ತುದಾರ ಸಂಘಗಳ ಪ್ರತಿನಿಧಿಗಳು, ಪ್ರಮುಖ ರಫ್ತು ಸದನಗಳು ಮತ್ತು ಇತರ ಆಸಕ್ತರ ' ಭಾಗವಹಿಸುವಿಕೆಯೊಂದಿಗೆ , ಪ್ರಸ್ತಾವನಾ ಅಂಶಗಳನ್ನು ವೃದ್ಧಿಸಿ, ಪುನರ್‌ರಚಿಸಲಾಗುವುದು. ಇದರಿಂದ ಸುಸೂತ್ರ ರಫ್ತಿಗಾಗಿ ಎಲ್ಲರ ಮಧ್ಯೆ ಸಂಘಟನೆ ಮತ್ತು ನಿರ್ಣಾಯಕ ಅಂತರ-ಇಲಾಖೆ ಸಮಸ್ಯೆಗಳ ಪರಿಹಾರ ಮೂಡುತ್ತವೆ.
- ದಿನಾಂಕ ಫೆ 28,2005ರ ಆಜ್ಞೆ ಸಂ ಸಿಐ 290 ಎಸ್‌ಪಿಸಿ 94(ಪಿ) ಬೆಂಗಳೂರು ರೀತ್ಯ ಜಿಲ್ಲಾ ಆಯುಕ್ತರ ಅಧ್ಯಕ್ಷತೆಯಡಿ ರಚಿಸಲಾದ ಜಿಲ್ಲಾ ಮಟ್ಟದ ರಫ್ತು ಪ್ರೋತ್ಸಾಹಕ ಸಮಿತಿ (ಡಿಎಲ್‌ಇಪಿಸಿ) , ಜಿಲ್ಲೆಗಳಿಂದ ರಫ್ತುಗಳ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಕಲ್ಪಿಸುವಂತಹ ಸಮಗ್ರ ಕ್ರಿಯಾಶೀಲ ಯೋಜನೆಯನ್ನು ರೂಪಿಸುತ್ತದೆ. ಸಮಿತಿಯು, ರಫ್ತುದಾರರನ್ನು ಕುರಿತ ಮಾಹಿತಿ ಕೋಶ, ರಫ್ತು ಸಾಧ್ಯತೆಯುಳ್ಳ ಉತ್ಪನ್ನ ಗುರುತಿಸುವಿಕೆಗಾಗಿ ಕೈಗಾರಿಕೆಗಳು/ವ್ಯಾಪಾರಿಗಳ ಪಟ್ಟಿಯನ್ನು ಸಿದ್ಧಪಡಿಸಿ, ರಫ್ತುದಾರರ ಕುಂದುಕೊರತೆಗಳನ್ನು ಪರಿಹರಿಸುವ "ಯತ್ನಿಸಿ, ರಫ್ತನ್ನು ಬೆಳೆಸಲು ಜಿಲ್ಲೆಗಳಲ್ಲಿ ಮೂಲವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿ, ಬಲಪಡಿಸುವುದಕ್ಕಾಗಿ ಅಗತ್ಯವಾಗುವ ಮಾರ್ಗದರ್ಶನವನ್ನು ಸಹ ಜಿಲ್ಲಾ ಕೈಗಾರಿಕಾ ಕೇಂದ್ರಕ್ಕೆ ನೀಡುತ್ತದೆ.

ವ್ಯಾಖ್ಯಾನಗಳು

ಎ) ಎಂಎಸ್‌ಎಂಇಡಿ ಕಾಯ್ದೆ 2006 ಪ್ರಕಾರ, ಉತ್ಪಾದನಾ ಘಟಕಗಳನ್ನು ಅವುಗಳು ಸ್ಥಾವರ ಮತ್ತು ಯಂತ್ರೋಪಕರಣಗಳ ಮೇಲೆ ಹೂಡುವ ಬಂಡವಾಳದ ರೀತ್ಯ ಕೆಳಕಂಡಂತೆ ವರ್ಗೀಕರಿಸಲಾಗಿದೆ:

1) ಸೂಕ್ಷ್ಮ / ಅತಿ ಸಣ್ಣ ಉದ್ಯಮಗಳು – ರೂ.25.00 ಲಕ್ಷದವರೆಗೆ ಬಂಡವಾಳ
2) ಸಣ್ಣ ಉದ್ಯಮಗಳು – ರೂ.25.00 ಲಕ್ಷ ಮೀರಿ ರೂ.500.00 ಲಕ್ಷದವರೆಗಿನ ಬಂಡವಾಳ
3) ಮಧ್ಯಮ ಉದ್ಯಮಗಳು – ರೂ.500.00 ಲಕ್ಷ ಮೀರಿ ರೂ.1000.00 ಲಕ್ಷದವರೆಗಿನ ಬಂಡವಾಳ

ಬಿ) ಎಂಎಸ್‌ಎಂಇಡಿ ಕಾಯ್ದೆ 2006 ಪ್ರಕಾರ, ಸೇವಾ ಉದ್ಯಮಗಳನ್ನು ಅವುಗಳು ಉಪಕರಣಗಳ ಮೇಲೆ ಹೂಡುವ ಬಂಡವಾಳದ ರೀತ್ಯ ಕೆಳಕಂಡಂತೆ ವರ್ಗೀಕರಿಸಲಾಗಿದೆ:

1) ಸೂಕ್ಷ್ಮ / ಅತಿ ಸಣ್ಣ ಉದ್ಯಮಗಳು – ರೂ.10.00 ಲಕ್ಷದವರೆಗೆ ಬಂಡವಾಳ
2) ಸಣ್ಣ ಉದ್ಯಮಗಳು – ರೂ.10.00 ಲಕ್ಷ ಮೀರಿ ರೂ.200.00 ಲಕ್ಷದವರೆಗಿನ ಬಂಡವಾಳ
3) ಮಧ್ಯಮ ಉದ್ಯಮಗಳು – ರೂ.200.00 ಲಕ್ಷ ಮೀರಿ ರೂ.500.00 ಲಕ್ಷದವರೆಗಿನ ಬಂಡವಾಳ

ಸಿ) **ಬೃಹತ್ ಪ್ರಮಾಣದ ಉದ್ಯಮಗಳು**

ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮವೆಂದು ವರ್ಗೀಕರಣವಾಗದಂತಹ ಸ್ಥಿರಾಸ್ತಿಯಲ್ಲಿ ರೂ.250 ಕೋಟಿವರೆಗಿನ ಬಂಡವಾಳ ಹೂಡಿರುವ ಒಂದು ಕೈಗಾರಿಕಾ ಘಟಕವನ್ನು ಬೃಹತ್ ಪ್ರಮಾಣದ ಉದ್ಯಮವೆಂದು ವರ್ಗೀಕರಿಸಲಾಗುವುದು.

ಡಿ) **ಮೆಗಾ ಉದ್ಯಮ**

ರೂ. 250 ಕೋಟಿ ಮೀರಿ ರೂ.500 ಕೋಟಿವರೆಗಿನ ಸ್ಥಿರಾಸ್ತಿಗಳ ಮೇಲೆ ಬಂಡವಾಳ ಹೂಡಿರುವ ಯೋಜನೆಗಳು.

ಇ) **ಅಲ್ಟ್ರಾ ಮೆಗಾ ಉದ್ಯಮ**

ರೂ. 500 ಕೋಟಿ ಮೀರಿ ರೂ.1000 ಕೋಟಿವರೆಗಿನ ಸ್ಥಿರಾಸ್ತಿಗಳ ಮೇಲೆ ಬಂಡವಾಳ ಹೂಡಿರುವ ಯೋಜನೆಗಳು.

ಎಫ್) **ಸೂಪರ್ ಮೆಗಾ ಉದ್ಯಮ**

ರೂ. 1000 ಕೋಟಿ ಮೀರಿದ ಸ್ಥಿರಾಸ್ತಿಗಳ ಮೇಲೆ ಬಂಡವಾಳ ಹೂಡಿರುವ ಯೋಜನೆಗಳು.

ಜಿ) **100% ರಫ್ತು ಉದ್ದೇಶಿತ ಉದ್ಯಮಗಳು**

100% ರಫ್ತು ಉದ್ದೇಶಿತ ಉದ್ಯಮವೆಂದರೆ, ರಿಪೇರಿ, ಪುನರ್‌ತಯಾರಿಕೆ, ಪುನರ್-ಇಂಜಿನಿಯರಿಂಗ್ ಮತ್ತು ಸೇವೆಗಳ ಪೂರೈಕೆ ಒಳಪಟ್ಟಂತೆ ಸರಕುಗಳ ತಯಾರಿಕೆಗಾಗಿ ಭಾರತ ಕಾಲಕಾಲಕ್ಕೆ ವಿಧಿಸುವ ಡೊಮೆಸ್ಟಿಕ್ ಟ್ಯಾರಿಫ್ ಪ್ರದೇಶ ಮಾರಾಟಗಳನ್ನು ಹೊರತುಪಡಿಸಿ, ತನ್ನ ಇಡೀ ಉತ್ಪಾದನೆಯನ್ನು ರಫ್ತಿಗಾಗಿ ಒದಗಿಸುವ ಒಂದು ಕೈಗಾರಿಕಾ ಉದ್ಯಮವಾಗಿದೆ.

ಇಂತಹ ಉದ್ಯಮಗಳನ್ನು ರಫ್ತು ಉದ್ದೇಶಿತ ಉದ್ಯಮಗಳು ಅಥವಾ ಇಪಿಐಪಿ ಸ್ಕೀಂ (ರಫ್ತು ಉದ್ದೇಶಿತ ಕೈಗಾರಿಕಾ ಪಾರ್ಕ್) ಅಥವಾ ಇಹೆಚ್‌ಟಿಪಿ (ಎಲೆಕ್ಟ್ರಾನಿಕ್ ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್) ಸ್ಕೀಂ ಅಥವಾ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಸ್ಕೀಂ ಅಥವಾ ವಿಶೇಷ ಆರ್ಥಿಕ ವಲಯದಡಿ ಸ್ಥಾಪಿಸಬಹುದಾಗಿದೆ.

ಹೆಚ್) **ಅರ್ಹ ಸ್ಥಿರಾಸ್ತಿಗಳ ಮೌಲ್ಯ (ವಿಎಫ್‌ಎ)**

ಸ್ಥಿರಾಸ್ತಿಗಳೆಂದರೆ ಭೂಮಿ, ಕಟ್ಟಡ, ಕಾರ್ಯಾಗಾರ ಹಾಗೂ ಯಂತ್ರೋಪಕರಣ ಮತ್ತು ಉತ್ಪಾದನಾ ಉದ್ದೇಶಗಳಿಗಾಗಿ ನೇರವಾಗಿ ಸಂಬಂಧಪಟ್ಟ ಟೂಲ್‌ಗಳು, ಜಿಗ್‌ಗಳು ಮತ್ತು ಉಪಕರಣಗಳು, ಡೈಗಳು, ಬಾಯ್ಲರ್‌ಗಳು, ಕಂಪ್ರೆಸರ್‌ಗಳು, ಡೀಸೆಲ್ ಜನರೇಟಿಂಗ್ ಸೆಟ್‌ಗಳು, ಕ್ರೇನ್‌ಗಳು, ಸಾಮಗ್ರಿ ನಿರ್ವಹಣಾ ಸಲಕರಣೆಗಳು ಮುಂತಾದ ಉಪಯುಕ್ತ ಹಾಗೂ ಇತರ ಉಪಕರಣಗಳ ಮೇಲೆ ಮಾಡಲಾದ ಒಟ್ಟಾರೆ ಬಂಡವಾಳವಾಗಿದೆ.

ಐ) **ಎಸ್‌ಸಿ/ಎಸ್‌ಟಿ ಉದ್ಯಮಶೀಲರು ಹೂಡುವ ಘಟಕಗಳು:**

ಅಂದರೆ, ಮಾಲಿಕತ್ವ ಸಂಸ್ಥೆಯಾಗಿ ಅಥವಾ ಪಾಲುಗಾರಿಕೆ ಸಂಸ್ಥೆ/ ಸಹಕಾರಿ ಸಂಸ್ಥೆ/ ಖಾಸಗಿ ಸಂಸ್ಥೆಯ ಕಂಪನಿಗಳಲ್ಲಿ ಎಲ್ಲಾ ಪಾಲುದಾರರು ಅಥವಾ ನಿರ್ದೇಶಕರು ಎಸ್‌ಸಿ/ಎಸ್‌ಟಿ ಆಗಿದ್ದಲ್ಲಿ, ಅಥವಾ ಎಸ್‌ಸಿ/ಎಸ್‌ಟಿ ಸಮುದಾಯಕ್ಕೆ ಸೇರಿದ ಉದ್ಯಮಶೀಲರ ಯಾವುದೇ ಕಾನೂನುಬದ್ಧ ಘಟಕಗಳು.

ಜೆ) **ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರು ಹೂಡುವ ಘಟಕಗಳು**

ಅಂದರೆ, ಮಾಲಿಕತ್ವ ಸಂಸ್ಥೆಯಾಗಿ ಅಥವಾ ಪಾಲುಗಾರಿಕೆ ಸಂಸ್ಥೆ/ ಸಹಕಾರಿ ಸಂಸ್ಥೆ/ ಖಾಸಗಿ ಸಂಸ್ಥೆಯ ಕಂಪನಿಗಳಲ್ಲಿ ಎಲ್ಲಾ ಪಾಲುದಾರರು ಅಥವಾ ನಿರ್ದೇಶಕರು ಎಸ್‌ಸಿ/ಎಸ್‌ಟಿ ಮಹಿಳೆಯರಾಗಿದ್ದಲ್ಲಿ, ಅಥವಾ ಎಸ್‌ಸಿ/ಎಸ್‌ಟಿ ಸಮುದಾಯಕ್ಕೆ ಸೇರಿದ ಮಹಿಳಾ ಉದ್ಯಮಶೀಲರು ಸ್ಥಾಪಿಸಿದ ಯಾವುದೇ ಕಾನೂನುಬದ್ಧ ಘಟಕಗಳು.

**ಕೆ) ಮಹಿಳಾ ಉದ್ಯಮಶೀಲರು ಹೂಡುವ ಘಟಕಗಳು**

ಅಂದರೆ, ಏಕಮಾಲಿಕತ್ವ ಸಂಸ್ಥೆಯಾಗಿ ಅಥವಾ ಪಾಲುಗಾರಿಕೆ ಸಂಸ್ಥೆ/ಸಹಕಾರಿ ಸಂಸ್ಥೆ/ಖಾಸಗಿ ಸಂಸ್ಥೆಯ ಕಂಪನಿಗಳಲ್ಲಿ ಎಲ್ಲಾ ಪಾಲುದಾರರು ಅಥವಾ ನಿರ್ದೇಶಕರು ಮಹಿಳೆಯರಾಗಿದ್ದಲ್ಲಿ ಅಥವಾ ಮಹಿಳಾ ಉದ್ಯಮಶೀಲರು ಸ್ಥಾಪಿಸಿದ ಇತರ ಯಾವುದೇ ಕಾನೂನುಬದ್ಧ ಘಟಕಗಳು.

**ಎಲ್) ಅಲ್ಪಸಂಖ್ಯಾತ ಉದ್ಯಮಶೀಲರು ಹೂಡುವ ಘಟಕಗಳು**

ಅಂದರೆ, ಏಕಮಾಲಿಕತ್ವ ಸಂಸ್ಥೆಯಾಗಿ ಅಥವಾ ಪಾಲುಗಾರಿಕೆ ಸಂಸ್ಥೆ/ಸಹಕಾರಿ ಸಂಸ್ಥೆ/ಖಾಸಗಿ ಸಂಸ್ಥೆಯ ಕಂಪನಿಗಳಲ್ಲಿ ಎಲ್ಲಾ ಪಾಲುದಾರರು ಅಥವಾ ನಿರ್ದೇಶಕರು ಅಲ್ಪಸಂಖ್ಯಾತರಾಗಿದ್ದಲ್ಲಿ ಅಥವಾ ಅಲ್ಪಸಂಖ್ಯಾತ ಉದ್ಯಮಶೀಲರು ಸ್ಥಾಪಿಸಿದ ಇತರ ಯಾವುದೇ ಕಾನೂನುಬದ್ಧ ಘಟಕಗಳು

**ಎಮ್) ಹಿಂದುಳಿದ ವರ್ಗಗಳು (ವರ್ಗ1 ಮತ್ತು 2ಎ ಮಾತ್ರ) ಹೂಡುವ ಘಟಕಗಳು**

ಅಂದರೆ, ಏಕಮಾಲಿಕತ್ವ ಸಂಸ್ಥೆಯಾಗಿ ಅಥವಾ ಪಾಲುಗಾರಿಕೆ ಸಂಸ್ಥೆ/ಸಹಕಾರಿ ಸಂಸ್ಥೆ/ಖಾಸಗಿ ಸಂಸ್ಥೆಯ ಕಂಪನಿಗಳಲ್ಲಿ ಎಲ್ಲಾ ಪಾಲುದಾರರು ಅಥವಾ ನಿರ್ದೇಶಕರು ಹಿಂದುಳಿದ ವರ್ಗಗಳಿಗೆ (ವರ್ಗ I ಮತ್ತು 2ಎ ಮಾತ್ರ) ಸೇರಿದವರಾಗಿದ್ದಲ್ಲಿ ಅಥವಾ ಇತರ ಯಾವುದೇ ಕಾನೂನು ಬದ್ಧ ಘಟಕವಾಗಿ ಹಿಂದುಳಿದ ವರ್ಗಗಳಿಗೆ (ವರ್ಗ I ಮತ್ತು 2ಎ ಮಾತ್ರ) ಸೇರಿದವರು, ಕರ್ನಾಟಕ ಸರ್ಕಾರ ಕಾಲ ಕಾಲಕ್ಕೆ ನೀಡುವ ಪ್ರಕಟಣೆಯಲ್ಲಿ ಒಳಪಟ್ಟದಲ್ಲಿ, ಇಂತಹ ಘಟಕಗಳು.

**ಎನ್) ಅಂಗವಿಕಲ ಉದ್ಯಮಶೀಲರು ಹೂಡುವ ಘಟಕಗಳು**

ಅಂದರೆ, ಏಕಮಾಲಿಕತ್ವ ಸಂಸ್ಥೆಯಾಗಿ ಅಥವಾ ಪಾಲುಗಾರಿಕೆ ಸಂಸ್ಥೆ/ಸಹಕಾರಿ ಸಂಸ್ಥೆ/ಖಾಸಗಿ ಸಂಸ್ಥೆಯ ಕಂಪನಿಗಳಲ್ಲಿ ಎಲ್ಲಾ ಪಾಲುದಾರರು ಅಥವಾ ನಿರ್ದೇಶಕರು ಅಂಗವಿಕಲರಾಗಿದ್ದಲ್ಲಿ, ಅಥವಾ ಇತರ ಯಾವುದೇ ಕಾನೂನುಬದ್ಧ ಘಟಕವಾಗಿ ಅಂಗವಿಕಲ ಉದ್ಯಮಶೀಲರು ವಿಶೇಷವಾಗಿ ಸ್ಥಾಪಿಸಿದ ಘಟಕ/ಗಳು.

**ಒ) ಮಾಜಿ ಯೋಧ – ಉದ್ಯಮಶೀಲರು ಹೂಡುವ ಘಟಕಗಳು**

ಅಂದರೆ, ಏಕಮಾಲಿಕತ್ವ ಸಂಸ್ಥೆಯಾಗಿ ಅಥವಾ ಪಾಲುಗಾರಿಕೆ ಸಂಸ್ಥೆ/ಸಹಕಾರಿ ಸಂಸ್ಥೆ/ಖಾಸಗಿ ಸಂಸ್ಥೆಯ ಕಂಪನಿಗಳಲ್ಲಿ ಎಲ್ಲಾ ಪಾಲುದಾರರು ಅಥವಾ ನಿರ್ದೇಶಕರು ಮಾಜಿ ಯೋಧರಾಗಿದ್ದಲ್ಲಿ, ಅಥವಾ ಇತರ ಯಾವುದೇ ಕಾನೂನುಬದ್ಧ ಘಟಕವಾಗಿ ಮಾಜಿ ಯೋಧ – ಉದ್ಯಮಶೀಲರು ವಿಶೇಷವಾಗಿ ಸ್ಥಾಪಿಸಿದ ಘಟಕ/ಗಳು.

**ಪಿ) ಉದ್ಯೋಗ**

ನೇರ ಉದ್ಯೋಗವೆಂದರೆ ಉತ್ಪಾದನೆ ಕಾರ್ಯದಲ್ಲಿ ನಿರತವಾಗಿರುವ ಗುತ್ತಿಗೆ ಕಾರ್ಮಿಕರು ಒಳಪಟ್ಟಂತೆ ಕಂಪನಿಗಳಲ್ಲಿ ಸಂಬಳಕ್ಕಾಗಿರುವ ಉದ್ಯೋಗಿಗಳು. ಆದರೆ, ಇದರಲ್ಲಿ ದಿನಗೂಲಿ ಒಳಪಟ್ಟಿರುವುದಿಲ್ಲ. ಗುತ್ತಿಗೆ ಕಾರ್ಮಿಕರ ಶೇಕಡಾವಾರು ಪ್ರಮಾಣವು, ಒಟ್ಟಾರೆ ಕಾರ್ಮಿಕ ಬಲದ ಶೇ.30ನ್ನು ಮೀರಿರಕೂಡದು.

**ಕ್ಯೂ) ಆ್ಯಂಕರ್ ಇಂಡಸ್ಟ್ರಿ**

ಯಾವುದೇ ತಾಲ್ಲೂಕಿನಲ್ಲಿ ಕನಿಷ್ಠ 150 ಜನರಿಗೆ ನೇರ ಉದ್ಯೋಗ ಒದಗಿಸಿ ಕನಿಷ್ಠ ರೂ.250 ಕೋಟಿಗಳ ಬಂಡವಾಳ ಹೂಡುವ ಮೊದಲ ಎರಡು ಉತ್ಪಾದನಾ ಉದ್ಯಮಗಳನ್ನು ಆ್ಯಂಕರ್ ಕೈಗಾರಿಕೆಗಳೆಂದು ಕರೆಯಲಾಗುತ್ತದೆ. ಈ ಅರ್ಥ ವಿವರಣೆಯು ಪ್ರಸಕ್ತವಾಗಿ ಈ ರೀತಿಯ ಯಾವುದೇ ಕೈಗಾರಿಕೆ ಅಸ್ತಿತ್ವದಲ್ಲಿ ಇಲ್ಲದ ತಾಲ್ಲೂಕುಗಳಿಗೆ ಅನ್ವಯಿಸುತ್ತದೆ.

**ಆರ್) ಯೋಜನಾ ಅನುಷ್ಠಾನವು ಜಾರಿಗೊಳ್ಳುವ ದಿನಾಂಕ**

ಅಂದರೆ, ಯಾವುದೇ ಘಟಕವು ಕೆಳಗಿನ ಪರಿಣಾಮಕಾರಿ ಕ್ರಮಗಳಲ್ಲಿ ಯಾವುದಾದರೂ ಒಂದು ಕ್ರಮವನ್ನು ತೆಗೆದುಕೊಂಡ ದಿನಾಂಕ ಅಥವಾ ಮುಂಚಿತವಾಗಿ ಯಾವುದು ಸಂಭವಿಸುತ್ತದೆಯೋ ಆ ದಿನಾಂಕ.

1) ನಿವೇಶನಕ್ಕಾಗಿ ಮೇಲಿನ (ಭೂಮಿ ಅಥವಾ ಕಟ್ಟಡ) ಗುತ್ತಿಗೆ ಅಥವಾ ಮಾರಾಟ ಒಪ್ಪಂದಕ್ಕೆ ಸಹಿ ಹಾಕಿದ ದಿನಾಂಕ.
2) ಕೆಐಎಡಿಬಿ/ಕೆಎಸ್ಎಸ್ಐಡಿಸಿ ಅಥವಾ ಇತರ ಯಾವುದೇ ಸಂಸ್ಥೆಯಿಂದ ನಿವೇಶನ/ಶೆಡ್‌ನ ಸ್ವಾಧೀನ ಪ್ರಮಾಣ ಪತ್ರ ಪಡೆದ ದಿನಾಂಕ.
3) ಅರ್ಹ ಅಧಿಕಾರಿ ಕಟ್ಟಡದ ನಕ್ಷೆಯನ್ನು ಅನುಮೋದಿಸಿದ ದಿನಾಂಕ
4) ಹಣಕಾಸು ಸಂಸ್ಥೆ/ಬ್ಯಾಂಕಿನಿಂದ ಸಾಲದ ಮೊದಲ ಕಂತು ಬಿಡುಗಡೆಯಾದ ದಿನಾಂಕ
5) ಕಾರ್ಯಾಗಾರ ಮತ್ತು ಯಂತ್ರೋಪಕರಣ ಖರೀದಿಯ ಮೊದಲ ಬೇಡಿಕೆ ಸಲ್ಲಿಸಿದ ದಿನಾಂಕ

ಎಸ್) **ವಾಣಿಜ್ಯಕ ಉತ್ಪಾದನೆಯ ದಿನಾಂಕ**

ಹೊಸ ಘಟಕ ಅಥವಾ ವಿಸ್ತರಣೆ/ವೈವಿಧ್ಯಕರಣ/ಆಧುನೀಕರಣದ ನಂತರ ಪ್ರಾಯೋಗಿಕ ಉತ್ಪಾದನೆಯ ನಂತರ ನೀಡಲಾಗುವ ಮೊದಲ ಮಾರಾಟ ಇನ್‌ವಾಯ್ಸ್‌ನ ದಿನಾಂಕ

ಟಿ) **ಕ್ಯಾಪ್ಟಿವ್ ಪವರ್ ಪ್ಲಾಂಟ್**

ಅಂದರೆ, ತನ್ನಸ್ವಂತ ಬಳಕೆಗಾಗಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಒಂದು ಘಟಕ ಸ್ಥಾಪಿಸುವ ವಿದ್ಯುತ್ ಸ್ಥಾವರ.

ಯು) **ವಿಸ್ತರಣೆ/ವೈವಿಧ್ಯಕರಣ/ಆಧುನೀಕರಣ**

ಈಗಾಗಲೇ ತಯಾರಿಕೆಯಲ್ಲಿರುವ ಉತ್ಪನ್ನವನ್ನು, ತಂತ್ರಜ್ಞಾನ ನವೀಕರಣದೊಂದಿಗೆ/ಇಲ್ಲದೇ ಅಥವಾ ಹೊಸ ಕಾರ್ಯ ವಿಧಾನದ ಮೂಲಕ ಮತ್ತು/ಅಥವಾ ಸಂಪೂರ್ಣವಾಗಿ ಹೊಸದಾದ ಉತ್ಪನ್ನವನ್ನು ತಯಾರಿಸಲು ತಾನು ಹೊಂದಿರುವ ಸೌಲಭ್ಯಗಳನ್ನು ಬಳಸಿಕೊಂಡು ಅಥವಾ ಒಂದು ಹೊಸ ನಿವೇಶನದಲ್ಲಿ ಅಥವಾ ಪಕ್ಕದ ಖಾಲಿ ಸೈಟಿನಲ್ಲಿ ಚಾಲ್ತಿಯಲ್ಲಿನ ಉದ್ಯಮವು ಸ್ಥಾಪಿಸುವ ಹೊಸ ತಯಾರಿಕಾ ಸೌಲಭ್ಯಗಳನ್ನು ಈ ನೀತಿಯಡಿ ಪ್ರೋತ್ಸಾಹಕಗಳ ಉದ್ದೇಶಕ್ಕಾಗಿ ವಿಸ್ತರಣೆ/ವೈವಿಧ್ಯಕರಣ/ಆಧುನೀಕರಣ ಎಂದು ಪರಿಗಣಿಸಲಾಗುವುದು.

ಇದಲ್ಲದೇ ವಿಸ್ತರಣೆ/ವೈವಿಧ್ಯಕರಣ/ಆಧುನೀಕರಣ ಕಾರ್ಯಕ್ರಮದಡಿ ಪ್ರೋತ್ಸಾಹಗಳಿಗಾಗಿ ಅರ್ಹವಾಗುವ ಸಂಸ್ಥೆಯು ಸ್ಥಾಪಿತ ಸಾಮರ್ಥ್ಯವನ್ನು ಮೂಲ ಉತ್ಪಾದನಾ ಗಾತ್ರ/ಉದ್ಯಮದ ಮೌಲ್ಯದ ಕನಿಷ್ಠ 25%ರಷ್ಟು ಹೆಚ್ಚಿಸಬೇಕು ಹಾಗೂ ಪ್ರಸಕ್ತ ಘಟಕದ ಮೂಲ ಸ್ಥಿರ ಬಂಡವಾಳದ ಕನಿಷ್ಠ 25%ರಷ್ಟು ಹೆಚ್ಚುವರಿ ಬಂಡವಾಳವನ್ನು ಹೂಡಬೇಕು. (ಮೂಲ ಸ್ಥಿರ ಬಂಡವಾಳವೆಂದರೆ, ಆರಂಭಿಕ ಬಂಡವಾಳಕ್ಕಾಗಿ ನೀಡಿದ ಮೊದಲ ಮಾರಾಟ ಇನ್‌ವಾಯ್ಸ್‌ಗೆ ಮುಂಚಿತ ಬಂಡವಾಳ).

ವಿ) **ವಿಸ್ತರಣೆ/ವೈವಿಧ್ಯಕರಣ/ಆಧುನೀಕರಣ ಕಾರ್ಯಕ್ರಮದಡಿ ತೆರಿಗೆ ಸಂಬಂಧಿತ ಪ್ರೋತ್ಸಾಹಕಗಳಿಗಾಗಿ ಅರ್ಹವಾಗುವ ಅಂಶಗಳು:**

ವಿಸ್ತರಣೆ/ವೈವಿಧ್ಯಕರಣ/ಆಧುನೀಕರಣ ಕಾರ್ಯಕ್ರಮದಡಿ ತೆರಿಗೆ ಸಂಬಂಧಿತ ರಿಯಾಯಿತಿಗಳ ಪ್ರಮಾಣವನ್ನು ನಿರ್ಧರಿಸಲು, ಕಳೆದ 3 ವರ್ಷಗಳ ಸರಾಸರಿ ತೆರಿಗೆಯನ್ನು ಮೀರಿದ ಹೆಚ್ಚುವರಿ ಉತ್ಪಾದನೆ/ಮೌಲ್ಯವರ್ಧನೆಯನ್ನು ತೆರಿಗೆಯ ಆಧಾರವಾಗಿ ಪರಿಗಣಿಸಲಾಗುವುದು ಮತ್ತು ತೆರಿಗೆ ಸಂಬಂಧಿತ ಪ್ರೋತ್ಸಾಹಕವನ್ನು ಇದಕ್ಕೆ ಒದಗಿಸಲಾಗುವುದು.

> ''ಪ್ರೋತ್ಸಾಹಕವು, ಕೆಳಗಿನ ಎರಡು ನಿಲುವುಗಳ ಪೈಕಿಯ ಒಂದರ ಮೇಲೆ ಆಧಾರವಾಗಿರುತ್ತದೆ ಮತ್ತು ಇದರ ಪ್ರಮಾಣವನ್ನು ಉದ್ಯಮದ ಉತ್ಪನ್ನಗಳ ಸ್ವರೂಪದ ರೀತ್ಯ ಪ್ರೋತ್ಸಾಹಕ ಪ್ಯಾಕೇಜಿನ ಅನುಮೋದನೆಯ ಸಮಯದಲ್ಲಿ ಆಯ್ಕೆ ಮಾಡಲಾಗುವುದು.
>
> i) **ನಿಲುವು 1 :** ಪ್ರೋತ್ಸಾಹವನ್ನು, ವಿಸ್ತರಣೆಗೆ ಮೊದಲಿನ 3 ವರ್ಷಗಳ ಅವಧಿಯಲ್ಲಿನ ಸರಾಸರಿ ನಿವ್ವಳ ತೆರಿಗೆ ಹೊಣೆಯನ್ನು ಮೀರಿ, ಪ್ರೋತ್ಸಾಹಕದ ಅವಧಿಯಲ್ಲಿ ಡಬ್ಲ್ಯೂಪಿಐದಲ್ಲಿ ಸೂಚ್ಯಾಂಕಗೊಂಡಿರುವ ಲೆಕ್ಕದ ಪ್ರಕಾರ ಒದಗಿಸಲಾಗುತ್ತದೆ.
>
> ii) **ನಿಲುವು 2 :** ವಿಸ್ತರಣೆಗೆ ಮೊದಲಿನ ಮಾರಾಟವಾಗುವ ಪ್ರಮಾಣಗಳ ಮೇಲಿನ ತೆರಿಗೆ ಹೊಣೆಗೆ ಮಿತಿ ಹಾಕಲಾಗುತ್ತದೆ ಮತ್ತು ಪ್ರೋತ್ಸಾಹಕವನ್ನು ಈ ಮಿತಿ ದಾಟಿದ ತೆರಿಗೆಗೆ ಸಂಬಂಧಪಟ್ಟಂತೆ ನೀಡಲಾಗುತ್ತದೆ''.

ಆದರೆ, ವಿಸ್ತರಣೆ/ವೈವಿಧ್ಯಕರಣ/ಆಧುನೀಕರಣ ಉದ್ಯಮಗಳ ಬಂಡವಾಳ ಪ್ರೋತ್ಸಾಹಕ ಸಹಾಯಧನವನ್ನು ಲೆಕ್ಕ ಹಾಕುವಲ್ಲಿ ಈಗಾಗಲೇ ವಿಸ್ತರಣೆ/ವೈವಿಧ್ಯಕರಣ/ಆಧುನೀಕರಣಕ್ಕಾಗಿ ಹೂಡಿದ್ದ ಮೂಲ ಬಂಡವಾಳವನ್ನು ಅರ್ಹ ಸಹಾಯಧನಕ್ಕಾಗಿ ಲೆಕ್ಕ ಹಾಕಲಾಗುವುದಿಲ್ಲ

# ಪ್ರಮುಖ ಸಂಪರ್ಕ ವಿಳಾಸಗಳು

**ಅನುಬಂಧ-6**

| ಕ್ರ. ಸಂ. | ಸಂಪರ್ಕ ವಿಳಾಸಗಳು | ಕ್ರ. ಸಂ. | ಸಂಪರ್ಕ ವಿಳಾಸಗಳು |
|---|---|---|---|
| 1. | **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ**<br>**ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ**<br>ಕೊಠಡಿ ಸಂಖ್ಯೆ 106, 1ನೇ ಮಹಡಿ, ವಿಕಾಸ ಸೌಧ,<br>ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು – 560 001.<br>ದೂರವಾಣಿ : 2225 2443, ಫ್ಯಾಕ್ಸ್ : 2225 9870<br>ಇ-ಮೇಲ್ : prs-ci@karnataka.gov.in, acscikar@gmail.com<br>ವೆಬ್‌ಸೈಟ್ : www.karnatakaindustry.gov.in | 7. | **ಜವಳಿ ಅಭಿವೃದ್ಧಿ ಆಯುಕ್ತರು ಮತ್ತು ನಿರ್ದೇಶಕರು**<br>**ಕೈಮಗ್ಗ ಮತ್ತು ಜವಳಿ**<br>ನಂ. 14/3ಎ, 3ನೇ ಮಹಡಿ, ರಾಷ್ಟ್ರೋತ್ಥಾನ ಪರಿಷತ್ ಕಟ್ಟಡ<br>ನೃಪತುಂಗ ರಸ್ತೆ, ಬೆಂಗಳೂರು<br>ದೂರವಾಣಿ : 080-2227 1628, ಫ್ಯಾಕ್ಸ್ : 080-2222 6082<br>ಇ-ಮೇಲ್ : texcomgok@yahoo.co.in<br>ವೆಬ್‌ಸೈಟ್ : www.textiles.kar.nic.in |
| 2. | **ಸರ್ಕಾರದ ಕಾರ್ಯದರ್ಶಿ**<br>**(ಎಸ್‌ಎಸ್‌ಐ, ಗಣಿಗಳು, ಜವಳಿ ಮತ್ತು ಸಕ್ಕರೆ)**<br>ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ<br>ಕೊಠಡಿ ಸಂಖ್ಯೆ 135, 1ನೇ ಮಹಡಿ, ವಿಕಾಸ ಸೌಧ,<br>ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು – 560 001.<br>ದೂರವಾಣಿ : 2203 4235 ಫ್ಯಾಕ್ಸ್ : 2235 6381<br>ಇ-ಮೇಲ್ : secymines-ci@karnataka.gov.in<br>ವೆಬ್‌ಸೈಟ್ : www.karnatakaindustry.gov.in | 8. | **ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ**<br>ನಂ. 49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 01.<br>ದೂರವಾಣಿ : 080-2226 9632, 2226 9633<br>ಫ್ಯಾಕ್ಸ್ : 080-2226 9632<br>ಇ-ಮೇಲ್ : director@blr.vsnl.com<br>ವೆಬ್‌ಸೈಟ್ : www.mines.kar.nic.in |
| 3. | **ಸರ್ಕಾರದ ಪ್ರಧಾನ ಕಾರ್ಯದರ್ಶಿ**<br>**ಐಟಿ ಮತ್ತು ಬಿಟಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ**<br>ಕರ್ನಾಟಕ ಸರ್ಕಾರ, 6ನೇ ಮಹಡಿ, 5ನೇ ಹಂತ,<br>ಬಹುಮಹಡಿ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ,<br>ಬೆಂಗಳೂರು – 560 001.<br>ದೂರವಾಣಿ : 080-2228 0562, 2203 2434<br>ಫ್ಯಾಕ್ಸ್ : 080-2228 8340, 2226 2450<br>ಇ-ಮೇಲ್ : itsec@bangaloreitbt.in<br>ವೆಬ್‌ಸೈಟ್ : www.bangaloreitbit.in | 9. | **ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ**<br>ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ,<br>ಬೆಂಗಳೂರು – 560 020.<br>ದೂರವಾಣಿ : 080-2336 0843 ಫ್ಯಾಕ್ಸ್ : 080-2334 5799<br>ಇ-ಮೇಲ್ : com@bdabangalore.org<br>ವೆಬ್‌ಸೈಟ್ : www.bdabangalore.org |
| 4. | **ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ**<br>ವಿಕಾಸ ಸೌಧ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ,<br>ಬೆಂಗಳೂರು – 560 001.<br>ದೂರವಾಣಿ : 080-2225 5524, 2225 5306<br>ಫ್ಯಾಕ್ಸ್ : 080-2254 2753<br>ಇ-ಮೇಲ್ : secyirr@secretriat2.kar.nic.in<br>ವೆಬ್‌ಸೈಟ್ : http://waterresources.kar.nic.in | 10. | **ಆಯುಕ್ತರು, ಬೆಂಗಳೂರು ಮೆಟ್ರೋಪಾಲಿಟನ್ ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಬಿಎಂಆರ್‌ಡಿಎ)**<br>ನಂ. 1, ಅಲಿ ಅಸ್ಕರ್ ರಸ್ತೆ, ಬೆಂಗಳೂರು – 560 052.<br>ಇ-ಮೇಲ್ : mc_bmrda@kar.ni.in<br>ವೆಬ್‌ಸೈಟ್ : www.bmrda.kar.nic.in |
| 5. | **ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ**<br>**ಅರಣ್ಯ ಪರಿಸರ ಮತ್ತು ಪರಿಸರ ವಿಜ್ಞಾನ ಇಲಾಖೆ,**<br>ಕೊಠಡಿ ಸಂಖ್ಯೆ 708, ದ್ವಾರ 2, ಬಹುಮಹಡಿ ಕಟ್ಟಡ,<br>ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001.<br>ದೂರವಾಣಿ : 080-2225 4377, 2209 2445<br>ಫ್ಯಾಕ್ಸ್ : 080-2225 4377<br>ಇ-ಮೇಲ್ : secyenv-fee@karnataka.gov.in<br>ವೆಬ್‌ಸೈಟ್ : www.parisara.kar.nic.in | 11. | **ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು**<br>**ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು**<br>**ಅಭಿವೃದ್ಧಿ ನಿಗಮ ನಿಯಮಿತ**<br>4ನೇ ಮಹಡಿ, ಪೂರ್ವ ದ್ವಾರ, ಖನಿಜ ಭವನ,<br>ಬೆಂಗಳೂರು – 560 001.<br>ದೂರವಾಣಿ : 080-2225 5911 ಫ್ಯಾಕ್ಸ್ : 080-2225 5740<br>ಇ-ಮೇಲ್ : ksiidc@bgl.vsn.net.in<br>ವೆಬ್‌ಸೈಟ್ : www.ksiidc.com |
| 6. | **ಕೈಗಾರಿಕಾ ಅಭಿವೃದ್ಧಿ ಆಯುಕ್ತರು ಹಾಗೂ**<br>**ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ನಿರ್ದೇಶಕರು**<br>2ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ,<br>ಬೆಂಗಳೂರು – 560 001.<br>ದೂರವಾಣಿ : 080-2223 8679 ಫ್ಯಾಕ್ಸ್ : 080-2238 9909<br>ಇ-ಮೇಲ್ : commissioner@karnatakaindustry.gov.in<br>ವೆಬ್‌ಸೈಟ್ : www.karnatakaindustry.gov.in | 12. | **ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು**<br>**ಕಾರ್ಯನಿರ್ವಾಹಕ ಸದಸ್ಯರು,**<br>**ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ,**<br>#1, 3ನೇ ಮಹಡಿ, ಖನಿಜ ಭವನ (ಈಸ್ಟ್ ವಿಂಗ್)<br>#49, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001<br>ದೂರವಾಣಿ: +91 80 41738621<br>ಫ್ಯಾಕ್ಸ್: +91 80 2226 7901<br>ಇ-ಮೇಲ್: ceoemkiadb@gmail.com<br>ವೆಬ್ ಸೈಟ್ : www.kiadb.in |

| ಕ್ರ. ಸಂ. | ಸಂಪರ್ಕ ವಿಳಾಸಗಳು | ಕ್ರ. ಸಂ. | ಸಂಪರ್ಕ ವಿಳಾಸಗಳು |
|---|---|---|---|
| 13. | **ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ**<br>ಕೈಗಾರಿಕಾ ವಸಾಹತು, ರಾಜಾಜಿನಗರ,<br>ಬೆಂಗಳೂರು – 560 010<br>ದೂರವಾಣಿ : 080-2330 3037, 2221 7702 (ಮಂಡಳಿ)<br>ಇ-ಮೇಲ್ : kssidcho@vsnl.com<br>ವೆಬ್‌ಸೈಟ್ : www.kssidc.kar.nic.in | 19. | **ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ**<br>ನಂ. 49, ಪರಿಸರ ಭವನ, ಚರ್ಚ್ ಸ್ಟ್ರೀಟ್,<br>ಬೆಂಗಳೂರು – 560 001.<br>ದೂರವಾಣಿ : 080-2558 8151, 2558 9111, 112, 113<br>ಫ್ಯಾಕ್ಸ್ : 080-2558 6321<br>ಇ-ಮೇಲ್ : kspcb@kar.nic.in<br>ವೆಬ್‌ಸೈಟ್ : www.kspcb.kar.nic.in |
| 14. | **ಕಾರ್ಮಿಕ ಆಯುಕ್ತರು**<br>ಕಾರ್ಮಿಕ ಭವನ", ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 029.<br>ದೂರವಾಣಿ : 080-2653 1252 ಫ್ಯಾಕ್ಸ್ : 080-2653 1254<br>ಇ-ಮೇಲ್ : ico@kar.nic.in<br>ವೆಬ್‌ಸೈಟ್ : http://labour.kar.nic.in | 20. | **ವ್ಯವಸ್ಥಾಪಕ ನಿರ್ದೇಶಕರು,<br>ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ**<br>ನವನಗರ, ಪಿ.ಬಿ. ರಸ್ತೆ, ಹುಬ್ಬಳ್ಳಿ – 580 029.<br>ದೂರವಾಣಿ : 0836-2324811 ಫ್ಯಾಕ್ಸ್ : 0836-2324813<br>ಇ-ಮೇಲ್ : ceehubli@rediffmail.com<br>ವೆಬ್‌ಸೈಟ್ : www.hescom.co.in |
| 15. | **ವ್ಯವಸ್ಥಾಪಕ ನಿರ್ದೇಶಕರು,<br>ವಿಶ್ವೇಶ್ವರಯ್ಯ ಟ್ರೇಡ್ ಪ್ರೊಮೋಷನ್ ಸೆಂಟರ್**<br>3ನೇ ಮಹಡಿ, ವಿಟಿಪಿಸಿ ಕಟ್ಟಡ, ಕಸ್ತೂರ್‌ಬಾ ರಸ್ತೆ,<br>ಬೆಂಗಳೂರು – 560 001.<br>ದೂರವಾಣಿ : 2286 4281/2286 0853<br>ಫ್ಯಾಕ್ಸ್ : 91-80-2286 4281<br>ಗ್ರಾಮ್ಸ್ : VITRO<br>ಇ-ಮೇಲ್ : vtpckarnataka@gmail.com<br>ವೆಬ್‌ಸೈಟ್ : www.vitcblr.org | 21. | **ವ್ಯವಸ್ಥಾಪಕ ನಿರ್ದೇಶಕರು,<br>ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಜೆಸ್ಕಾಂ)**<br>ಕಾರ್ಪೋರೇಟ್ ಕಚೇರಿ, ರೈಲ್ವೆ ಸ್ಟೇಷನ್ ಮುಖ್ಯ ರಸ್ತೆ,<br>ಗುಲ್ಬರ್ಗಾ – 585 102<br>ದೂರವಾಣಿ : 08472-256581 ಫ್ಯಾಕ್ಸ್ : 08472-456842<br>ಇ-ಮೇಲ್ : mdgesco@gmail.com<br>ವೆಬ್‌ಸೈಟ್ : www.gesco.in |
| 16. | **ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ಉದ್ಯೋಗ ಮಿತ್ರ**<br>3ನೇ ಮಹಡಿ, ಸೌತ್ ಬ್ಲಾಕ್, ಖನಿಜ ಭವನ,<br>ರೇಸ್‌ಕೋರ್ಸ್ ರಸ್ತೆ, ಬೆಂಗಳೂರು – 560 001.<br>ದೂರವಾಣಿ : 080-2228 2392 / 5659 / 6632<br>ಫ್ಯಾಕ್ಸ್ : 080-2226 6063<br>ಇ-ಮೇಲ್ : md@kumbangalore.com<br>ವೆಬ್‌ಸೈಟ್ : www.kumbangalore.com | 22. | **ವ್ಯವಸ್ಥಾಪಕ ನಿರ್ದೇಶಕರು,<br>ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಮೆಸ್ಕಾಂ)**<br>ಕಾರ್ಪೋರೇಟ್ ಕಚೇರಿ, ಪ್ಯಾರಡೈಂ ಪ್ಲಾಜಾ, 5ನೇ ಮಹಡಿ,<br>ಎ.ಬಿ. ಶೆಟ್ಟಿ ವೃತ್ತ, ಮಂಗಳೂರು – 575 001.<br>ದೂರವಾಣಿ : 0824-2444300 ಫ್ಯಾಕ್ಸ್ : 0824-2444360<br>ಇ-ಮೇಲ್ : md@mesco.in<br>ವೆಬ್‌ಸೈಟ್ : www.mesco.in |
| 17. | **ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ**<br>ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009.<br>ದೂರವಾಣಿ : 080-2221 4342, 2224 3926<br>ಫ್ಯಾಕ್ಸ್ : 080-2211 0134<br>ಇ-ಮೇಲ್ : md@kptcl.com | 23. | **ವ್ಯವಸ್ಥಾಪಕ ನಿರ್ದೇಶಕರು,<br>ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ (ಸೆಸ್ಕಾಂ)**<br>ನಂ. 927, ಎಲ್ ಜೆ ಅವೆನ್ಯೂ, ಸರಸ್ವತಿಪುರಂ<br>ಮೈಸೂರು – 570 009.<br>ದೂರವಾಣಿ : 0821-2417101 ಫ್ಯಾಕ್ಸ್ : 0821-2417107<br>ಇ-ಮೇಲ್ : mdcescmys@rediffmail.com |
| 18. | **ವ್ಯವಸ್ಥಾಪಕ ನಿರ್ದೇಶಕರು,<br>ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ)**<br>ಕಾರ್ಪೋರೇಟ್ ಕಚೇರಿ, ಕೆ.ಆರ್. ವೃತ್ತ,<br>ಬೆಂಗಳೂರು – 560 001.<br>ದೂರವಾಣಿ : 080-2235 4929 ಫ್ಯಾಕ್ಸ್ : 080-2235 4925<br>ಇ-ಮೇಲ್ : mdbescom@bescom.org<br>ವೆಬ್‌ಸೈಟ್ : www.bescom.org | 23. | **ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ರಾಜ್ಯ ಹಣಕಾಸು ನಿಗಮ**<br>ನಂ.ಮ, ತಿಮ್ಮಯ್ಯ ರಸ್ತೆ,<br>ಬೆಂಗಳುರು – 5560 052<br>ದೂರವಾಣಿ : 080 22263322<br>ಫ್ಯಾಕ್ಸ್ : 22250126 / 22250136<br>ಇ-ಮೇಲ್ : info@ksfc.in ವೆಬ್‌ಸೈಟ್ : www.ksfc.in |

ಜಿಲ್ಲಾ ಕೈಗಾರಿಕಾ ಕೇಂದ್ರಗಳ ಜಂಟಿ ನಿರ್ದೇಶಕರು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರ ಸಂಪರ್ಕ ವಿವರಗಳು

| ಕ್ರ. ಸಂ. | ಜಿಲ್ಲೆ | ಸಂಪರ್ಕ ವಿವರಗಳು |
|---|---|---|
| 1. | ಬಾಗಲಕೋಟೆ | ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ<br>ಕೊಠಡಿ ಸಂಖ್ಯೆ 135, ಆಡಳಿತ ಕಟ್ಟಡ,<br>ನವನಗರ, ಬಾಗಲಕೋಟೆ – 587 101.<br>ದೂರವಾಣಿ : ಕಚೇರಿ : 08354- 235294/235245, ಫ್ಯಾಕ್ಸ್ : 235294<br>ಇ-ಮೇಲ್ : jd-bagalkote@karnatakaindustry.gov.in |
| 2. | ಬೆಂಗಳೂರು (ಗ್ರಾ) | ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ<br>ರಾಜಾಜಿನಗರ ಕೈಗಾರಿಕಾ ವಸಾಹತು, ವೆಸ್ಟ್ ಆಫ್ ಕಾರ್ಡ್ ರೋಡ್,<br>ಬೆಂಗಳೂರು – 560 044.<br>ದೂರವಾಣಿ : ಕಚೇರಿ : 080 - 23145216/23142151/23142152, ಫ್ಯಾಕ್ಸ್: 23145216<br>ಇ-ಮೇಲ್ : jd-bang-r@karnatakaindustry.gov.in |
| 3. | ಬೆಂಗಳೂರು (ನ) | ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ,<br>ರಾಜಾಜಿನಗರ ಕೈಗಾರಿಕಾ ವಸಾಹತು, ವೆಸ್ಟ್ ಆಫ್ ಕಾರ್ಡ್ ರೋಡ್,<br>ಬೆಂಗಳೂರು – 560 044.ದೂರವಾಣಿ : ಕಚೇರಿ : 080-22243125/22227635/22222633,<br>ಫ್ಯಾಕ್ಸ್ : 22243125 ಇ-ಮೇಲ್ : jd-bang-u@karnatakaindustry.gov.in |
| 4. | ಬೆಳಗಾವಿ | ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ<br>ಉದ್ಯಂಬಾಗ್, ಬೆಳಗಾವಿ – 590 008.<br>ದೂರವಾಣಿ : ಕಚೇರಿ : 2440430/2440852 ಫ್ಯಾಕ್ಸ್: 2441209<br>ಇ-ಮೇಲ್ : jd-belgaum@karnatakaindustry.gov.in |
| 5. | ಬಳ್ಳಾರಿ | ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ<br>ಹೊಸಪೇಟೆ ರಸ್ತೆ, ಬಳ್ಳಾರಿ – 583 103.<br>ದೂರವಾಣಿ : ಕಚೇರಿ : 08392 242370/242643/242369, ಫ್ಯಾಕ್ಸ್: 242370<br>ಇ-ಮೇಲ್ : jd-bellary@karnatakaindustry.gov.in |
| 6. | ಬೀದರ್ | ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ<br>ಬುಡಾ ಕಚೇರಿ ಪಕ್ಕ, ನೌಬಾದ್, ಬೀದರ್ – 585 401.<br>ದೂರವಾಣಿ : 08482 / 232769 / 233129<br>ಇ-ಮೇಲ್ : jd-bidar@karnatakaindustry.gov.in |
| 7. | ಬಿಜಾಪುರ | ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ<br>ಕೇಂದ್ರ ಕೈಗಾರಿಕಾ ವಸಾಹತು, ಸ್ಟೇಷನ್ ಹಿಂಭಾಗ ರಸ್ತೆ,<br>ಸಿಯಾರ ಖಾನಾ, ಬಿಜಾಪುರ – 586 101.<br>ದೂರವಾಣಿ : ಕಚೇರಿ : 08352-250976/257125 ಫ್ಯಾಕ್ಸ್: 250607<br>ಇ-ಮೇಲ್ : jd-bijapur@karnatakaindustry.gov.in |
| 8. | ಚಾಮರಾಜನಗರ | ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ<br>ಕೊಠಡಿ ಸಂಖ್ಯೆ 323, 3ನೇ ಮಹಡಿ, ಜಿಲ್ಲಾ ಕಚೇರಿ ಸಂಕೀರ್ಣ,<br>ಬಿ. ರಾಚಯ್ಯ ಡಬಲ್ ರಸ್ತೆ, ಚಾಮರಾಜನಗರ – 571 313.<br>ದೂರವಾಣಿ : ಕಚೇರಿ : 08226-224916/224915, ಫ್ಯಾಕ್ಸ್: 224916<br>ಇ-ಮೇಲ್ : jd-cmagalur@karnatakaindustry.gov.in |
| 9. | ಚಿಕ್ಕಮಗಳೂರು | ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ<br>ಜಿಲ್ಲಾ ಪಂಚಾಯತ್ ಹತ್ತಿರ, ಕಡೂರು ರಸ್ತೆ, ಚಿಕ್ಕಮಗಳೂರು – 577 102.<br>ದೂರವಾಣಿ : ಕಚೇರಿ : 08262-220921/220726 ಫ್ಯಾಕ್ಸ್: 220476<br>ಇ-ಮೇಲ್ : jd-cnagar@karnatakaindustry.gov.in |

| ಕ್ರ. ಸಂ. | ಜಿಲ್ಲೆ | ವಿವರಗಳಿಗೆ ಸಂಪರ್ಕಿಸಿ |
|---|---|---|
| 10. | ಚಿಕ್ಕಬಳ್ಳಾಪುರ | ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ<br>ಬಿ.ಬಿ. ರಸ್ತೆ, ಎಪಿಎಂಸಿ ಕಟ್ಟಡ, ಚಿಕ್ಕಬಳ್ಳಾಪುರ – 562 101<br>ದೂರವಾಣಿ : ಕಚೇರಿ : 08156-273303/270571, ಫ್ಯಾಕ್ಸ್ : 273302<br>ಇ–ಮೇಲ್ : jd-cbalapur@karnatakaindustry.gov.in |
| 11. | ಚಿತ್ರದುರ್ಗ | ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ<br>ಜೋಗಿಮಠ್ ರಸ್ತೆ, ಚಿತ್ರದುರ್ಗ – 577 501.<br>ದೂರವಾಣಿ : ಕಚೇರಿ : 08194-235994/235817/235783, ಫ್ಯಾಕ್ಸ್ : 235994<br>ಇ–ಮೇಲ್ : jd-cdurga@karnatakaindustry.gov.in |
| 12. | ಮಂಗಳೂರು | ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ<br>ಯಯ್ಯಾಡಿ, ಮಂಗಳೂರು – 575 008.<br>ದೂರವಾಣಿ : ಕಚೇರಿ : 0824-2212494/2214021, ಫ್ಯಾಕ್ಸ್ : 2212494<br>ಇ–ಮೇಲ್ : jd-mangalore@karnatakaindustry.gov.in |
| 13. | ದಾವಣಗೆರೆ | ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ<br>ಚರ್ಚ್ ಎದುರು, 10ನೇ ಮುಖ್ಯರಸ್ತೆ, ಪಿ.ಜೆ. ಎಕ್ಸ್‌ಟೆನ್ಷನ್, ದಾವಣಗೆರೆ – 577 002.<br>ದೂರವಾಣಿ : ಕಚೇರಿ : 08192-232052/232053/232051 ಫ್ಯಾಕ್ಸ್ : 232053<br>ಇ–ಮೇಲ್ : jd-dvangere@karnatakaindustry.gov.in |
| 14. | ಧಾರವಾಡ | ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ<br>ರಾಯಪುರ, ಧಾರವಾಡ – 580 009.<br>ದೂರವಾಣಿ : ಕಚೇರಿ : 0836-2322986/2322627 ಫ್ಯಾಕ್ಸ್ : 2322627<br>ಇ–ಮೇಲ್ : jd-dharwad@karnatakaindustry.gov.in |
| 15. | ಗದಗ | ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ<br>ಜಿಲ್ಲಾ ಆಡಳಿತ ಕಟ್ಟಡ, 2ನೇ ಮಹಡಿ,<br>ಕೊಠಡಿ ಸಂಖ್ಯೆ 221, ಹುಬ್ಬಳ್ಳಿ ರಸ್ತೆ, ಗದಗ – 582 103.<br>ದೂರವಾಣಿ : ಕಚೇರಿ : 08372-230771/23139 ಫ್ಯಾಕ್ಸ್ : 230429<br>ಇ–ಮೇಲ್ : jd-gadag@karnatakaindustry.gov.in |
| 16. | ಗುಲ್ಬರ್ಗಾ | ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ<br>ಎಂ.ಎಸ್.ಕೆ. ಮಿಲ್ ರಸ್ತೆ, ಜೇವರ್ಗಿ ರಸ್ತೆ ಕ್ರಾಸ್,<br>ಗುಲ್ಬರ್ಗಾ – 585 102.<br>ದೂರವಾಣಿ : ಕಚೇರಿ : 08472-223988 ಫ್ಯಾಕ್ಸ್ : 232404<br>ಇ–ಮೇಲ್ : jd-gulbarga@karnatakaindustry.gov.in |
| 17. | ಹಾಸನ | ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ<br>ಕೈಗಾರಿಕಾ ವಸಾಹತು, ಬಿ.ಎಂ. ರಸ್ತೆ, ಹಾಸನ – 573 201.<br>ದೂರವಾಣಿ : ಕಚೇರಿ : 08172-240606/240289, ಫ್ಯಾಕ್ಸ್ : 240289<br>ಇ–ಮೇಲ್ : jd-hassan@karnatakaindustry.gov.in |
| 18. | ಹಾವೇರಿ | ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ<br>ಕೊಠಡಿ ಸಂಖ್ಯೆ 24, 'ಬಿ' ಬ್ಲಾಕ್, ಜಿಲ್ಲಾ ಆಡಳಿತ ಕಟ್ಟಡ,<br>ದೇವಗಿರಿ, ಹಾವೇರಿ – 581 110.<br>ದೂರವಾಣಿ : ಕಚೇರಿ : 08375-249028/249029 ಫ್ಯಾಕ್ಸ್ : 249028<br>ಇ–ಮೇಲ್ : jd-haveri@karnatakaindustry.gov.in |
| 19. | ಮಡಿಕೇರಿ | ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ<br>ಕೊಹಿನೂರು ರಸ್ತೆ, ಕೈಗಾರಿಕಾ ವಸಾಹತು, ಮಡಿಕೇರಿ – 571 121.<br>ದೂರವಾಣಿ : ಕಚೇರಿ : 08272-228746/228748/228431 ಫ್ಯಾಕ್ಸ್ : 228746<br>ಇ–ಮೇಲ್ : jd-kodagu@karnatak aindustry.gov.in |

| ಕ್ರ. ಸಂ. | ಜಿಲ್ಲೆ | ವಿವರಗಳಿಗೆ ಸಂಪರ್ಕಿಸಿ |
|---|---|---|
| 20. | ಕೋಲಾರ | **ಜಂಟಿ ನಿರ್ದೇಶಕರು,** ಜಿಲ್ಲಾ ಕೈಗಾರಿಕಾ ಕೇಂದ್ರ<br>ಡಿಸಿ ಕಚೇರಿ ಕಾಂಪೌಂಡ್, ಕೋಲಾರ – 563 101.<br>ದೂರವಾಣಿ : ಕಚೇರಿ : 08152-222402/222403 ಫ್ಯಾಕ್ಸ್ : 224920<br>ಇ–ಮೇಲ್ : jd-kolar@karnatakaindustry.gov.in |
| 21. | ಕೊಪ್ಪಳ | **ಜಂಟಿ ನಿರ್ದೇಶಕರು,** ಜಿಲ್ಲಾ ಕೈಗಾರಿಕಾ ಕೇಂದ್ರ<br>ಮಯೂರ ಹೋಟೆಲ್ ಎದುರು, ಹೊಸಪೇಟೆ ರಸ್ತೆ, ಕೊಪ್ಪಳ – 583 231.<br>ದೂರವಾಣಿ : ಕಚೇರಿ : 08539-231101 ಫ್ಯಾಕ್ಸ್ : 231548<br>ಇ–ಮೇಲ್ : jd-koppal@karnatakaindustry.gov.in |
| 22. | ಮಂಡ್ಯ | **ಜಂಟಿ ನಿರ್ದೇಶಕರು,** ಜಿಲ್ಲಾ ಕೈಗಾರಿಕಾ ಕೇಂದ್ರ<br>ಕೆಎಸ್ಎಫ್‌ಸಿ ಹತ್ತಿರ, ಸುಭಾಷ್‌ನಗರ, ಮಂಡ್ಯ – 571 401.<br>ದೂರವಾಣಿ : ಕಚೇರಿ : 08232-224098/221358 ಫ್ಯಾಕ್ಸ್ : 226964<br>ಇ–ಮೇಲ್ : jd-mandya@karnatakaindustry.gov.in |
| 23. | ಮೈಸೂರು | **ಜಂಟಿ ನಿರ್ದೇಶಕರು,** ಜಿಲ್ಲಾ ಕೈಗಾರಿಕಾ ಕೇಂದ್ರ<br>ಸಿಟಿಐ ಕಟ್ಟಡ, ಸಯ್ಯಾಜಿ ರಾವ್ ರಸ್ತೆ, ಮೈಸೂರು – 570 001.<br>ದೂರವಾಣಿ : ಕಚೇರಿ : 0821-2446885/2449810 ಫ್ಯಾಕ್ಸ್ : 2446885<br>ಇ–ಮೇಲ್ : jd-mysore@karnatakaindustry.gov.in |
| 24. | ರಾಯಚೂರು | **ಜಂಟಿ ನಿರ್ದೇಶಕರು,** ಜಿಲ್ಲಾ ಕೈಗಾರಿಕಾ ಕೇಂದ್ರ<br>ಹೈದರಾಬಾದ್ ರಸ್ತೆ, ರಾಯಚೂರು – 584 101.<br>ದೂರವಾಣಿ : ಕಚೇರಿ : 08532-235646 ಫ್ಯಾಕ್ಸ್ : 235811<br>ಇ–ಮೇಲ್ : jd-raichur@karnatakaindustry.gov.in |
| 25. | ರಾಮನಗರ | **ಜಂಟಿ ನಿರ್ದೇಶಕರು,** ಜಿಲ್ಲಾ ಕೈಗಾರಿಕಾ ಕೇಂದ್ರ<br>ಕೈಗಾರಿಕಾ ಪ್ರದೇಶ, ರಾಮನಗರ – 571 511.<br>ದೂರವಾಣಿ : 080-7273008, ಫ್ಯಾಕ್ಸ್ : 7273007<br>ಇ–ಮೇಲ್ : jd-ramanagara@karnatakaindustry.gov.in |
| 26. | ಶಿವಮೊಗ್ಗ | **ಜಂಟಿ ನಿರ್ದೇಶಕರು,** ಜಿಲ್ಲಾ ಕೈಗಾರಿಕಾ ಕೇಂದ್ರ<br>ನೆಹರು ರಸ್ತೆ, ಶಿವಮೊಗ್ಗ – 577 201.<br>ದೂರವಾಣಿ : ಕಚೇರಿ : 08182-278302/222802 ಫ್ಯಾಕ್ಸ್ : 277522<br>ಇ–ಮೇಲ್ : jd-shimoga@karnatakaindustry.gov.in |
| 27 | ತುಮಕೂರು | **ಜಂಟಿ ನಿರ್ದೇಶಕರು,** ಜಿಲ್ಲಾ ಕೈಗಾರಿಕಾ ಕೇಂದ್ರ<br>ಕೈಗಾರಿಕಾ ವಸಾಹತು, ಬಿ.ಹೆಚ್. ರಸ್ತೆ, ತುಮಕೂರು – 572 102.<br>ದೂರವಾಣಿ : ಕಚೇರಿ : 0816-2280741/2281485 ಫ್ಯಾಕ್ಸ್ : 2281562<br>ಇ–ಮೇಲ್ : jd-tumkur@karnatakaindustry.gov.in |
| 28. | ಉಡುಪಿ | **ಜಂಟಿ ನಿರ್ದೇಶಕರು,** ಜಿಲ್ಲಾ ಕೈಗಾರಿಕಾ ಕೇಂದ್ರ<br>ಪಿಪಿಸಿ ರಸ್ತೆ, ಜಯಲಕ್ಷ್ಮಿ ಕಟ್ಟಡ, ಕಲ್ಸಂಕ, ಉಡುಪಿ – 576 101.<br>ದೂರವಾಣಿ : ಕಚೇರಿ : 0820-2534338/2522605/2531915 ಫ್ಯಾಕ್ಸ್ : 2534338,<br>ಇ–ಮೇಲ್ : jd-udupi@karnatakaindustry.gov.in |
| 29. | ಕಾರವಾರ | **ಜಂಟಿ ನಿರ್ದೇಶಕರು,** ಜಿಲ್ಲಾ ಕೈಗಾರಿಕಾ ಕೇಂದ್ರ<br>ಶಿರವಾಡ, ಕಾರವಾರ – 581 306.<br>ದೂರವಾಣಿ : ಕಚೇರಿ : 08382-282302/282367 ಫ್ಯಾಕ್ಸ್ : 282302<br>ಇ–ಮೇಲ್ : jd-karwar@karnatakaindustry.gov.in |
| 30. | ಯಾದ್ಗೀರ್ | **ಜಂಟಿ ನಿರ್ದೇಶಕರು,** ಜಿಲ್ಲಾ ಕೈಗಾರಿಕಾ ಕೇಂದ್ರ<br>ಯಾದ್ಗೀರ್<br>ದೂರವಾಣಿ : ಕಚೇರಿ : 088472-223988<br>ಇ–ಮೇಲ್ : jd-yadagiri@karnatakaindustry.gov.in |